ಗುರುವಾರ, ಜೂನ್ 12, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 162 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ರ್‍ಯಾಂಕಿಂಗ್‌ನಲ್ಲಿ ಬಡ್ತಿ

ಭಾರತದ ಎಡಗೈ ಬ್ಯಾಟರ್ ತಿಲಕ್ ವರ್ಮಾ ಅವರು ಬುಧವಾರ ಪ್ರಕಟವಾದ ಐಸಿಸಿ ಪುರುಷರ ಟಿ20 ಬ್ಯಾಟರ್‌ಗಳ ರ್‍ಯಾಂಕಿಂಗ್ ಪಟ್ಟಿಯಲ್ಲಿ ಒಂದು ಸ್ಥಾನ ಬಡ್ತಿ ಪಡೆದು ಮೂರನೇ ಸ್ಥಾನಕ್ಕೇರಿದ್ದಾರೆ

ಆಳ-ಅಗಲ
ಕೆಆರ್‌ಎಸ್: ಅಭಿವೃದ್ಧಿಯೋ, ಅನಾಹುತವೋ?

ಮಣಿಪುರ: ಟೆಂಗೊಲ್ ಸಂಘಟನೆ ಸದಸ್ಯನ ಬಂಧನ 7

ಆರ್‌ಸಿ ಕುಡಿಯಲ್ಲ, ಹುಚ್ಚ ಅಲ್ಲ: ಡಿಕೆಶಿ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,515	25,141	₹1.01 ಲಕ್ಷ (ಬೆಂಗಳೂರು)	₹1.13 ಲಕ್ಷ (ಬೆಂಗಳೂರು)	85.53

ಶುಭಾಂಶು ಶುಕ್ಲಾ ಅಂತರಿಕ್ಷಯಾನ ಮತ್ತೆ ಮುಂದೂಡಿಕೆ



ಶುಭಾಂಶು

ಚೆನ್ನೈ: ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರನ್ನು ಅಂತರ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಕಳುಹಿಸುವ ಮಹತ್ವಾಕಾಂಕ್ಷೆಯ 'ಆ್ಯಕ್ಸಿಯಂ-4' ಮಿಷನ್ ಅನ್ನು ಬುಧವಾರ ಉಡಾವಣೆಗೂ ಸುಮಾರು 12 ಗಂಟೆಗಳ ಮುನ್ನ ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

ಮಿಷನ್‌ನ ಪರೀಕ್ಷೆಯ ವೇಳೆ 'ಪ್ರೊಪಲ್ಷನ್ ವ್ಯವಸ್ಥೆ'ಯಲ್ಲಿ ದ್ರವ ಆಮ್ಲಜನಕ ಸೋರಿಕೆ ಪತ್ತೆಯಾದ ಕಾರಣ ಈ ನಿರ್ಧಾರ ತೆಗೆದು ಕೊಳ್ಳಲಾಗಿದೆ. ಈ ಮೂಲಕ ಮಿಷನ್ ಅನ್ನು ಮೂರನೇ ಬಾರಿ ಮುಂದೂಡಿದಂತಾಗಿದೆ. ಆದರೆ ಈ ಬಾರಿ, ಉಡಾವಣೆಯ ಮುಂದಿನ ದಿನಾಂಕ ಮತ್ತು ಸಮಯ ಘೋಷಣೆಯಾಗಿಲ್ಲ.

1984ರಲ್ಲಿ ಭಾರತದ ರಾಕೇಶ್ ಶರ್ಮಾ ರಷ್ಯಾದ ಗಗನನೌಕೆಯಲ್ಲಿ ಗಗನಯಾನ ಕೈಗೊಂಡಿದ್ದರು. ಅದಾದ 41 ವರ್ಷಗಳ ಬಳಿಕ ಭಾರತದ ಮತ್ತೊಬ್ಬ ಗಗನಯಾನಿ ಶುಕ್ಲಾ ಅಂತರಿಕ್ಷ ಯಾತ್ರೆ ಕೈಗೊಳ್ಳುವ ವರಿದ್ದರು.

ವಾಲ್ಮೀಕಿ ನಿಗಮದ ಹಣ ದುರ್ಬಳಕೆ ಪ್ರಕರಣ • ಬಳ್ಳಾರಿಯ ಸಂಸದ, ಶಾಸಕರು ಗುರಿ • 12 ಸ್ಥಳಗಳಲ್ಲಿ ದಾಳಿ

ಕಾಂಗ್ರೆಸ್ ನಾಯಕರಿಗೆ ಇ.ಡಿ ಬಿಸಿ


ಪ್ರಜಾವಾಣಿ ವಾರ್ತೆ



ಇ.ತುಕಾರಾಂ



ಬಿ.ನಾಗೇಂದ್ರ



ಎನ್‌.ಟಿ.ಶ್ರೀನಿವಾಸ್



ನಾರಾ ಭರತ್ ರೆಡ್ಡಿ



ಕಂಪ್ಲಿ ಗಣೇಶ್

ಬೆಂಗಳೂರು/ ಬಳ್ಳಾರಿ: ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ₹84 ಕೋಟಿ ಹಣ ದುರ್ಬಳಕೆ ಮಾಡಿಕೊಂಡಿದ್ದ ಪ್ರಕರಣದಲ್ಲಿ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು, ಕಾಂಗ್ರೆಸ್ ಸಂಸದ ಇ.ತುಕಾರಾಂ, ಶಾಸಕರಾದ ಬಿ.ನಾಗೇಂದ್ರ, ನಾರಾ ಭರತ್ ರೆಡ್ಡಿ, ಕಂಪ್ಲಿ ಗಣೇಶ್ ಮತ್ತು ಎನ್‌.ಟಿ.ಶ್ರೀನಿವಾಸ್ ಅವರ ಮನೆ ಹಾಗೂ ಕಚೇರಿಗಳಲ್ಲಿ ಶೋಧ ನಡೆಸಿದ್ದಾರೆ.

ಬಳ್ಳಾರಿ, ವಿಜಯನಗರ ಮತ್ತು ಬೆಂಗಳೂರು ಸೇರಿ ಒಟ್ಟು 12 ಸ್ಥಳಗಳಲ್ಲಿ ಬುಧವಾರ ಬೆಳಿಗ್ಗೆಯೇ ಏಕಕಾಲಕ್ಕೆ ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದು, ತಡರಾತ್ರಿಯೂ ಶೋಧ ಮುಂದುವರಿಸಿದ್ದರು. ನಾಗೇಂದ್ರ ಮತ್ತು ಶ್ರೀನಿವಾಸ್ ಹೊರತುಪಡಿಸಿ ಉಳಿದವರು ತಮ್ಮ ಮನೆಯಲ್ಲೇ ಇದ್ದರು ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನ ಶಾಸಕರ ಭವನದ 4ನೇ ಬ್ಲಾಕ್‌ನಲ್ಲಿ ನಾಗೇಂದ್ರ ಅವರಿಗೆ ಹಂಚಿಕೆ ಮಾಡಲಾಗಿರುವ ಕೊಠಡಿಯಲ್ಲೂ ಒಂದು ತಂಡ ಶೋಧ ಕಾರ್ಯ ನಡೆಸಿದೆ.

ನಿಗಮದ ಲೆಕ್ಕಾಧಿಕಾರಿ ಪಿ. ಚಂದ್ರಶೇಖರನ್ ಅವರು 2024ರ ಮೇ 21ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಅದಕ್ಕೂ ಮುನ್ನ ಬರೆದಿದ್ದ ಪತ್ರದಲ್ಲಿ, 'ಮೇಲಧಿಕಾರಿಗಳ ಸೂಚನೆಯಂತೆ ಹಣವನ್ನು ಅಕ್ರಮ ವರ್ಗಾವಣೆ ಮಾಡಲಾಗಿದೆ' ಎಂದು ಬರೆದಿದ್ದರು. ಸಿಬಿಐ ಬರೆದಿದ್ದ ಪತ್ರದ ಆಧಾರದಲ್ಲಿ ತನಿಖೆ ಆರಂಭಿಸಿದ್ದ ಇ.ಡಿಯು, 'ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ ಬಿ.ನಾಗೇಂದ್ರ ಅವರ ಆಣತಿಯಂತೆ ಈ ಅಕ್ರಮ ನಡೆದಿದೆ' ಎಂದು ಹೇಳಿತ್ತು.

ತನಿಖೆಯ ವೇಳೆ ಬಿ.ನಾಗೇಂದ್ರ ಅವರ ಆಪ್ತ ವಿಜಯ್ ಕುಮಾರ್ ಅವರನ್ನು ತೀವ್ರ ವಿಚಾರಣೆಗೆ ಒಳಪಡಿಸಿತ್ತು. ಅವರ ಡೈರಿ ಮತ್ತು ಮೊಬೈಲ್‌ನಲ್ಲಿ ಇದ್ದ ಮಾಹಿತಿಯನ್ನು ಕಲೆಹಾಕಿದ್ದ ತನಿಖಾಧಿಕಾರಿಗಳು, ಲೋಕಸಭಾ ಚುನಾವಣೆಯಲ್ಲಿ ಇ.ತುಕಾರಾಂ ಪರವಾಗಿ ಮತದಾರರಿಗೆ ಹಂಚಲು ಹಣ ವೆಚ್ಚ ಮಾಡಿದ್ದನ್ನು ಪತ್ತೆ ಮಾಡಿದ್ದರು.

'ಇ.ತುಕಾರಾಂ ಅವರ ಮನೆಗೆ ದಾಳಿ ನಡೆಸಿದಾಗ, ಅವರಿನ್ನೂ ನಿದ್ದೆಯಲ್ಲಿದ್ದರು. ಅವರ ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಮನೆಯಲ್ಲಿದ್ದ ದಾಖಲೆ ಪತ್ರಗಳನ್ನು ಪರಿಶೀಲಿಸಿ, ಅವುಗಳನ್ನು ಪ್ರತಿ ಮಾಡಿಕೊಂಡರು' ಎಂದು ಮೂಲಗಳು ತಿಳಿಸಿವೆ.

7ನೇ ಪುಟ ನೋಡಿ

> **ನಾವು ಯಾವುದೇ ರೀತಿಯ ಕಾನೂನು ಉಲ್ಲಂಘನೆಯನ್ನು ಬೆಂಬಲಿಸುವುದಿಲ್ಲ. ಕಾನೂನಿನ ಜಾರಿಗೂ ಅಡ್ಡಿಪಡಿಸುವುದಿಲ್ಲ. ಅವರು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಿ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ನಮ್ಮ ಮುಖಂಡರು ಯಾವುದೇ ಚುನಾವಣೆಯಲ್ಲಿ ಹಣ ಹಂಚಿಕೆ ಮಾಡಿಲ್ಲ. ಅಧಿಕಾರಿಗಳು ದುರ್ಬಳಕೆ ಮಾಡಿಕೊಂಡಿದ್ದ ಹಣದಲ್ಲಿ ಶೇ 90ರಷ್ಟನ್ನು ಈಗಾಗಲೇ ವಶಕ್ಕೆ ಪಡೆಯಲಾಗಿದೆ**
> **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

> **ಈ ಹಗರಣದ ಹಣ ಲೋಕಸಭಾ ಚುನಾವಣೆಯಲ್ಲಿ ಬಳಕೆಯಾಗಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ. ಬಡವರ ಹಣ ತಿಂದ ಕಾಂಗ್ರೆಸ್ ನಾಯಕರಿಗೆ ಶಿಕ್ಷೆಯಾಗಬೇಕು**
> **ಆರ್.ಅಶೋಕ,** ವಿಧಾನಸಭೆ ವಿರೋಧ ಪಕ್ಷದ ನಾಯಕ

ಲೆಕ್ಕದ ಪುಸ್ತಕದಲ್ಲಿ ಮತ್ತಷ್ಟು ವಿವರ

'ಬಿ.ನಾಗೇಂದ್ರ ಅವರ ಆಪ್ತ ಗೋವರ್ಧನ್ ರೆಡ್ಡಿ ಅವರ ಮನೆಯಲ್ಲಿ ಒಂದು ಲೆಕ್ಕದ ಪುಸ್ತಕ ದೊರೆತಿದ್ದು, ವಿವಿಧೆಡೆಗೆ ಹಣ ಕಳುಹಿಸಿದ್ದರ ಸಂಬಂಧ ದಿನಾಂಕ ಮತ್ತು ಸ್ಥಳಗಳ ಮಾಹಿತಿ ಅದರಲ್ಲಿದೆ' ಎಂದು ಇ.ಡಿ ಮೂಲಗಳು ತಿಳಿಸಿವೆ.

'ಆ ಲೆಕ್ಕದ ಪುಸ್ತಕದಲ್ಲಿ ಹಲವು ತಿಂಗಳ ಅವಧಿಯಲ್ಲಿ ನಡೆಸಿದ ಹಣಕಾಸು ವ್ಯವಹಾರದ ವಿವರಗಳಿವೆ. ವಿವಿಧ ಮಂದಿಗೆ ಕಳುಹಿಸಿದ ಹಣ, ಮೊತ್ತ, ದಿನಾಂಕದ ವಿವರ ಅದರಲ್ಲಿದೆ. ಲೋಕಸಭಾ ಚುನಾವಣೆಯ ಮತದಾನದ ದಿನಕ್ಕೂ ವಾರದ ಮೊದಲು ಹೆಚ್ಚು ಹಣ ಕಳುಹಿಸಿರುವ ಬಗ್ಗೆ ಉಲ್ಲೇಖವಿದೆ. ಈ ಬಗ್ಗೆ ಹೆಚ್ಚಿನ ವಿವರ ಕಲೆ ಹಾಕಲಾಗುತ್ತಿದೆ' ಎಂದು ವಿವರಿಸಿವೆ.

ರಾಜ್ಯಪಾಲರನ್ನು ನಾನೇ ಆಹ್ವಾನಿಸಿದ್ದು: ಸಿ.ಎಂ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ/ಬೆಂಗಳೂರು: 'ವಿಧಾನಸೌಧದ ಮೆಟ್ಟಿಲುಗಳ ಮೇಲೆ ಹಮ್ಮಿಕೊಂಡ ಕಾರ್ಯಕ್ರಮಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರಾಗಿಯೇ ಬರಲಿಲ್ಲ. ನಾನೇ ಆಹ್ವಾನಿಸಿದ್ದೆ. ಆದ್ದರಿಂದ ಅವರು ಕಾರ್ಯಕ್ರಮದಲ್ಲಿ ಹಾಜರಾದರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದರು.



ಸಿದ್ದರಾಮಯ್ಯ

ಚಿಕ್ಕಬಳ್ಳಾಪುರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಜೂ. 4ರಂದು ಕೆಎಸ್‌ಸಿಎ ಮತ್ತು ಆರ್‌ಸಿಬಿ ವತಿಯಿಂದ ಆಟಗಾರರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅಂದು ಬೆಳಿಗ್ಗೆ ನನ್ನನ್ನು ಭೇಟಿ ಮಾಡಿದ್ದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಶಂಕರ್ ಮತ್ತು ಜಯರಾಮ್ ಆಹ್ವಾನ ನೀಡಿದ್ದರು. ಇದಕ್ಕೆ ನಾನು ಒಪ್ಪಿಗೆ ನೀಡಿದೆ. ಬಳಿಕ ಅವರು ರಾಜ್ಯಪಾಲರನ್ನು ಆಹ್ವಾನ ಮಾಡಿರುವುದಾಗಿ ತಿಳಿಸಿದ್ದರು' ಎಂದರು.

'ರಾಜ್ಯಪಾಲರು ಅವರಾಗಿಯೇ ಬಂದಿದ್ದರು ಎಂದು ಪ್ರಚಾರವಾಗಿದೆ. ಅದು ತಪ್ಪು. ಕೆ.ಗೋವಿಂದರಾಜು (ಆಗ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಯಾಗಿದ್ದರು) ಅವರು ರಾಜ್ಯಪಾಲರಿಗೆ ದೂರವಾಣಿ ಕರೆ ಮಾಡಿ ನನಗೆ ಕೊಟ್ಟರು. ಆಗ ನಾನು ಕೂಡ ಕಾರ್ಯಕ್ರಮಕ್ಕೆ ಹೋಗುತ್ತಿದ್ದು, ನೀವೂ ಬನ್ನಿ ಎಂದು ಆಹ್ವಾನಿಸಿದೆ' ಎಂದರು.

'ರಾಜ್ಯಪಾಲರು ಕೂಡ ಕಾರ್ಯಕ್ರಮಕ್ಕೆ ಆಗಮಿಸಿದ್ದರು, ಸನ್ಮಾನ ಕಾರ್ಯಕ್ರಮ 20 ನಿಮಿಷಗಳಲ್ಲಿ ಮುಗಿದು ಹೋಯಿತು. ರಾಜ್ಯಪಾಲರು ತಾವಾಗಿಯೇ ಬಂದಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದ್ದರಿಂದ ಸ್ಪಷ್ಟೀಕರಣ ನೀಡುತ್ತಿದ್ದೇನೆ' ಎಂದು ಹೇಳಿದರು.

'ಸನ್ಮಾನ ಕಾರ್ಯಕ್ರಮದಲ್ಲಿ ರಾಜ್ಯಪಾಲರು ಪಾಲ್ಗೊಂಡಿರುವ ಕುರಿತು ಅಧಿಕೃತವಾಗಿ ಯಾವುದೇ ಸ್ಪಷ್ಟನೆ ನೀಡಿಲ್ಲ' ಎಂದು ರಾಜಭವನದ ಮೂಲಗಳು ತಿಳಿಸಿವೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ರೈಲ್ವೆ: 24 ಗಂಟೆ ಮುನ್ನವೇ ಸೀಟು ಖಾತರಿ



ನವದೆಹಲಿ (ಪಿಟಿಐ): ಟಿಕೆಟ್ ಕಾಯ್ದಿರಿಸಿದ ಪಟ್ಟಿಯಲ್ಲಿರುವ ಪ್ರಯಾಣಿಕರಿಗೆ ರೈಲು ಹೊರಡುವ 24 ಗಂಟೆಗಳ ಮುನ್ನವೇ ಸೀಟು ಹಂಚಿಕೆ ಮಾಡಿ, ಖಚಿತಪಡಿಸುವ ವ್ಯವಸ್ಥೆಯನ್ನು ರೈಲ್ವೆ ಸಚಿವಾಲಯ ಪ್ರಾಯೋಗಿಕವಾಗಿ ಜಾರಿಗೊಳಿಸಿದೆ.

ಸದ್ಯ ರೈಲು ಹೊರಡುವ ನಾಲ್ಕು ಗಂಟೆಗಳ ಮೊದಲಷ್ಟೇ ಸೀಟು ಹಂಚಿಕೆ ಪಟ್ಟಿ ಪ್ರಕಟಿಸಲಾಗುತ್ತಿದೆ. ಕಾಯ್ದಿರಿಸಿದ ಪಟ್ಟಿಯಲ್ಲಿರುವ ಪ್ರಯಾಣಿಕರಿಗೆ ಆಸನಗಳನ್ನು ತ್ವರಿತವಾಗಿ ಖಚಿತಪಡಿಸುವ ಉದ್ದೇಶದಿಂದ ಹೊಸ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ ಎಂದು ರೈಲ್ವೆ ಸಚಿವಾಲಯ ಪ್ರಕಟಿಸಿದೆ.

ಪ್ರಯಾಣಿಕರಿಂದ ಧನಾತ್ಮಕ ಪ್ರತಿಕ್ರಿಯೆ ವ್ಯಕ್ತವಾದರೆ ಈ ವ್ಯವಸ್ಥೆಯನ್ನು ದೇಶದಾದ್ಯಂತ ಜಾರಿಗೆ ತರಲಾಗುವುದು ಎಂದು ತಿಳಿಸಿದೆ.

'ಬಿಕಾನೇರ್ ವಿಭಾಗದಲ್ಲಿ ಈ ಪ್ರಾಯೋಗಿಕ ಯೋಜನೆಯು ಆರಂಭಗೊಂಡಿದೆ' ಎಂದು ರೈಲ್ವೆ ಮಂಡಳಿಯ ಮಾಹಿತಿ ಮತ್ತು ಪ್ರಚಾರ ಕಾರ್ಯ-ನಿರ್ವಾಹಕ ನಿರ್ದೇಶಕ ದಿಲೀಪ್ ಕುಮಾರ್ ತಿಳಿಸಿದ್ದಾರೆ.

'ಟಿಕೆಟ್ ಪಡೆದಿದ್ದರೂ, ಆಸನ ಹಂಚಿಕೆ ಖಾತರಿಯಾಗದೇ ಇರುವುದರಿಂದ ತಮ್ಮ ಪ್ರಯಾಣದ ಬಗ್ಗೆ ಅನಿಶ್ಚಿತತೆ ಹೊಂದಿದ ಪ್ರಯಾಣಿಕರನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಇದರಿಂದ ಅವರಿಗೆ ಅನುಕೂಲವಾಗಲಿದೆ' ಎಂದು ಅವರು ಹೇಳಿದ್ದಾರೆ.

ಪ್ರಯಾಣದ ಟಿಕೆಟ್ ಖಚಿತಗೊಂಡ ನಂತರ ಪ್ರಯಾಣಿಕರು ಅದನ್ನು ರದ್ದುಗೊಳಿಸಿದರೆ, ಪಾವತಿಸಿದ ಮೊತ್ತದಲ್ಲಿ ಹೆಚ್ಚಿನ ಭಾಗವನ್ನು ಕಳೆದು ಕೊಳ್ಳಲಿದ್ದಾರೆ.

ತತ್ಕಾಲ್: 'ಆಧಾರ್' ಕಡ್ಡಾಯ

ನವದೆಹಲಿ (ಪಿಟಿಐ): ಆಧಾರ್ ದೃಢೀಕರಿಸಿದ ಬಳಕೆದಾರರು ಮಾತ್ರ ತತ್ಕಾಲ್ ಯೋಜನೆಯಡಿ ಜುಲೈ 1ರಿಂದ ಟಿಕೆಟ್ ಕಾಯ್ದಿರಿ-ಸಬಹುದು ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

'ತತ್ಕಾಲ್ ಯೋಜನೆಯ ಪ್ರಯೋಜನವು ಎಲ್ಲರಿಗೂ ಸಿಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಮಂಗಳವಾರ ಹೊರಡಿಸಿದ ಸುತ್ತೋಲೆಯಲ್ಲಿ ಹೇಳಿದೆ.

ಇಂಡಿಯನ್ ರೈಲ್ವೆ ಕೇಟರಿಂಗ್ ಆ್ಯಂಡ್ ಟೂರಿಸಂ ಕಾರ್ಪೋರೇಷನ್ (ಐಆರ್‌ಸಿಟಿಸಿ) ವೆಬ್‌ಸೈಟ್ ಮತ್ತು ಅದರ ಆ್ಯಪ್‌ಗಳ ಮೂಲಕ ಆಧಾರ್ ದೃಢೀಕರಿಸಿದ ಬಳಕೆದಾರರು ಮಾತ್ರ ಜುಲೈ 1ರಿಂದ ಟಿಕೆಟ್ ಬುಕ್ ಮಾಡಿಕೊಳ್ಳಬಹುದು ಎಂದು ಸಚಿವಾಲಯವು ತಿಳಿಸಿದೆ.

ತತ್ಕಾಲ್ ಟಿಕೆಟ್ ಬುಕ್ಕಿಂಗ್‌ಗೆ ಆಧಾರ್ ಆಧಾರಿತ ಒಟಿಪಿಯ ದೃಢೀಕರಣವನ್ನು ಜುಲೈ 15ರಿಂದ ಕಡ್ಡಾಯಗೊಳಿಸಲಾಗು-ವುದು ಎಂದಿದೆ. ತತ್ಕಾಲ್ ಟಿಕೆಟ್ ಬುಕ್ಕಿಂಗ್‌ನ ವಿಂಡೋ ತೆರೆದ ಮೊದಲ 30 ನಿಮಿಷಗಳಲ್ಲಿ ಭಾರತೀಯ ರೈಲ್ವೆಯ ಅಧಿಕೃತ ಟಿಕೆಟಿಂಗ್ ಏಜೆಂಟರು ಟಿಕೆಟ್ ಬುಕ್ ಮಾಡಲು ಅವಕಾಶವಿರುವುದಿಲ್ಲ ಎಂದು ಸುತ್ತೋಲೆ ತಿಳಿಸಿದೆ.

ರೆಡ್ಡಿಗೆ ಜಾಮೀನು ಮಂಜೂರು

ಅಕ್ರಮ ಗಣಿಗಾರಿಕೆ ಪ್ರಕರಣ



ಜನಾರ್ದನ ರೆಡ್ಡಿ

ಹೈದರಾಬಾದ್ (ಪಿಟಿಐ): ಓಬುಳಾಪುರಂ ಗಣಿ ಕಂಪನಿಯ (ಒಎಂಸಿ) ಮೂಲಕ ಅಕ್ರಮ ಗಣಿಗಾರಿಕೆ ನಡೆಸಿ, ಕಬ್ಬಿಣದ ಅದಿರು ಕಳ್ಳಸಾಗಣೆ ಮಾಡಿದ್ದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಕರ್ನಾಟಕದ ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಅವರಿಗೆ ಸಿಬಿಐ ವಿಶೇಷ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಯನ್ನು ಅಮಾನತುಗೊಳಿಸಿರುವ ತೆಲಂಗಾಣ ಹೈಕೋರ್ಟ್, ಜಾಮೀನು ಮಂಜೂರು ಮಾಡಿದೆ.

ರೆಡ್ಡಿ ಅವರಿಗೆ ಏಳು ವರ್ಷಗಳ ಜೈಲು ಶಿಕ್ಷೆಯನ್ನು ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಲಯ ವಿಧಿಸಿತ್ತು. ಅದನ್ನು ಪ್ರಶ್ನಿಸಿ ರೆಡ್ಡಿ ಮತ್ತು ಇತರ ಆರೋಪಿಗಳು ಜಾಮೀನು ಕೋರಿ ಪ್ರತ್ಯೇಕ ಅರ್ಜಿ ಸಲ್ಲಿಸಿದ್ದರು.

ಈ ಎರಡೂ ಅರ್ಜಿಗಳನ್ನು ನ್ಯಾಯಾಲಯ ಪುರಸ್ಕರಿಸಿದೆ.

₹10 ಲಕ್ಷ ಮೊತ್ತ ವೈಯಕ್ತಿಕ ಬಾಂಡ್ ಮತ್ತು ಇಬ್ಬರ ಶ್ಯೂರಿಟಿ ನೀಡಬೇಕು. ಅರ್ಜಿದಾರರು ನ್ಯಾಯಾಲಯದ ಅನುಮತಿ ಇಲ್ಲದೇ ದೇಶ ಬಿಟ್ಟು ಹೋಗುವಂತಿಲ್ಲ. ಪಾಸ್‌ಪೋರ್ಟ್ ಅನ್ನು ನ್ಯಾಯಾಲಯಕ್ಕೆ ಒಪ್ಪಿಸಬೇಕು. ಎಂದು ನ್ಯಾಯಾಲಯ ಷರತ್ತು ವಿಧಿಸಿದೆ.

'ಅರ್ಜಿದಾರರು (ರೆಡ್ಡಿ) ಶಿಕ್ಷೆಯ ಅರ್ಧ ಅವಧಿಯನ್ನು ಈಗಾಗಲೇ ಬಂಧನದಲ್ಲಿ ಕಳೆದಿದ್ದಾರೆ. ಈಗ ಶಿಕ್ಷೆಯನ್ನು ಅಮಾನತುಗೊಳಿಸದೇ ಇದ್ದರೆ ಅವರು ಕರ್ನಾಟಕದಲ್ಲಿ ಪ್ರತಿನಿಧಿಸುತ್ತಿದ್ದ ವಿಧಾನಸಭಾ ಕ್ಷೇತ್ರಕ್ಕೆ (ಗಂಗಾವತಿ) ಉಪ ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗವು ಅಧಿಸೂಚನೆ ಹೊರಡಿಸುವ ಸಾಧ್ಯತೆ ಇದೆ. ಆ ರೀತಿ ಆದಲ್ಲಿ ಅರ್ಜಿದಾರರಿಗೆ ಯಾವತ್ತೂ ಸರಿಪಡಿಸಲಾಗದಂತಹ ನಷ್ಟವಾಗುತ್ತದೆ. ಅರ್ಜಿದಾರರಿಗೆ ವಿಧಿಸಿರುವ ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಿ, ಜಾಮೀನು ಮಂಜೂರು ಮಾಡಲು ಬಲವಾದ ಕಾರಣಗಳು ಇವೆ' ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಒಎಂಸಿ ಮೂಲಕ ಕರ್ನಾಟಕ–ಆಂಧ್ರಪ್ರದೇಶ ಗಡಿ ಭಾಗದಲ್ಲಿ ಅಕ್ರಮ ಗಣಿಗಾರಿಕೆ ನಡೆಸಿ, ಕಬ್ಬಿಣದ ಅದಿರು ಕಳ್ಳಸಾಗಣೆ ಮಾಡಿ ₹800 ಕೋಟಿಗೂ ಹೆಚ್ಚು ನಷ್ಟ ಉಂಟುಮಾಡಿರುವ ಆರೋಪ ಜನಾರ್ದನ ರೆಡ್ಡಿ ಮತ್ತು ಇತರರ ಮೇಲಿದೆ. ಈ ಸಂಬಂಧ ಸಿಬಿಐ 2009ರ ಡಿಸೆಂಬರ್‌ನಲ್ಲಿ ಎಫ್‌ಐಆರ್ ದಾಖಲಿಸಿತ್ತು.

ಕಾನ್‌ಕರೆಂಟ್ ಇವೆಂಟ್ಸ್

5th Edition DAIRY Expo

5th Edition Food EXPO

India Tea & Coffee Expo

BKE 2ನೇ ಆವೃತ್ತಿ ಬೇಕರಿ & ಕಿಚನ್ ಉಪಕರಣಗಳ ಎಕ್ಸ್‌ಪೋ

ಪೌಲ್ಟ್ರಿ ಎಕ್ಸ್‌ಪೋ

12 13 14 ಜೂನ್ 2025

ಬೆಂಗಳೂರು ಅಂತರ್‌ರಾಷ್ಟ್ರೀಯ ಪ್ರದರ್ಶನ ಕೇಂದ್ರ, ಭಾರತ

ಪ್ರದರ್ಶನ ಸಮಯ: ಬೆ. 10 – ಸಂ. 6

Scan & Register Now

ಪ್ರವೇಶ ಉಚಿತ



ಆಯೋಜಕರು

MEDIA DAY MARKETING

ಬೆಂಬಲಿಗರು

ಮಾಧ್ಯಮ ಪಾಲುದಾರರು

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:

70755 66244 / 89196 00459 / 83091 88083

www.dairyexpo.in www.foodexpo.in www.itcexpo.in

www.bkeexpo.com www.poultryindiaexpo.com

5TH EDITION IGE INDIA GREEN ENERGY EXPO

19 20 21 ಜೂನ್ 2025

ಬಿಐಇಸಿ, ಬೆಂಗಳೂರು ಅಂತರ್‌ರಾಷ್ಟ್ರೀಯ ಪ್ರದರ್ಶನ ಕೇಂದ್ರ, ಭಾರತ

ಪ್ರದರ್ಶನ ಸಮಯ: ಬೆ. 10 – ಸಂ. 6



ನವೀಕರಿಸಬಲ್ಲ ಇಂಧನ ಉತ್ಪಾದಕರು, ಉಪಕರಣಗಳ ತಯಾರಕರು, ತಂತ್ರಜ್ಞಾನ ಪೂರೈಕೆದಾರರು, ಸಮಾಲೋಚಕರು ಮತ್ತು ಪೂರಕ ಉದ್ಯಮಗಳನ್ನು ಪರಸ್ಪರ ಒಂದಗೂಡಿಸುವ ಅಂತರ್‌ರಾಷ್ಟ್ರೀಯ ಪ್ರದರ್ಶನ

ಪ್ರವೇಶ ಉಚಿತ

Scan & Register Now

ಜಂಟಿ ಆಯೋಜಕರು

Karnataka Renewable Energy Systems Manufacturers Association

MEDIA DAY MARKETING

ಬೆಂಬಲಿಗರು

IWTMA

ಜ್ಞಾನ ಪಾಲುದಾರರು

6W research

ಗೋಲ್ಡ್ ಸ್ಪಾನ್ಸರ್

EN-ICON

ಪ್ಲಾಟಿನಂ ಸ್ಪಾನ್ಸರ್

Department of Energy Government of Odisha

GRIDCO

ಮಾಧ್ಯಮ ಪಾಲುದಾರರು

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:

70755 66244 / 89196 00459 / 83091 88083

www.indiagreenenergyexpo.com

ಒತ್ತಡ ಹೆಚ್ಚಾಗಿ ವಿದ್ಯುತ್ ಕಡಿತ: ಕೈಗಾರಿಕೆಗಳಿಗೆ ಭಾರಿ ಸಂಕಷ್ಟ

ಯುಜಿ ಕೇಬಲ್ ಅಳವಡಿಕೆ ಸ್ಥಗಿತ

● ಕೆ.ಎಸ್.ಸುನಿಲ್

ಬೆಂಗಳೂರು: ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಾಗರಬಾವಿ ಉಪವಿದ್ಯುತ್ ಕೇಂದ್ರದ ಭೂಗತ (ಯುಜಿ) ಕೇಬಲ್ ಅಳವಡಿಕೆ ಕಾರ್ಯ ಸ್ಥಗಿತಗೊಂಡಿರುವ ಕಾರಣ ಇತರೆ ಉಪ ಕೇಂದ್ರಗಳಿಗೆ ಹೆಚ್ಚುವರಿ ವಿದ್ಯುತ್ ಲೈನ್‌ಗಳ ಸಂಪರ್ಕ ನೀಡಲಾಗಿದೆ. ಇದರ ಪರಿಣಾಮ ಒತ್ತಡ ಹೆಚ್ಚಾಗಿ ವಿದ್ಯುತ್ ಕಡಿತಗೊಂಡು, ಸುತ್ತಮುತ್ತಲಿನ ಕೈಗಾರಿಕೆಗಳಿಗೆ ತೊಂದರೆಯಾಗುತ್ತಿದೆ.

ನಾಗರಬಾವಿ ಪ್ರದೇಶ ವ್ಯಾಪ್ತಿಯ 'ನಮ್ಮೂರು ತಿಂಡಿ' ಸ್ಥಳದಿಂದ ನಾಯಂಡಹಳ್ಳಿ ರಿಂಗ್ ರಸ್ತೆವರೆಗೆ (1.4 ಕಿ.ಮೀ.) 220 ಕೆ.ವಿ. ಸಾಮರ್ಥ್ಯದ ಕೇಬಲ್‌ಗಳನ್ನು ಅಳವಡಿಸಬೇಕಿದೆ. ಸ್ಥಳೀಯರ ವಿರೋಧದ ಕಾರಣ ಒಂದು ವರ್ಷದಿಂದ ಕೆಲಸ ಸ್ಥಗಿತಗೊಂಡಿದೆ. ಇದರಿಂದ ಕೈಗಾರಿಕೆಗಳಿಗೆ ಸಮಸ್ಯೆಯಾಗುತ್ತಿದೆ.

300 ಮನೆಗಳಿಗೆ ವಿದ್ಯುತ್ ಒದಗಿಸುವ ಸಾಮರ್ಥ್ಯ ಹೊಂದಿರುವ ಉಪಕೇಂದ್ರಗಳಿಗೆ 500-600 ಲೈನ್ ಸಂಪರ್ಕ ಕಲ್ಪಿಸಲಾಗಿದೆ. ಇದರಿಂದ ಅವುಗಳಿಗೆ ಒತ್ತಡ ತಡೆದುಕೊಳ್ಳಲು ಆಗುತ್ತಿಲ್ಲ. ವಿದ್ಯುತ್ ಪೂರೈಕೆ ಮೇಲಿನ ಒತ್ತಡ ಕಡಿಮೆ ಮಾಡಲು ಅಧಿಕಾರಿಗಳು ಒಂದು ಪ್ರದೇಶಕ್ಕೆ ವಿದ್ಯುತ್ ಕಡಿತಗೊಳಿಸಿ, ಮತ್ತೊಂದು ಕಡೆಗೆ ಪೂರೈಸುತ್ತಿದ್ದಾರೆ.

ಪೀಣ್ಯ, ಮಾಚೋಹಳ್ಳಿ, ಸೀಗೆಹಳ್ಳಿ, ಹೆಗ್ಗನಹಳ್ಳಿ, ಕಮ್ಮಗೊಂಡನಹಳ್ಳಿ, ತಾವರೆಕೆರೆ, ದಾಬಸ್ ಪೇಟೆ, ಎಲೆಕ್ಟ್ರಾನಿಕ್ ಸಿಟಿ ಕೈಗಾರಿಕಾ ಪ್ರದೇಶಗಳ ಸ್ಥಿತಿ ಇದೇ ರೀತಿ ಇದೆ. ಕೂಡಲೇ ಸಮಸ್ಯೆ ಬಗೆಹರಿಸಬೇಕು ಎಂದು ಉದ್ಯಮಿಗಳು ಆಗ್ರಹಿಸಿದ್ದಾರೆ. ಈ ಬಗ್ಗೆ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಹಲವು ಬಾರಿ ಮನವಿ ಮಾಡಿದೆ.

'ಅಧಿಕಾರಿಗಳ ಈ ಕಾರ್ಯವೈಖರಿಯಿಂದ ಸಣ್ಣ ಮತ್ತು ಸೂಕ್ಷ್ಮ ಕೈಗಾರಿಕೆಗಳ ಉತ್ಪಾದನೆಯ ಮೇಲೆ ಗಂಭೀರ ಪರಿಣಾಮ ಬೀರತೊಡಗಿದೆ. ನಿರ್ವಹಣೆ ಸಮಯದಲ್ಲಿ ವಿದ್ಯುತ್ ಕಡಿತಗೊಂಡರೆ ಕಚ್ಚಾವಸ್ತುಗಳು ಹಾಳಾಗುತ್ತವೆ. ಉತ್ಪಾದನೆಗೆ ಪೆಟ್ಟು ಬೀಳಲಿದೆ. ವಿದ್ಯುತ್ ಕೈ ಕೊಡುತ್ತಿರುವ ಕಾರಣ ಕೋಟ್ಯಂತರ ರೂಪಾಯಿ ಮೌಲ್ಯದ ಯಂತ್ರಗಳಲ್ಲಿ ತಾಂತ್ರಿಕ ದೋಷ ಉಂಟಾಗುತ್ತದೆ. ಅವುಗಳ ದುರಸ್ತಿಗೆ ಸಮಯ ವ್ಯರ್ಥವಾಗುವುದರ ಜತೆಗೆ ಹಣವೂ ಖರ್ಚಾಗುತ್ತದೆ' ಎಂದು ಉದ್ಯಮಿಗಳು ಬೇಸರ ವ್ಯಕ್ತಪಡಿಸಿದರು.

'ಹಗಲಿನಲ್ಲಿ ಮುನ್ಸೂಚನೆ ಇಲ್ಲದೇ ವಿದ್ಯುತ್ ಕಡಿತಗೊಳಿಸಲಾಗುತ್ತದೆ. ಸಮಸ್ಯೆಯನ್ನು ಯಾರಿಗೆ ಹೇಳಬೇಕು? ಕೋಟ್ಯಂತರ ರೂಪಾಯಿ ಸಾಲ ಮಾಡಿ ಯಂತ್ರಗಳನ್ನು ಅಳವಡಿಸಲಾಗಿದೆ. ಮಾಹಿತಿ ನೀಡದೆ ವಿದ್ಯುತ್ ಕಡಿತ ಮಾಡಿದರೆ ಯಂತ್ರಗಳಿಗೆ ಹಾನಿಯಾಗುತ್ತದೆ 'ಎಂದು ಅಳಲು ತೋಡಿಕೊಂಡರು.

'ಶಾಸಕರ ಜತೆ ಚರ್ಚಿಸಿ ಪರಿಹಾರ'

'ನಾಗರಬಾವಿ ಪ್ರದೇಶ ವ್ಯಾಪ್ತಿಯ ನಾಯಂಡಹಳ್ಳಿ ರಿಂಗ್ ರಸ್ತೆವರೆಗೆ 1.4 ಕಿ.ಮೀ. ರಸ್ತೆಯಲ್ಲಿ 220 ಕೆ.ವಿ ಸಾಮರ್ಥ್ಯದ ಕೇಬಲ್‌ಗಳನ್ನು ಹಾಕಬೇಕಿದೆ. ಸ್ಥಳೀಯರ ವಿರೋಧದ ಕಾರಣ ಸಮಸ್ಯೆ ಉಂಟಾಗಿದ್ದು, ಕ್ಷೇತ್ರದ ಶಾಸಕ ಪ್ರಿಯಕೃಷ್ಣ ಅವರ ಗಮನಕ್ಕೆ ತರಲಾಗಿದೆ. ಸ್ಥಳೀಯರೊಂದಿಗೆ ಚರ್ಚಿಸಿ, ಶೀಘ್ರವೇ ಸಮಸ್ಯೆ ಇತ್ಯರ್ಥಪಡಿಸುವ ಭರವಸೆ ನೀಡಿದ್ದಾರೆ. ಸಮಸ್ಯೆ ಬಗೆಹರಿದರೆ ವಿದ್ಯುತ್ ಪೂರೈಕೆಗೆ ತೊಂದರೆ ಆಗುವುದಿಲ್ಲ' ಎಂದು ಕೆಪಿಟಿಸಿಎಲ್ ಉತ್ತರ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ವೆಂಕಟೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಪೀಣ್ಯ ಉಪಕೇಂದ್ರದಿಂದ ಬ್ಯಾಡರಹಳ್ಳಿ, ತಾವರೆಕೆರೆ, ಕೊಡಿಗೆಹಳ್ಳಿ, ಶ್ರೀಗಂಧದ ಕಾವಲು ಕೈಗಾರಿಕಾ ಪ್ರದೇಶಕ್ಕೆ 70 ಮೆಗಾವಾಟ್ ವಿದ್ಯುತ್ ಪೂರೈಕೆ ಆಗುತ್ತಿದೆ. ನಾಗರಬಾವಿ ಉಪಕೇಂದ್ರ ಕಾರ್ಯಾರಂಭ ಮಾಡಿದರೆ ಒತ್ತಡ ಕಡಿಮೆ ಆಗುತ್ತದೆ. ಪೀಣ್ಯ ಉಪಕೇಂದ್ರದಲ್ಲಿ ಸಮಸ್ಯೆ ಉಂಟಾದರೆ ಶ್ರೀಗಂಧ ಕಾವಲು, ಕೊಡಿಗೆಹಳ್ಳಿ, ಬ್ಯಾಡರಹಳ್ಳಿಗೆ ನಾಗರಬಾವಿ ಉಪಕೇಂದ್ರದಿಂದ ವಿದ್ಯುತ್ ಪೂರೈಕೆ ಮಾಡಬಹುದು' ಎಂದು ಹೇಳಿದರು.



500 ಕುಟುಂಬಗಳಿಗೆ ಚೆಕ್ ವಿತರಣೆ



ಶಾಸಕ ಎಸ್‌.ಟಿ.ಸೋಮಶೇಖರ್ ಗಣಿಗಾರಿಕೆ ಬಾಧಿತ ಪ್ರದೇಶದ ಗ್ರಾಮಸ್ಥರಿಗೆ ಪರಿಹಾರದ ಚೆಕ್ ವಿತರಿಸಿದರು. ರಾಜ್ಯ ಕ್ರಷರ್ ಮಾಲೀಕರ ಸಂಘದ ಅಧ್ಯಕ್ಷ ಡಿ.ಸಿದ್ದರಾಜು, ಸೂಲಿವಾರ ಬಸವರಾಜು, ಉಮಾಶಂಕರ್, ಹಾಪ್‌ಕಾಮ್ಸ್ ನಿರ್ದೇಶಕ ಎಂ.ಜಯಕುಮಾರ್ ಇದ್ದಾರೆ.


ರಾಜರಾಜೇಶ್ವರಿನಗರ: ಗಣಿಗಾರಿಕೆ ಬಾಧಿತ ವ್ಯಾಪ್ತಿಯ ಪಚ್ಚೆಪಾಳ್ಯ, ಬಸಮ್ಮನ ಹಳ್ಳಿ, ಶಾಂತಿನಗರ, ಸಿ.ಕೆ.ತಾಂಡ್ಯ ಗ್ರಾಮಗಳ 500 ಕುಟುಂಬಗಳಿಗೆ ಪರಿಹಾರವಾಗಿ ತಲಾ ₹30,000 ಮೊತ್ತದ ಚೆಕ್‌ಗಳನ್ನು ಶಾಸಕ ಎಸ್‌.ಟಿ. ಸೋಮಶೇಖರ್ ಅವರು ವಿತರಿಸಿದರು.

ಕ್ರಷರ್ ಮಾಲಿಕರ ಸಂಘದ ವತಿಯಿಂದ ನೀಡಿದ ಚೆಕ್‌ಗಳನ್ನು ವಿತರಿಸಿ ಮಾತನಾಡಿದ ಅವರು, '10 ವರ್ಷಗಳಿಂದ ಪರಿಹಾರ ನೀಡುತ್ತಿದ್ದು, ಮುಂದೆ ಪ್ರತಿ ಗ್ರಾಮಗಳಲ್ಲಿ ಉಚಿತ ಆರೋಗ್ಯ ತಪಾಸಣೆ ಮಾಡಿ ಚಿಕಿತ್ಸೆ ನೀಡುವಂತೆ ಸೂಚನೆ ನೀಡಿದ್ದೇನೆ' ಎಂದರು.

ಕರ್ನಾಟಕ ರಾಜ್ಯ ಕ್ರಷರ್ ಮಾಲೀಕರ ಸಂಘದ ಅಧ್ಯಕ್ಷ ಡಿ.ಸಿದ್ದರಾಜು ಮಾತನಾಡಿ, 'ಈ ಬಾರಿ 1,200 ಕುಟುಂಬಗಳಿಗೆ ತಲಾ ₹30 ಸಾವಿರದಿಂದ ₹50 ಸಾವಿರದವರೆಗೆ ಚೆಕ್‌ಗಳನ್ನು ನೀಡಲಾಗಿದೆ. ಎಲ್ಲರಿಗೂ ಅಗತ್ಯವಾದ ಕಾರ್ಯಕ್ರಮಗಳನ್ನು ಶಾಸಕರ ಮಾರ್ಗದರ್ಶನದಲ್ಲಿ ಹಮ್ಮಿಕೊಳ್ಳಲಾಗುವುದು' ಎಂದು ಹೇಳಿದರು.

ಹಾಪ್‌ಕಾಮ್ಸ್ ನಿರ್ದೇಶಕ ಎಂ.ಜೈಕುಮಾರ್, ಗ್ರಾ.ಪಂ ಸದಸ್ಯ ಉಮಾಶಂಕರ್, ಪಚ್ಚೆಪಾಳ್ಯ ಶಿವ ರಾಮಣ್ಣ, ದೊಡ್ಡೇರಿ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಉಪಸ್ಥಿತರಿದ್ದರು.

ಉಮೇಶ್ ವಾಗ್ಮಾರೆ ನೂತನ ಅಧ್ಯಕ್ಷ



ಬೆಂಗಳೂರು: ನಗರದ ಜವಾಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದ(ಜೆಎನ್‌ಸಿಎಎಸ್‌ಆರ್) ನೂತನ ಅಧ್ಯಕ್ಷರಾಗಿ ಪ್ರೊ. ಉಮೇಶ್ ವಿ.ವಾಗ್ಮಾರೆ ಅವರು ನೇಮಕಗೊಂಡಿದ್ದಾರೆ.

ಸಂಶೋಧನಾ ಕೇಂದ್ರದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ನಿರ್ಗಮಿತ ಅಧ್ಯಕ್ಷ ಪ್ರೊ. ಜಿ.ಯು. ಕುಲಕರ್ಣಿ ಅವರು ನೂತನ ಅಧ್ಯಕ್ಷ ಉಮೇಶ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಉಮೇಶ್ ಅವರು 2000ನೇ ಇಸವಿಯಲ್ಲಿ ಜೆಎನ್‌ಸಿಎಎಸ್‌ಆರ್‌ಗೆ ಬೋಧಕರಾಗಿ ಸೇರ್ಪಡೆಗೊಂಡರು. ಕೇಂದ್ರದ ಹಲವು ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ.

ಶ್ರೀ ಜಾನ್ ಮೈಕಲ್ ಕುನ್ಹಾ ವಿಚಾರಣಾ ಆಯೋಗ
ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು
ಇಲ್ಲಿ ನಡೆದ ಕಾಲ್ತುಳಿತದ ಘಟನೆಗೆ ಸಂಬಂಧಿಸಿದಂತೆ ತನಿಖೆ

ಸಾರ್ವಜನಿಕ ತಿಳುವಳಿಕೆ

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್.ಡಿ. 220 ಪಿಸಿಇ 2025 ದಿ: 05/06/2025 ರಂತೆ, ದಿ: 04/06/2025 ರಲ್ಲಿ, ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್.ಸಿ.ಬಿ) ತಂಡದ ವಿಜಯೋತ್ಸವ ಅಭಿನಂದನಾ ಸಮಾರಂಭ ನಡೆದಿರುವ ಘಟನೆಯಲ್ಲಿ ನಡೆದ ನೂಕುನುಗ್ಗಲು ಹಾಗೂ ಕಾಲ್ತುಳಿತಕ್ಕೆ ಕಾರಣಗಳು/ ಕಾರಣಕರ್ತರು; 11 ಜನರ ಸಾವಿಗೆ ಹಾಗೂ 50ಕ್ಕಿಂತ ಹೆಚ್ಚು ಜನರು ಗಾಯಾಳುಗಳಾದ ಸದರಿ ಘಟನಾವಳಿಗಳ ಸರಣಿ ಹಾಗೂ ಸನ್ನಿವೇಶಗಳ ಆಧಾರದಲ್ಲಿ ಈ ದುರ್ಘಟನೆಗೆ ಕಾರಣಗಳು/ ಕಾರಣಕರ್ತರು; ಹಾಗೂ ಭವಿಷ್ಯತ್ತಿನಲ್ಲಿ ಸದರಿ ಘಟನೆಗಳಂತಹವು ಮರುಕಳಿಸದಂತೆ ವಹಿಸಬಹುದಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ತನಿಖೆಯನ್ನು ಮೇಲ್ಕಾಣಿಸಿದ ಆಯೋಗಕ್ಕೆ ವಹಿಸಿದ್ದು, **ಈ ಮೂಲಕ ಸಾರ್ವಜನಿಕರಿಗೆ ತಿಳಿಸಬಯಸುವುದೇನೆಂದರೆ,** ವಿಚಾರಣಾ ಆಯೋಗದ ವ್ಯಾಪ್ತಿಗೆ ನಿಗಧಿಯಾದ ಈ ಮೇಲ್ಕಂಡ ವಿಷಯಗಳ ಬಗ್ಗೆ ಮತ್ತು ಘಟನೆಯ ವಾಸ್ತವಾಂಶದ ವಿವರಗಳ ಕುರಿತು ಮಾಹಿತಿ ಮತ್ತು ಸತ್ಯ ಸಂಗತಿಗಳ ಹಾಗೂ ಸಂದರ್ಭಗಳ ವಿವರ ತಿಳಿದಿರುವವರು ಮತ್ತು ತನಿಖಾ ಆಯೋಗದ ನಡವಳಿಗಳ ಬಗ್ಗೆ ಆಸಕ್ತಿಯಿರುವ ಅಥವಾ ತನಿಖಾ ಆಯೋಗಕ್ಕೆ ಸಹಕರಿಸಲಿಚ್ಛಿಸುವವರು, ತಮ್ಮ ಹೇಳಿಕೆಗಳನ್ನು ಮತ್ತು ಸಾಕ್ಷ್ಯದಾಖಲೆಗಳನ್ನು ಎರಡು ಪ್ರತಿಗಳಲ್ಲಿ, **ಪ್ರಮಾಣಿತ ಅಫಿಡಾವಿಟ್‌ನೊಂದಿಗೆ** ಸಲ್ಲಿಸಲು ಅವಕಾಶವಿರುತ್ತದೆ.

ಮೇಲ್ಕಂಡ ಹೇಳಿಕೆ ಮತ್ತು ಸಾಕ್ಷ್ಯಗಳನ್ನು, ಈ ತಿಳುವಳಿಕೆ **ಪ್ರಕಟಣೆಯಾದ 15 ದಿನಗಳೊಳಗಾಗಿ,** ಈ ಕೆಳಗಡೆ ನಮೂದಿಸಿರುವ ವಿಳಾಸಕ್ಕೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆ/ ಕೊರಿಯರ್ ಸೇವೆಯ ಮೂಲಕ ಸಲ್ಲಿಸಿದ್ದಲ್ಲಿ ಅವುಗಳನ್ನು ನಿಯಮಾನುಸಾರ ಪರಿಗಣಿಸಲಾಗುವುದು.

ಸಹಿಮಾಡಿದ **scanned** ಅಫಿಡಾವಿಟ್ ಮತ್ತು ದಾಖಲೆಗಳ ಅಡಕಗಳನ್ನು ಮಿಂಚಂಚೆ **cdinqcom@gmail.com** ಗೆ ಕಳುಹಿಸತಕ್ಕದ್ದು.

ಕಛೇರಿ ವಿಳಾಸ: ಕೊಠಡಿ ಸಂಖ್ಯೆ. 12, ಶ್ರೀ ಜಾನ್ ಮೈಕಲ್ ಕುನ್ಹಾ ವಿಚಾರಣಾ ಆಯೋಗ, ಒಂದನೇ ಮಹಡಿ, ಹಳೇ ಕಟ್ಟಡ, ಕುಮಾರ ಕೃಪ ಅಥಿತಿ ಗೃಹ, ಬೆಂಗಳೂರು-560001.

ಸಹಿ/- ವಿಚಾರಣಾ ಆಯುಕ್ತರು
ನ್ಯಾಯಮೂರ್ತಿ ಶ್ರೀ ಜಾನ್ ಮೈಕಲ್ ಕುನ್ಹಾ
ಪೂರ್ವ ನ್ಯಾಯಮೂರ್ತಿಗಳು,
ಉಚ್ಚ ನ್ಯಾಯಾಲಯ ಕರ್ನಾಟಕ.

ಸ್ಥಳ: ಬೆಂಗಳೂರು
ದಿನಾಂಕ: 09/06/2025

GRT ಜ್ಯುವೆಲರ್ಸ್: 'ಗೋಲ್ಡನ್ ಇಲೆವೆನ್ ಫ್ಲೆಕ್ಸಿ' ಯೋಜನೆ

ಬೆಂಗಳೂರು: ಆಭರಣ ಮಾರಾಟ ಕ್ಷೇತ್ರದ ಜಿಆರ್‌ಟಿ ಜ್ಯುವೆಲರ್ಸ್ ತನ್ನ ಗ್ರಾಹಕರಿಗಾಗಿ 'ಗೋಲ್ಡನ್ ಇಲೆವೆನ್ ಫ್ಲೆಕ್ಸಿ' ಎಂಬ ವಿಶೇಷ ಆಭರಣ ಖರೀದಿ ಯೋಜನೆಯನ್ನು ಪರಿಚಯಿಸಿದೆ.

ಗ್ರಾಹಕರು ತಮ್ಮ ನೆಚ್ಚಿನ ಆಭರಣಗಳನ್ನು ಖರೀದಿಸಲು ಇದೊಂದು ಉತ್ತಮ ಮಾರ್ಗವಾಗಿದೆ. ಇದು ಮಾಸಿಕ ಆಭರಣ ಉಳಿತಾಯ ಯೋಜನೆಯಾಗಿದ್ದು, ಯೋಜನೆಯಡಿ ಆಭರಣ ಪ್ರಿಯರು ತಮಗಿಷ್ಟವಾದ ಒಡವೆಗಳನ್ನು 11 ತಿಂಗಳಲ್ಲಿ ಖರೀದಿಸಬಹುದು. ಬಹುಮುಖ್ಯ ಅಂಶವೆಂದರೆ ಶೇ 18ರವರೆಗಿನ ವೇಸ್ಟೇಜ್ (VA) ಇರುವುದಿಲ್ಲ ಎಂಬುದು ವಿಶೇಷವಾಗಿದೆ.

ಜಿಆರ್‌ಟಿಯ ಗೋಲ್ಡನ್ ಇಲೆವೆನ್ ಫ್ಲೆಕ್ಸಿ ಯೋಜನೆ ಚಿನ್ನದ ಬೆಲೆಯಲ್ಲಿನ ಏರಿಳಿತಗಳ ಪರಿಣಾಮದಿಂದ ಪರಿಹಾರ ಒದಗಿಸುತ್ತದೆ. ಗ್ರಾಹಕರು ಹನ್ನೊಂದು ಮಾಸ ಉಳಿತಾಯ ಮಾಡಿದ ನಂತರ ರಿಡೆಂಪ್ಷನ್ ಸಮಯದಲ್ಲಿ 'ತೂಕ ಆಧಾರಿತ ಅಥವಾ ಮೌಲ್ಯಾಧಾರಿತ' ಎಂಬ ಎರಡು ಆಯ್ಕೆಗಳನ್ನು ಅವರಿಗೆ ನೀಡಲಾಗುತ್ತದೆ. ತಮಗೆ ಯಾವ ಆಯ್ಕೆ ಹೆಚ್ಚು ಪ್ರಯೋಜನಕಾರಿ ಎಂಬ ಆಯ್ಕೆ ಅವಕಾಶವನ್ನೂ ನೀಡಲಾಗುತ್ತದೆ. ಇದರಿಂದ ಗ್ರಾಹಕರಿಗೆ ಮುಂಚಿತವಾಗಿ ಯೋಜಿಸಲು ಮತ್ತು ನಂತರ ತಮ್ಮ ಇಚ್ಛೆಯ ಚಿನ್ನ, ವಜ್ರ, ಪ್ಲಾಟಿನಂ, ಬೆಳ್ಳಿಯ ಯಾವುದೇ ಆಭರಣಗಳಾಗಿದ್ದರೂ ಖರೀದಿಸಲು ಇದೊಂದು ಉತ್ತಮ ಹಾಗೂ ಸುರಕ್ಷಿತ ಮಾರ್ಗ ಎಂದು ಪ್ರಕಟಣೆಯಲ್ಲಿ ಹೇಳಿದೆ.

ಜಿಆರ್‌ಟಿ ಜ್ಯುವೆಲರ್ಸ್ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಆನಂದ್ ಅನಂತ ಪದ್ಮನಾಭನ್ ಅವರು ಮಾತನಾಡಿ, ತಾವು ಕಾಣುವ ಕನಸಿನ ಆಭರಣಗಳನ್ನು ಪಡೆದುಕೊಳ್ಳುವುದರ ಸಲುವಾಗಿ ಈ 'ಗೋಲ್ಡನ್ ಇಲೆವೆನ್ ಫ್ಲೆಕ್ಸಿ' ಯೋಜನೆ ರೂಪಿಸಲಾಗಿದೆ. ಈ ಮೂಲಕ ಗ್ರಾಹಕರಿಗೆ ಯೋಜಿಸಲು ಮತ್ತು ಖರೀದಿಸಲು ಇದು ಸಹಾಯವಾಗಲಿದೆ. ಅಲ್ಲದೆ, ಯೋಜನೆಯನ್ನು ಚಿಂತನಶೀಲವಾಗಿ ವಿನ್ಯಾಸಗೊಳಿಸಲಾಗಿದೆ. ಮಾಸಿಕ ₹ 1,000 ಮುಂಗಡ ಪಾವತಿಯೊಂದಿಗೆ ಯೋಜನೆ ಪ್ರಾರಂಭಿಸಬಹುದಾಗಿದೆ. ಕಡಿಮೆ ಅವಧಿಯಲ್ಲಿ ಗಮನಾರ್ಹ ಪ್ರಯೋಜನೆಗಳನ್ನು ಪಡೆದು ಆನಂದಿಸಲು 11 ಸಮಾನ ಮಾಸಿಕ ಕಂತುಗಳು ಸಾಕಾಗುತ್ತವೆ. ನಮ್ಮ ಸಂಸ್ಥೆಯ ತಜ್ಞರು ನಿಮ್ಮ ಮಾಸಿಕ ಮೊತ್ತದ ಆಯ್ಕೆಯಿಂದ ಹಿಡಿದು ಪ್ರತಿ ಪಾವತಿಯ ಅಂತಿಮ ದಿನವನ್ನು ನೆನಪಿಸುವವರಿಗೆ ಮಾರ್ಗದರ್ಶನ ಮಾಡಲಿದ್ದಾರೆ ಎಂದು ತಿಳಿಸಿದರು.

ಮತ್ತೊಬ್ಬ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ರಾಧಾಕೃಷ್ಣನ್ ಅವರು, ಇದು ಕೇವಲ ಮತ್ತೊಂದು ಚಿನ್ನದ ಉಳಿತಾಯ ಯೋಜನೆಯಲ್ಲ. ಇದು ಹೆಮ್ಮೆ ಮತ್ತು ಪರಂಪರೆಯ ಭಾವನೆಯಿಂದ ಕೂಡಿದೆ. ಗ್ರಾಹಕರು ತಮ್ಮ ಪ್ರೀತಿಪಾತ್ರರ ವಿಶೇಷ ದಿನಗಳನ್ನು ಜ್ಞಾಪಕವಿಟ್ಟು, ಅದಕ್ಕನುಗುಣವಾಗಿ ಯೋಜನೆಯಲ್ಲಿ ತೊಡಗಿಸಿಕೊಳ್ಳಬಹುದು. ಈ ಮೂಲಕ ಅರ್ಥಪೂರ್ಣ ಆಭರಣಗಳನ್ನು ಉಡುಗೊರೆ ನೀಡಲು ಸಹಾಯವಾಗುತ್ತದೆ ಹಾಗೂ ಈ ಯೋಜನೆ ಉತ್ತಮ ಆಚರಣೆ ಮತ್ತು ಹೂಡಿಕೆಯನ್ನು ಸಂಕೇತಿಸುತ್ತದೆ.

ಜಿಆರ್‌ಟಿ ಜ್ಯುವೆಲರ್ಸ್ ಗುಣಮಟ್ಟ, ಕರಕುಶಲತೆ ಮತ್ತು ಗ್ರಾಹಕರೊಂದಿಗಿನ ವೈಯಕ್ತಿಕ ಸಂಪರ್ಕಕ್ಕೆ ಹೆಸರುವಾಸಿಯಾಗಿದ್ದು, ದಕ್ಷಿಣ ಭಾರತದಲ್ಲಿ 62 ಮತ್ತು ಸಿಂಗಾಪುರದಲ್ಲಿ 1 ಶಾಖೆ ಹೊಂದಿದೆ. ಒಟ್ಟು 63 ಶಾಖೆಗಳ ಮೂಲಕ ಜನರ ಹೃದಯ ಮುಟ್ಟುತ್ತಿದೆ ಎಂದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಉಪ್ಪಾರಪೇಟೆ: ಹೆಡ್ ಕಾನ್‌ಸ್ಟೆಬಲ್ ವಿರುದ್ಧ ಪ್ರಕರಣ ದಾಖಲು

ಕಾನ್‌ಸ್ಟೆಬಲ್‌ಗಳ ಮಧ್ಯೆ ಗಲಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರತ ಸಿಬ್ಬಂದಿ ಮಧ್ಯೆ ಗಲಾಟೆ ನಡೆದಿದ್ದು, ಅದೇ ಠಾಣೆಯಲ್ಲಿ ಹೆಡ್ ಕಾನ್‌ಸ್ಟೆಬಲ್ ಒಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ.

ಕಾನ್‌ಸ್ಟೆಬಲ್ ರೇಣುಕಾ ಅವರು ನೀಡಿದ ದೂರಿನ ಮೇರೆಗೆ ಹೆಡ್ ಕಾನ್‌ಸ್ಟೆಬಲ್ ಬಿ.ಜಿ.ಗೋವಿಂದರಾಜು ಅವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.



'ಜೂನ್ 10ರಂದು ರಾತ್ರಿ ಕಂಪ್ಯೂಟರ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಮನೆ ಬಿಟ್ಟು ಬಂದಿದ್ದ ಇಬ್ಬರು ಹೆಣ್ಣು ಮಕ್ಕಳನ್ನು ನೋಡಿಕೊಳ್ಳುವಂತೆ, ಊಟ ನೀಡುವಂತೆ ಠಾಣೆಯ ಎಎಸ್‌ಐ ತಿಮ್ಮೇಗೌಡ ಸೂಚಿಸಿದ್ದರು. ರಾತ್ರಿ 2.30ರ ಸುಮಾರಿಗೆ ಆ ಮಕ್ಕಳನ್ನು ತನಿಖಾ ಸಹಾಯಕರ ಕೊಠಡಿಗೆ ಕರೆದೊಯ್ದು ಊಟ ಮಾಡಿಸುತ್ತಿದ್ದೆ. ಅದೇ ಸಮಯದಲ್ಲಿ ಬಿ.ಜಿ.ಗೋವಿಂದರಾಜು ಅವರು ಠಾಣೆಯ ಪ್ರವೇಶ ದ್ವಾರದ ಬಳಿ ಕುಳಿತು, ಹೆಣ್ಣು ಮಕ್ಕಳ ಕುರಿತು ಕೆಟ್ಟದಾಗಿ ಮಾತನಾಡುತ್ತಿದ್ದರು. ಅದನ್ನು ಕೇಳಿಸಿಕೊಂಡಿದ್ದ ಹೆಣ್ಣು ಮಕ್ಕಳು, ನನಗೆ ಮಾಹಿತಿ ನೀಡಿದ್ದರು. ಆಗ ಯಾಕೆ ಸರ್, ಹೆಣ್ಣು ಮಕ್ಕಳ ಕುರಿತು ಕೆಟ್ಟದಾಗಿ ಮಾತನಾಡುತ್ತಿದ್ದೀರಿ? ಇಲ್ಲಿ ಚಿಕ್ಕ ಮಕ್ಕಳು ಇದ್ದಾರೆ ಎಂದು ಪ್ರಶ್ನಿಸಿದ್ದೆ. ಆಗ ಗೋವಿಂದರಾಜು ಅವರು ನನ್ನನ್ನು ನಿಂದಿಸಿದರು' ಎಂದು ರೇಣುಕಾ ನೀಡಿರುವ ದೂರು ಆಧರಿಸಿ ಎಫ್‌ಐಆರ್ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

'ಅವಾಚ್ಯ ಶಬ್ದದಿಂದ ನಿಂದಿಸಿ ಶೂ ಧರಿಸಿದ್ದ ಕಾಲಿನಿಂದ ಒದ್ದಿದ್ದಾರೆ. ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ತಿಮ್ಮೇಗೌಡ, ಬಸಪ್ಪ, ಮಹೇಶ್ ಅವರು ಬಿಡಿಸಲು ಬಂದಿದ್ದರು. ಆಗಲೂ ನಿಂದಿಸಿ ಶೂ ಧರಿಸಿದ್ದ ಕಾಲಿನಿಂದ ಮತ್ತೆ ಒದ್ದರು' ಎಂಬುದಾಗಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಉದ್ಯಮಿಗೆ ₹38 ಲಕ್ಷ ವಂಚಿಸಿದ ಯುವತಿ

ಮದುವೆ ವೆಬ್‌ಸೈಟ್‌ವೊಂದರಲ್ಲಿ ಹೆಸರು ನೋಂದಣಿ ಮಾಡಿಕೊಂಡಿದ್ದ ಉದ್ಯಮಿ ಆನ್‌ಲೈನ್‌ನಲ್ಲಿ ಯುವತಿಯ ಪರಿಚಯವಾಗಿ ₹38.8 ಲಕ್ಷ ವಂಚಿಸಲಾಗಿದೆ. ಈ ಸಂಬಂಧ ಪೂರ್ವ ವಿಭಾಗದ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮದುವೆಗೆ ಹುಡುಗಿಯ ಹುಡುಕಾಟದಲ್ಲಿದ್ದ ಸಾಗರ್(ಹೆಸರು ಬದಲಾಯಿಸಿ ಮಾಡಲಾಗಿದೆ) ಅವರು ಮ್ಯಾಟ್ರಿಮೋನಿ ವೆಬ್‌ಸೈಟ್‌ನಲ್ಲಿ ಹೆಸರು ನೋಂದಣಿ ಮಾಡಿಕೊಂಡಿದ್ದರು. ಆಗ ಲಕ್ಷ್ಮಿಪ್ರಿಯಾ ಎಂಬಾಕೆಯ ಪರಿಚಯವಾಗಿತ್ತು. ಹೂಡಿಕೆ ಸಂಸ್ಥೆಯಲ್ಲಿ ತನ್ನ ಚಿಕ್ಕಪ್ಪನ ಜೊತೆಗೆ ಕೆಲಸ ಮಾಡುತ್ತಿರುವುದಾಗಿ ಆಕೆ ಹೇಳಿಕೊಂಡಿದ್ದಳು. ಇಬ್ಬರು ಮೊಬೈಲ್ ನಂಬರ್ ಬದಲಾವಣೆ ಮಾಡಿಕೊಂಡು ಮಾತುಕತೆ ನಡೆಸುತ್ತಿದ್ದರು. ವಿಡಿಯೊ ಕರೆಯಲ್ಲೂ ಮಾತನಾಡುತ್ತಿದ್ದರು. ಸಾಗರ್ ಅವರಿಗೆ ತನ್ನ ಕುಟುಂಬದ ಸದಸ್ಯರನ್ನೂ ಲಕ್ಷ್ಮಿ ಭೇಟಿ ಮಾಡಿಸಿದ್ದಳು ಎಂದು ಮೂಲಗಳು ತಿಳಿಸಿವೆ.

ನಂತರದ ದಿನಗಳಲ್ಲಿ ಆರೋಪಿ ಲಕ್ಷ್ಮಿಪ್ರಿಯಾ, ತನ್ನ ಚಿಕ್ಕಪ್ಪನ ಟ್ರೇಡ್ ಯಿ ಸಂಸ್ಥೆಯಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರಲಿದೆ ಎಂದು ದೂರುದಾರರಿಗೆ ಹೇಳಿ ನಂಬಿಸಿ ಹಂತಹಂತವಾಗಿ ಹಣ ಹೂಡಿಕೆ ಮಾಡಿಸಿಕೊಂಡು ಮೋಸ ಮಾಡಿದ್ದಾರೆ ಎಂದು ಪೊಲೀಸರು ಹೇಳಿದರು.

ಮನೆ ಬಿಟ್ಟು ಹೋಗುತ್ತಿದ್ದ ಪತ್ನಿ: ಬೇಸರಗೊಂಡ ಪತಿ ಆತ್ಮಹತ್ಯೆ

ಪದೇ ಪದೇ ಮನೆ ಬಿಟ್ಟು ಹೋಗುತ್ತಿದ್ದ ಪತ್ನಿಯ ವರ್ತನೆಯಿಂದ ಬೇಸತ್ತ ಪತಿ, ಕೆ.ಪಿ.ಅಗ್ರಹಾರದ 12ನೇ ಕ್ರಾಸ್ ನಿವಾಸಿ ಗೋವರ್ಧನ್ (37) ಎಂಬುವವರು ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗೋವರ್ಧನ್ ಅವರು ಏಳು ವರ್ಷಗಳ ಹಿಂದೆ ಪ್ರಿಯಾ ಅವರನ್ನು ಮದುವೆ ಆಗಿದ್ದರು. ದಂಪತಿಗೆ ಇಬ್ಬರು ಮಕ್ಕಳು ಇದ್ದಾರೆ. 'ಪ್ರಿಯಾ ಅವರು ಪದೇ ಪದೇ ಜಗಳ ಮಾಡಿಕೊಂಡು ಮನೆ ಬಿಟ್ಟು ಹೋಗುತ್ತಿದ್ದರು. ತಿಂಗಳ ಹಿಂದೆಯೂ ಪ್ರಿಯಾ ಮನೆ ಬಿಟ್ಟು ಹೋಗಿದ್ದರು. ಇದರಿಂದ ಬೇಸತ್ತ ಗೋವರ್ಧನ್ ಅವರು ಮನೆಯಲ್ಲಿ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಆತ್ಮಹತ್ಯೆ ಮಾಡಿಕೊಳ್ಳಲು ಪ್ರಿಯಾ ಅವರೇ ಕಾರಣ ಎಂಬುದಾಗಿ ಗೋವರ್ಧನ್ ಅವರ ಪೋಷಕರು ಆರೋಪಿಸಿದ್ದಾರೆ. ಕೆ.ಪಿ.ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪಘಾತ: ಸ್ಥಳದಲ್ಲೇ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾಂಕ್ರೀಟ್ ಮಿಶ್ರಣ ಲಾರಿ ಹಾಗೂ ದ್ವಿಚಕ್ರ ವಾಹನದ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಮಹಿಳೆಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.



ರತ್ನಾ

ನಾಗರಬಾವಿ ನಿವಾಸಿ ರತ್ನಾ (53) ಮೃತಪಟ್ಟವರು. ಬುಧವಾರ ಮಧ್ಯಾಹ್ನ 1 ಗಂಟೆಯ ಸುಮಾರಿಗೆ ಯಲಹಂಕದ ಬಿ.ಬಿ. ಮುಖ್ಯರಸ್ತೆ ವೆಂಕಟಾಲಾ ಮೇಲ್ಸೇತುವೆಯಲ್ಲಿ ಅಪಘಾತ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಬುಧವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ಚಿಕ್ಕಜಾಲ ಬಳಿಯಿರುವ ಮಗಳ ಮನೆಗೆ ಪತಿ ಪ್ರಕಾಶ್ ಜತೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ಸಂದರ್ಭದಲ್ಲಿ ಈ ಅವಘಡ ನಡೆದಿದೆ.

ವೆಂಕಟಾಲಾ ಮೇಲ್ಸೇತುವೆಯಲ್ಲಿ ಹೋಗುವಾಗ ಹಿಂದಿನಿಂದ ಅತೀವೇಗವಾಗಿ ಬಂದ ಕಾಂಕ್ರೀಟ್ ಮಿಶ್ರಣದ ಲಾರಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಕೆಳಕ್ಕೆ ಬಿದ್ದ ರತ್ನಾ ಅವರ ಮೇಲೆಯೇ ಲಾರಿಯ ಚಕ್ರ ಹರಿದು ಸ್ಥಳದಲ್ಲೇ ಮೃತಪಟ್ಟರು. ಲಾರಿ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಯಲಹಂಕ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಯಿ ಹತ್ಯೆ: ಸುಳಿವು ನೀಡಿದವರಿಗೆ ₹ 50 ಸಾವಿರ ಬಹುಮಾನ

ಕಾರ್ಕಳ (ಉಡುಪಿ): ತಾಲ್ಲೂಕಿನ ಮರ್ಣೆ ಯಲ್ಲಿ ನಾಯಿಗೆ ವಿಷ ಹಾಕಿ ಕೊಂದ ಪ್ರಕರಣಕ್ಕೆ ಸಂಬಂಧಿಸಿ ಸುಳಿವು ನೀಡಿದವರಿಗೆ ₹50 ಸಾವಿರ ಬಹುಮಾನ ನೀಡಲಾಗುವುದು ಎಂದು 'ಪೀಪಲ್ ಫಾರ್ ದಿ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್' (ಪೇಟಾ) ಘೋಷಿಸಿದೆ.

ಜೂನ್ 6 ರಂದು ಅಜೆಕಾರು ವಿಷ್ಣುಮೂರ್ತಿ ದೇವಸ್ಥಾನ ಪರಿಸರದಲ್ಲಿ ನಾಯಿಯ ಕಳೇಬರ ಪತ್ತೆಯಾಗಿತ್ತು. ನಾಯಿಗೆ ವಿಷ ಉಣಿಸಿರುವುದು ಮರಣೋತ್ತರ ಪರೀಕ್ಷೆಯಲ್ಲಿ ದೃಢಪಟ್ಟಿತ್ತು.

ನೈರುತ್ಯ ರೈಲ್ವೆ

ಇ-(ಐಆರ್‌ಇಪಿಎಸ್) ಟೆಂಡರ್ ಪ್ರಕಟಣೆ ಸಂಖ್ಯೆ 09 ಯುಬಿಎಲ್ 2025–26 ದಿನಾಂಕ: 05.06.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಉಪ ಕಾರ್ಯ–I) ಅಳ್ನಾವರ– ಲೋಂಡಾ (ಎಲ್‌ಡಬ್ಲ್ಯೂಆರ್–ಎಲ್‌ಡಿ) ವಿಭಾಗ: ಒಟ್ಟು 6.061 ಟಿಕೆಎಂ (ಡಿಎನ್) ಉದ್ದಕ್ಕೆ ಟಿಆರ್‌ಆರ್(ಪಿ). ಉಪ ಕಾರ್ಯ–II) ಲೋಂಡಾ–ವಾಸ್ಕೊ (ಎಲ್‌ಡಿ–ವಿಎಸ್‌ಜಿ) ವಿಭಾಗ: ಟಿಟಿಆರ್–38 ಸೆಟ್‌ಗಳು (1ರಲ್ಲಿ 16–2 ಸೆಟ್‌ಗಳಲ್ಲಿ 1:12–12 ಸೆಟ್‌ಗಳು, 1:8:5–22 ಸೆಟ್‌ಗಳು ಮತ್ತು ಟಿಎಸ್–02 ಸೆಟ್‌ಗಳು).	ರೂ. 1,54,29,775.00
2	ಹುಬ್ಬಳ್ಳಿ ವಿಭಾಗ: ಲೋಂಡಾ–ಕ್ಯಾಸಲ್‌ರಾಕ್ ವಿಭಾಗ: ಸಿಟಿಆರ್ (ಪಿ) 25.00 ಟಿಕೆಎಂ, ಯುಪಿ–0/000(21ಕೆಎಂ) ಮತ್ತು ಎಸ್‌ಎಲ್ 21/100–25/000(3.9 ಕಿ. ಮೀ).	ರೂ. 9,51,47,346.00
3	ಹುಬ್ಬಳ್ಳಿ ವಿಭಾಗ: ಉಪ ಕಾರ್ಯ–I) ಕ್ಯಾಸೆಲ್‌ರಾಕ್–ಕುಲೇಂ (ಸಿಎಲ್ ಆರ್–ಕ್ಯೂಎಲ್‌ಎಂ): ಘಾಟ್ ವಿಭಾಗದಲ್ಲಿ ಸೋನಾಲಿಯಂ (ಎಲ್‌ಐಎಂ) ಯಾರ್ಡ್‌ನಲ್ಲಿ 1.18 ಕಿ.ಮೀ.ಗೆ ಟಿಆರ್‌ಆರ್ (ಪಿ). ಉಪ ಕಾರ್ಯ–II) ಕ್ಯಾಸಲ್‌ರಾಕ್–ಕುಲೇಂ(ಸಿಎಲ್ ಆರ್–ಕ್ಯೂಎಲ್‌ಎಂ)ನ ಘಾಟ್ ವಿಭಾಗದಲ್ಲಿ ಕಡಿದಾದ ತಿರುವುಗಳಲ್ಲಿ ಚೆಕ್ ರೈಲ್ ಒದಗಿಸುವುದು. ಉಪ ಕಾರ್ಯ -III) ಲೋಂಡಾ–ವಾಸ್ಕೊ (ಎಲ್‌ಡಿ–ವಿಎಸ್‌ಜಿ) ಸೋನಾಲಿಯಂ– ಕುಲೇಂ ಘಾಟ್ ವಿಭಾಗದ 8.086 ಕಿ.ಮೀ. ಉದ್ದದ ಟಿಆರ್‌ಆರ್ (ಪಿ). ಉಪ ಕಾರ್ಯ-IV) ಲೋಂಡಾ–ವಾಸ್ಕೊ 33.186 ಕಿ.ಮೀ. ಉದ್ದದ ಲೂಪ್‌ಲೈನ್‌ಗಳಲ್ಲಿ (ಎಲ್‌ಡಿ–ವಿಎಸ್‌ಜಿ) ಟಿಆರ್‌ಆರ್(ಎಸ್).	ರೂ. 5,43,76,787.00
3	ಹುಬ್ಬಳ್ಳಿ ವಿಭಾಗ: ಉಪ ಕಾರ್ಯ-I: ಲೋಂಡಾ–ಮೀರಜ್ ಎಲ್‌ಡಿ–ಎಂಆರ್‌ಜೆ) ಗೋಕಾಕ್ ರಸ್ತೆ–ರಾಯಭಾಗ–ಮೀರಜ್ ವಿಭಾಗದಲ್ಲಿ 25.75 ಕಿ ಮೀ ಒಟ್ಟು ಉದ್ದಕ್ಕೆ ಸಿಟಿಆರ್ (ಪಿ) ಉಪ ಕಾರ್ಯ-II ಲೋಂಡಾ–ಮೀರಜ್ ವಿಭಾಗ (ಯುಪಿ) (ಎಲ್‌ಡಿ–ಎಂಆರ್‌ಜೆ)–24.975 ಕಿ ಮೀ ಒಟ್ಟು ಉದ್ದಕ್ಕೆ ಸಿಟಿಆರ್ (ಪಿ) ಉಪ ಕಾರ್ಯ -III) ಲೋಂಡಾ– ಮೀರಜ್ (ಎಲ್‌ಡಿ–ಎಂಆರ್‌ಜೆ) ನಲ್ಲಿ 21.6 ಕಿ ಮೀ ಒಟ್ಟು ಉದ್ದಕ್ಕೆ ಸಿಟಿಆರ್ (ಪಿ) ಸುಳದಾಳ್– ಗೋಕಾಕ್ ರಸ್ತೆ ವಿಭಾಗ (ಡಿಎನ್) 13.6 ಕಿ ಮೀ 8 ಕಿ ಮೀ ವರೆಗೆ. ಉಪ ಕೆಲಸ - IV: ಲೋಂಡಾ–ಮಿರಾಜ್(ಎಲ್‌ಡಿ–ಎಂಆರ್‌ಜೆ)– ಲೋಂಡಾ– ಖಾನಾಪುರ (ಎಲ್‌ಡಿ– ಕೆಎನ್‌ಪಿ)ವಿಭಾಗ (ಡಿಎನ್) ರಲ್ಲಿ ಒಟ್ಟು ಉದ್ದ 22.5 ಕಿ ಮೀಗೆ ಸಿಟಿಆರ್ (ಪಿ)	ರೂ. 28,19,52,575.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04-07–2025 ರಂದು 11.00 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಅಭಿಯಂತರರು /ಸಮನ್ವಯ, ಹುಬ್ಬಳ್ಳಿ

ಪಿಯುಬಿ/174/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblieಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRRLY

ಗಡಿ ಭದ್ರತಾ ಪಡೆ

ಟೆಂಡರ್ ನಂ. ಎಸ್‌ಟಿಸಿ/ಬಿಎಲ್‌ಆರ್/ಪ್ರೈ. ಶಾಪ್/2025/10266

// ಟೆಂಡರ್ ಆಹ್ವಾನ ಪ್ರಕಟಣೆ //

ಇನ್ಸ್‌ಪೆಕ್ಟರ್ ಜನರಲ್ ಎಸ್‌ಟಿಸಿ ಬಿಎಸ್‌ಎಫ್ ಬೆಂಗಳೂರು' ರವರ ಕಾರ್ಯಾಲಯ ಎಎಫ್‌ಎಸ್ ಯಲಹಂಕ ಅಂಚೆ, ಬೆಂಗಳೂರು – 63

1) **ಭಾರತದ ರಾಷ್ಟ್ರಪತಿಗಳ** ಪರವಾಗಿ ಇನ್ಸ್‌ಪೆಕ್ಟರ್ ಜನರಲ್ ಸಬ್ಸಿಡಿಯರಿ ಟ್ರೈನಿಂಗ್ ಸೆಂಟರ್ (ಎಸ್‌ಟಿಸಿ) ಬಿಎಸ್‌ಎಫ್, ಎಎಫ್‌ಎಸ್ ಯಲಹಂಕ ಅಂಚೆ, ಬೆಂಗಳೂರು–560063 ಇವರು **"ಖಾಸಗಿ ಮಳಿಗೆಗಳನ್ನು ನಡೆಸಲು"** ಆಸಕ್ತಿಯುಳ್ಳ ಪಕ್ಷಗಾರರಿಂದ/ವ್ಯಾಪಾರಿಗಳಿಂದ/ಸಂಸ್ಥೆಗಳಿಂದ ಬಹಿರಂಗ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
2) ಸದರಿ ಟೆಂಡರ್ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಯಾವುದೇ ಕೆಲಸದ ದಿನದಂದು, ಇನ್ಸ್‌ಪೆಕ್ಟರ್ ಜನರಲ್ ಎಸ್‌ಟಿಸಿ ಬಿಎಸ್‌ಎಫ್ ಬೆಂಗಳೂರು ಕಾರ್ಯಾಲಯ, ಎಎಫ್‌ಎಸ್ ಯಲಹಂಕ ಅಂಚೆ, ಬೆಂಗಳೂರು – 560063 ಇವರಿಂದ, ಟೆಂಡರ್ ನಮೂನೆಗಳನ್ನು ಪಡೆದುಕೊಳ್ಳಬಹುದು. ಟೆಂಡರ್ ಫಾರಂ ಶುಲ್ಕ **ರೂ. 100/– (ರೂಪಾಯಿ ಒಂದು ನೂರು)** ಮಾತ್ರ. ಆಸಕ್ತ ಪಕ್ಷಗಾರರು/ಸಂಸ್ಥೆಗಳು ಕ್ಯಾಂಪಸ್‌ಗೆ ಭೇಟಿ ನೀಡಿ, ಸದರಿ ಕಚೇರಿಯಿಂದ ಟೆಂಡರ್ ದಸ್ತಾವೇಜುಗಳನ್ನು ಪಡೆದುಕೊಳ್ಳಬಹುದು ಮತ್ತು 27ನೇ ಜೂನ್, 2025 ರಂದು 1800 ಗಂಟೆಯೊಳಗೆ ಸಲ್ಲಿಸುವುದು.
3) **28ನೇ ಜೂನ್, 2025 ರಂದು 1100 ಗಂಟೆಗೆ** ಟೆಂಡರ್‌ಗಳನ್ನು ತೆರೆಯಲಾಗುವುದು.
4) ಇನ್ಸ್‌ಪೆಕ್ಟರ್ ಜನರಲ್‌ರವರು ಯಾವುದೇ ಕಾರಣ ನೀಡದೆಯೆ, ಸಂದಾಯ ವಾಗುವ ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ ಮತ್ತು ಇವರ ನಿರ್ಧಾರವೇ ಅಂತಿಮವಾಗಿರುತ್ತದೆ ಹಾಗೂ ಅದೇ ಎಲ್ಲರಿಗೂ ಅನ್ವಯವಾಗುತ್ತದೆ.

ಸಹಿ/–
ಡೆ. ಕಮಾಂಡಂಟ್ (ಪ್ರಾವ್)

CBC 19110/11/0021/2526

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಿಐಎನ್: ಯು40109ಕೆಎ1999ಎಸ್‌ಜಿಸಿ025521

ಸಂಖ್ಯೆ: ಮುಇಂ/ತು/ಪ್ರ(ಕಾ)ವ/ಅಇಂ(ಕ)/ಸ.ಕಾನಿಇಂ–1/2025–26/2809–11&2836–38 ದಿನಾಂಕ: 10.06.2025

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ತುಮಕೂರು, ಪ್ರಸರಣ (ಕಾರ್ಯಾಚರಣೆ) ವಲಯದಲ್ಲಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಭಾಗಶ: ಟರ್ನ್‌ಕೀ ಆಧಾರದ ಮೇಲೆ ಕೆಳಕಂಡ ಬಿಡ್ ವಿಚಾರಣೆ ಅನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ.

(1) ಬಿಡ್ ವಿಚಾರಣೆ ಸಂಖ್ಯೆ. ಕವಿಪ್ರನಿನಿ/ಮುಇಂ/ಪ್ರ(ಕಾ)/ತು/ಅಇಂ(ಕ)/ಸ.ಕಾನಿಇಂ–1/2025–26/ಬಿಡ್ ವಿಚಾರಣೆ–0007 ದಿನಾಂಕ 17.04.2025.–ಕರೆ ಸಂಖ್ಯೆ–2 ರ ಅನ್ವಯ "ನಿಟ್ಟೂರು ನೋಡಲ್ ಕೇಂದ್ರ ವ್ಯಾಪ್ತಿಯ **110/11 ಕೆವಿ ಉಪ ವಿದ್ಯುತ್ ಕೇಂದ್ರ ದೊಡ್ಡಗುಣಿಯಲ್ಲಿ** ಓವರ್ ಲೋಡ್ ಆಗಿರುವ ಅಸ್ತಿತ್ವದಲ್ಲಿರುವ ಫೀಡರ್‌ಗಳ ವಿಭಜನೆಗಾಗಿ 11ಕೆವಿ ಎಂ.ಇ.ಐ ಮೇಕ್, 350ಎಂವಿಎ, 800ಎ, 20ಕೆಎ, PCVCB ಮಾದರಿಯ ಹೆಚ್ಚುವರಿ ಸ್ವಿಚ್‌ಗೇರ್‌ಗಳನ್ನು ಅಳವಡಿಸುವ ಕಾಮಗಾರಿ".

(2) ಬಿಡ್ ವಿಚಾರಣೆ ಸಂಖ್ಯೆ. ಕವಿಪ್ರನಿನಿ/ಮುಇಂ/ಪ್ರ(ಕಾ)/ತು/ಅಇಂ(ಕ)/ಸ.ಕಾನಿಇಂ–1/2025–26/ಬಿಡ್ ವಿಚಾರಣೆ–0025 ದಿನಾಂಕ 10.06.2025 ರ ಅನ್ವಯ "ಶಿರಾ ಟಿ.ಎಲ್.ಎಂ. ಶಾಖಾ ವ್ಯಾಪ್ತಿಯ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನ, **ಶಿರಾ ಹೈವೇ ಬೈ ಪಾಸ್ ಎನ್.ಹೆಚ್.48 ರಲ್ಲಿ ಆಸ್ತಿತ್ವದಲ್ಲಿರುವ 66ಕೆವಿ ಶಿರಾ–ಕಳ್ಳಂಬೆಳ್ಳ ಎಸ್/ಸಿ ಲೈನ್‌ನಲ್ಲಿ ಹಾನಿಗೊಳಗಾಗಿರುವ ಟವರ್ ಸಂಖ್ಯೆ: 14**ಅನ್ನು ಬದಲಾಯಿಸಿ ಹೊಸ ಗೋಪುರಗಳನ್ನು ಅಳವಡಿಸುವ ಕಾಮಗಾರಿ".

ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ಗೆ ಹೈಪರ್‌ಲಿಂಕ್ E Procurement KPTCL ನಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ **ದಿನಾಂಕ: 12.06.2025 ರಂದು ಅಥವಾ ತದ ನಂತರ** (ಕ್ರ.ಸಂ.1ಕ್ಕೆ) **ಹಾಗೂ ದಿನಾಂಕ: 13.06.2025 ರಂದು ಅಥವಾ ತದ ನಂತರ** (ಕ್ರ.ಸಂ.2ಕ್ಕೆ) ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಈ ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಇಂಜಿನಿಯರ್(ವಿದ್ಯುತ್)
ಪ್ರಸರಣ (ಕಾರ್ಯಾಚರಣೆ) ವಲಯ, 1ನೇ ಮಹಡಿ, "ಪ್ರಸರಣ ಭವನ",
ಕವಿಪ್ರನಿನಿ, 66/11 ಕೆವಿ ತುಮಕೂರು ಉಪ ಕೇಂದ್ರದ ಆವರಣ, ತುಮಕೂರು–572103

ಪುರಸಭಾ ಕಾರ್ಯಾಲಯ, ಚಿಕ್ಕಬಾಣಾವರ

ಸಂತೆಬೀದಿ ವೃತ್ತ, ಚಿಕ್ಕಬಾಣಾವಾರ, ಚಿಕ್ಕಬಾಣಾವರ ಅಂಚೆ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು – 560090.
ದೂ: 080–28395098, Email: ka.chikkabanavara.tmc@gmail.com, Website: https://chikkabanavaratown.mrc.gov.in

ನಂ.ಪುಸಚಿ/ಆಶಾ/ಇ.ಇ/ಸಿ.ಆರ್/103/2025–26 ದಿನಾಂಕ: 11/06/2025

ಆಸಕ್ತಿಯ ಅಭಿವ್ಯಕ್ತಿಗಾಗಿ ಆಹ್ವಾನ

Invitation for Expression of Interest

ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ ಅಭಿಯಾನ 2.0 ಯೋಜನೆಯ ಅಡಿಯಲ್ಲಿ **3 ವರ್ಷಗಳ ಅವಧಿಗೆ ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ (IEC) ಚಟುವಟಿಕೆ ಕೈಗೊಳ್ಳಲು ಸ್ವಸಹಾಯ ಗುಂಪುಗಳ (SHG) ಸದಸ್ಯರನ್ನು Community Mobiliser ಎಂಬುದಾಗಿ ನೇಮಕಾತಿ ಮಾಡಿಕೊಳ್ಳಲು** ಈ ಮೂಲಕ ಆಸಕ್ತಿಯ ಅಭಿವ್ಯಕ್ತಿ ಆಹ್ವಾನಿಸಲಾಗಿದೆ.

ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿ ಸರ್ಕಾರದಿಂದ ನೋಂದಾಯಿತ ಸ್ವಸಹಾಯ ಗುಂಪುಗಳ ಸದಸ್ಯರಾಗಿದ್ದು, ಕನಿಷ್ಟ ಎಸ್.ಎಸ್.ಎಲ್.ಸಿ./10ನೇ ತರಗತಿ ಉತ್ತೀರ್ಣರಾಗಿದ್ದು, ಕನ್ನಡ ಮಾತನಾಡುವ ಹಾಗೂ ಗಣಕಯಂತ್ರದಲ್ಲಿ M.S. Excel ಹಾಗೂ M.S. Office ಮೂಲಕ ದಾಖಲೀಕರಣ ಅನುಭವ ಹೊಂದಿರುವವರು ಅಭಿವ್ಯಕ್ತಿ ಸಲ್ಲಿಸಲು ಅರ್ಹರಾಗಿರುತ್ತಾರೆ. ವಿವರವಾದ TOR, ಆಯ್ಕೆ ಪ್ರಕ್ರಿಯೆ, ಸಂಭಾವನೆ ಹಾಗೂ ಅರ್ಜಿಯ ನಮೂನೆಯನ್ನು http://www.chikkabanavaratown.mrc.gov.in/en/download-forms ಜಾಲತಾಣದಲ್ಲಿ ಲಭ್ಯವಿರುತ್ತದೆ.

ಆಸಕ್ತರು ಅವಶ್ಯಕ ದಾಖಲೆಗಳನ್ನು ಲಗತ್ತಿಸಿ, ನಿಗದಿತ ನಮೂನೆಯಲ್ಲಿ "ಆಸಕ್ತಿಯ ಅಭಿವ್ಯಕ್ತಿ" ಅರ್ಜಿಯನ್ನು **ದಿನಾಂಕ: 19.06.2025ರಂದು ಸಾಯಂಕಾಲ 5.00 ಗಂಟೆಯೊಳಗಾಗಿ** ಇ–ಮೇಲ್ ವಿಳಾಸ **ka.chikkabanavara.tmc@gmail.com** ರ ಮೂಲಕ ಸಲ್ಲಿಸತಕ್ಕದ್ದು ಹಾಗೂ ಒಂದು ಪ್ರತಿಯನ್ನು ಪುರಸಭೆಯ ಆರೋಗ್ಯ ವಿಭಾಗಕ್ಕೆ ಸಲ್ಲಿಸುವುದು. ಅರ್ಜಿಯೊಂದಿಗೆ 1) ಗುರುತಿನ ಪುರಾವೆ, 2) ವಿಳಾಸ ಪುರಾವೆ, 3) SHG ನೋಂದಣಿ ಪುರಾವೆ ದಾಖಲೆಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಸಹಿ/–
ಮುಖ್ಯಾಧಿಕಾರಿ
ಪುರಸಭೆ, ಚಿಕ್ಕಬಾಣಾವರ

DIPR/CP/YC/1188/2025-26

ಪಿ ಎಂ ಶ್ರೀ ಕೇಂದ್ರೀಯ ವಿದ್ಯಾಲಯ ನಂ 1 ಜಾಲಹಳ್ಳಿ ಪಶ್ಚಿಮ ಬೆಂಗಳೂರು -560015
पीएम श्री केन्द्रीय विद्यालय नंबर 1 जालहल्ली पश्चिम, बैंगलोर -560015

PM SHRI KENDRIYA VIDYALAYA NO 1 JALAHALLI WEST, BENGALURU - 560015

(An Autonomous body under the Ministry of Education, Govt of India)
KV CODE: 1051 CBSE AFFILIATION NO: 800004 CBSE SCHOOL CODE: 49003
UDISE: 29280229803 EMAIL: kv1jalahalli@gmail.com
Contact No: 080-28388422 web: https://no1jalahalli.kvs.ac.in

ದಿನಾಂಕ: 11–06–2025

ಅರೆಕಾಲಿಕ ಗುತ್ತಿಗೆ ಶಿಕ್ಷಕರಿಗಾಗಿ 23–06–2025 ರಂದು ವಾಕ್–ಇನ್–ಇಂಟರ್‌ವ್ಯೂ–2025–26 ಅರ್ಹ ಅಭ್ಯರ್ಥಿಗಳು 23–06–2025 ರಂದು ವಿದ್ಯಾಲಯದಲ್ಲಿ ಸಂದರ್ಶನಕ್ಕೆ ಬರುತ್ತಾರೆ.

ಪೋಸ್ಟ್	ವಿಷಯಗಳು
ಸ್ನಾತಕೋತ್ತರ ಶಿಕ್ಷಕರು (ಪಿಜಿಟಿ)	ಅರ್ಥಶಾಸ್ತ್ರ ಮತ್ತು ಭೌತಶಾಸ್ತ್ರ
ಸ್ನಾತಕೋತ್ತರ ಶಿಕ್ಷಕರು (ಪಿಜಿಟಿ)	ಕಂಪ್ಯೂಟರ್ ವಿಜ್ಞಾನ
ತರಬೇತಿ ಪಡೆದ ಪದವೀಧರ ಶಿಕ್ಷಕರು (ಟಿಜಿಟಿ)	ಸಂಸ್ಕೃತ
ಯೋಗ ತರಬೇತುದಾರ	

ವಿವರಗಳಿಗಾಗಿ ದಯವಿಟ್ಟು https://no1jalahalli.kvs.ac.in ವೆಬ್‌ಸೈಟ್‌ಗೆ ಭೇಟಿ ನೀಡಿ ವರದಿ ಮಾಡುವ ಸಮಯ ಬೆಳಿಗ್ಗೆ 08:30. ನೋಂದಣಿ 23/06/2025 ರಂದು ಬೆಳಿಗ್ಗೆ 9.30 ಕ್ಕೆ ಮುಕ್ತಾಯಗೊಳ್ಳುತ್ತದೆ.

ಪ್ರಾಂಶುಪಾಲರು
ಕೆವಿ ನಂ. 1 ಜಾಲಹಳ್ಳಿ

FEDERATION OF KARNATAKA CHAMBERS OF COMMERCE & INDUSTRY

Post Office Box No.9996, K G Road, Bengaluru-560 009, India
Phone: (91-80) 2226 2355/6, 2226 2157/8, 4082 8300/1
Fax: 2225 1826, 2238 5908 Email: info@fkcci.in / helpdesk@fkcci.in

Estd. 1916

Ref No: 001/CESTC/2025-26 | June 12, 2025

TENDER NOTIFICATION

The Quotations are invited on the prescribed tender document from the reputed registered experienced eligible /qualified contractors for the Proposed Construction of Commercial Building for "PROPOSED CONSTRUCTION OF SKILLED TRAINING CENTRE FOR M/S.FKCCI ON PLOT NO AM-26, SOMPURA 2ND STAGE INDUSTRIAL AREA, BENGALURU RURAL DISTRICT.

Eligible contractor can obtain Tender Documents for the above-mentioned work from the office of the Federation of Karnataka Chambers of Commerce & Industry, Post Office Box No.9996, K G Road, Bengaluru-560 009, India on payment of Rs.5,000/-in the form of DD in favour of Federation of Karnataka Chambers of Commerce & Industry, on any working day in Office hour from 12/06/2025 to 30/06/2025 upto 5 p.m.

Last date for submission of Completed Sealed Tenders is on 03-07-2025 upto 4 p.m. in the same office.

The Managing Committee, Federation of Karnataka Chambers of Commerce & Industry reserves the right to accept / reject any or all the quotations without assigning any reason.

Sd/-
The President, FKCCI, Bengaluru

FKCCI-25602

PUBLIC NOTICE

This is to inform the general public that, we are investigating the title of the below described **'Item 1 and Item 2 of Schedule Property'**, claimed to be belonging to and owned by **Smt. R. Nagarathnamma**, W/o. Sri .T. Mahendra **("Owner")**.

The Owner represents that Schedule Property was the absolute property of Sri.Venkatarayappa. Sri. Venkatarayappa died issueless leaving behind his two wives Smt. Nagamma and Smt. Ramakka. Thereafter, Smt. Nagamma and Smt. Ramakka have entered into a Partition Deed dated 26/09/1935 wherein Item No. 1 of the Schedule Property was allotted to the share of Smt. Nagamma and Item No. 2 of the Schedule Property was allotted to the share of Smt. Ramakka. The said Partition Deed is registered vide Document No. 1154/1935-36 of Book – I, Volume 330, at Pages 211 to 226, in the office of the Sub-Registrar, Bangalore.

On the death of Smt. Nagamma and Smt. Ramakka, the Owner (i.e. Smt. R. Nagarathnamma) claiming to be their daughter and being their only legal heir and there being no other legal heirs inherited the Schedule Property as her absolute property and the Katha/Mutation of the Schedule Property has been transferred in her name vide M. R. No. T8/2024-25 and H3/2024-25. The Owner represents that she is in peaceful possession, enjoyment and occupation of the Schedule Property as absolute owner without any let or hindrance from anyone and have a good marketable, right, title and interest therein and that apart from her there are no other person/s having any right or claim over the Schedule Property. The Owner further represents that she has not entered into any Agreements/MoU, Joint Development Agreements with any third party and that the Owner has not mortgaged, created any right, interest, lien or encumbered the Schedule Property or any part thereof in any manner with any person/s.

Notice is hereby given to the general public that any person/s other than the Owner asserting any right, title, interest, claim or demand in relation to the Schedule Property or any part thereof or the documents thereof or against the Owner, may lodge their statements, objections or claims in writing, along with documentary evidence in support thereof, with the Undersigned, within **15** (fifteen) **days** from the date of publication of this notice. In the absence of any genuine and rightful objections and/or claims, we will procced to issue our opinion on title in respect of the Schedule Property without reference to any such rights etc. and the same, if any, will be considered consciously waived and abandoned forever.

Schedule Property

All that piece and parcel of below described 23 Guntas of land situated at Yelahanka Amanikere Village, Yelahanka Hobli, Yelahanka Taluk:

Item No.	Survey No.	Extent	Boundaries			
		Guntas	East	West	North	South
1	38/1	10	Sy 39/6	Nala & Sy 42/5 & 43/1	Sy 40/5	Sy 38/2
2	43/5	13	Nala & Sy 37/1	Nala & Village boundary	Sy 43/4	Sy 44

Jayanth M Pattanshetti, Advocate,
Jayanth Pattanshetti Associates LLP,
102, Ground Floor, "Rams Infantry Manor",
No. 70, Infantry Road, Bengaluru - 560001.
Ph. 080-25593195/080-25581469

Place: Bengaluru
Date:12-06-2025

ನೈರುತ್ಯ ರೈಲ್ವೆ

ಇ-ಪ್ರೊಕ್ಯೂರ್‌ಮೆಂಟ್ (ಐಆರ್‌ಇಪಿಎಸ್)
ಟೆಂಡರ್ ಪ್ರಕಟಣೆ ಸಂಖ್ಯೆ: ಎಚ್–ಜಿಎಸ್–ಯುಬಿಎಲ್ –02–2025–26, ದಿನಾಂಕ: 05.06.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿಯಲ್ಲಿ ಇಂಟಿಗ್ರೇಟೆಡ್ ರೋಲಿಂಗ್ ಸ್ಟಾಕ್ ಕೋಚಿಂಗ್ ಡಿಪೋ ವಿನ್ಯಾಸ, ಪೂರೈಕೆ, ನಿರ್ಮಾಣ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭ, ಇದರಲ್ಲಿ ಎಲ್ಲಾ ಸಿವಿಲ್, ವಿದ್ಯುತ್ ಜನರಲ್, ವಿದ್ಯುತ್ ಟ್ರಾಕ್ಷನ್, ಸಂಕೇತ ಮತ್ತು ದೂರ–ಸಂಪರ್ಕ ಕೆಲಸಗಳು ಮತ್ತು ಯಂತ್ರೋಪಕರಣಗಳು, ಎಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ ("ಇಪಿಸಿ") ಆಧಾರದ ಮೇಲೆ ಉಪಕರಣಗಳು ಮತ್ತು ಪ್ಲಾಂಟ್ಸ್ ಸೇರಿವೆ. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30–07–2025 ರಂದು 11:00 ಗಂಟೆಯವರೆಗೆ	ರೂ. 292,74,19,268/–
2	ವಾಸ್ಕೋ–ಡ–ಗಾಮಾ ರೈಲು ನಿಲ್ದಾಣದ ಪುನರಾಭಿವೃದ್ಧಿಗೆ ಮತ್ತು ಸಂಬಂಧಿತ ಸಾಮಾನ್ಯ ವಿದ್ಯುತ್ ಮತ್ತು ದೂರಸಂಪರ್ಕ ಕಾಮಗಾರಿಗಳಿಗೆ (ಸಂಯೋಜಿತ ಕೆಲಸ) ಹೆಚ್ಚುವರಿ ಕೆಲಸ. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30–06–2025 ರಂದು 11:00 ಗಂಟೆಯವರೆಗೆ	ರೂ. 43,93,43,373/–

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಮುಖ್ಯ ಯೋಜನಾ ವ್ಯವಸ್ಥಾಪಕರು/ಗತಿಶಕ್ತಿ, ಹುಬ್ಬಳ್ಳಿ

ಪಿಯುಬಿ/175/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblieಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRRLY

IN THE COURT OF THE III ADDITIONAL CIVIL JUDGE AND JMFC AT MYSURU
O.S.No.770/2024

Plaintiff : Sri Omprakash Bhandari, S/o Late Deepchand Bhandari, Aged about 62 years, Residing at Door No.29/13, "Navkaar", 33rd 'A' Cross, 14th Main Road, 4th 'T' Block, Jayanagar, Bangalore-560041.

V/s

Defendant: Smt. Priyadarshini, W/o Krishnappa, Aged about 70 years, Residing at : No.2937/38/E, Govardhana Priya, Service Road, Vijayanagara, Bangalore-560040.

PUBLIC NOTICE

It is hereby notified that, the plaintiff has filed the above suit against the defendant seeking for declaration and mandatory injunction.

Hence, the Plaintiff hereby notified that, the hearing of the case is fixed on **04-08-2025** If you have any defense/claim, all of you shall appear before the Hon'ble Court on **04-08-2025 at 11:00 AM** either in person or through the pleader. Failing the case will be decided ex-parte.

By Order of the Hon'ble Court
Chief Ministerial Officer,
Civil Judge & JMFC Court, Mysuru

Place: Mysore Date: 04-06-2025

BEFORE THE NATIONAL COMPANY LAW TRIBUNAL BENGALURU BENCH, AT BENGALURU
C.P. (CAA) NO. 19/BB/2025
CONNECTED WITH
C.A. (CAA) NO. 47/BB/2024
(under Sections 230-232 of the Companies Act, 2013)
IN THE MATTER OF THE COMPANIES ACT, 2013
AND
IN THE MATTER OF THE SCHEME OF AMALGAMATION BETWEEN AMAZON TRANSPORTATION SERVICES PRIVATE LIMITED AND AMAZON SELLER SERVICES PRIVATE LIMITED AND THEIR RESPECTIVE SHAREHOLDERS AND CREDITORS
AND
IN THE MATTER OF:

Amazon Transportation Services Private Limited, private limited company incorporated under the provisions of the Companies Act, 1956, having its registered office situated at No. 26/1, Brigade Gateway, World Trade Centre, 8th & 10th Floor, Dr. Rajkumar Road, Malleshwaram (W), Bangalore, Karnataka - 560055.

...Transferor Company / Petitioner Company 1

AND

Amazon Seller Services Private Limited, a company incorporated under the Companies Act, 1956, having its registered office at 8th Floor, Brigade Gateway 26/1 Dr. Rajkumar Road, Bangalore, Karnataka - 560055.

...Transferee Company / Petitioner Company 2

NOTICE OF PETITION

A joint second motion petition (**"Petition"**) under Sections 230 to 232 and other applicable provisions of the Companies Act, 2013 seeking the approval of the scheme of amalgamation between Amazon Transportation Services Private Limited and Amazon Seller Services Private Limited (**"Company"**) and their respective shareholders and creditors was presented by the Petitioner Companies on April 25, 2025, and the said Petition is fixed for hearing before the Bengaluru Bench of the Hon'ble National Company Law Tribunal on July 17, 2025.

Any person desirous of supporting or opposing the said Petition should send to the Company's advocates, notice of his/her intention, signed by him/her or his/her advocate, with his/her name and address, so as to reach the Company's advocates not later than two days before the date fixed for the hearing of the Petition. Where he/she seeks to oppose the Petition, the grounds of opposition or a copy of his/her affidavit shall be furnished with such notice. A copy of the Petition will be furnished by the undersigned to any person requiring the same on payment of the prescribed charges for the same.

For Amazon Seller Services Private Limited
Sd/- Represented by their Advocates,
AZB & Partners
37 Cunningham, 5th Floor,
Cunningham Road, Bengaluru - 560052.
Date: June 12, 2025
Place: Bengaluru, Karnataka

BEFORE THE NATIONAL COMPANY LAW TRIBUNAL BENGALURU BENCH, AT BENGALURU
C.P. (CAA) NO. 19/BB/2025
CONNECTED WITH
C.A. (CAA) NO. 47/BB/2024
(under Sections 230-232 of the Companies Act, 2013)
IN THE MATTER OF THE COMPANIES ACT, 2013
AND
IN THE MATTER OF THE SCHEME OF AMALGAMATION BETWEEN AMAZON TRANSPORTATION SERVICES PRIVATE LIMITED AND AMAZON SELLER SERVICES PRIVATE LIMITED AND THEIR RESPECTIVE SHAREHOLDERS AND CREDITORS
AND
IN THE MATTER OF:

Amazon Transportation Services Private Limited, private limited company incorporated under the provisions of the Companies Act, 1956, having its registered office situated at No. 26/1, Brigade Gateway, World Trade Centre, 8th & 10th Floor, Dr. Rajkumar Road, Malleshwaram (W), Bangalore, Karnataka - 560055.

...Transferor Company / Petitioner Company 1

AND

Amazon Seller Services Private Limited, a company incorporated under the Companies Act, 1956, having its registered office at 8th Floor, Brigade Gateway 26/1 Dr. Rajkumar Road, Bangalore, Karnataka - 560055.

...Transferee Company / Petitioner Company 2

NOTICE OF PETITION

A joint second motion petition (**"Petition"**) under Sections 230 to 232 and other applicable provisions of the Companies Act, 2013 seeking the approval of the scheme of amalgamation between Amazon Transportation Services Private Limited and Amazon Seller Services Private Limited (**"Company"**) and their respective shareholders and creditors was presented by the Petitioner Companies on April 25, 2025, and the said Petition is fixed for hearing before the Bengaluru Bench of the Hon'ble National Company Law Tribunal on July 17, 2025.

Any person desirous of supporting or opposing the said Petition should send to the Company's advocates, notice of his/her intention, signed by him/her or his/her advocate, with his/her name and address, so as to reach the Company's advocates not later than two days before the date fixed for the hearing of the Petition. Where he/she seeks to oppose the Petition, the grounds of opposition or a copy of his/her affidavit shall be furnished with such notice. A copy of the Petition will be furnished by the undersigned to any person requiring the same on payment of the prescribed charges for the same.

For Amazon Transportation Services Private Limited
Sd/- Represented by their Advocates,
AZB & Partners
37 Cunningham, 5th Floor,
Cunningham Road, Bengaluru - 560052.
Date: June 12, 2025
Place: Bengaluru, Karnataka

ಭಾರತ ಸರ್ಕಾರ
ಸಾಲ ವಸೂಲಾತಿ ನ್ಯಾಯಾಧಿಕರಣ–1
ಬಿಎಸ್‌ಎನ್‌ಎಲ್ ಬಿಲ್ಡಿಂಗ್, 2ನೇ ಮಹಡಿ, ಟೆಲಿಫೋನ್ ಹೌಸ್, ರಾಜಭವನ್ ರಸ್ತೆ, ಬೆಂಗಳೂರು-01

ಸ್ಥಿರಾಸ್ತಿಗಳನ್ನು ಜಪ್ತಿ ಮಾಡಿಕೊಳ್ಳುವುದರ ವಾರಂಟ್

(ಡೆಟ್ಸ್ ಡ್ಯೂ ಟು ಬ್ಯಾಂಕ್ಸ್ ಅಂಡ್ ಅದರ್ ಫೈನಾನ್ಶಿಯಲ್ ಇನ್ಸಿಟಿಟ್ಯೂಷನ್ಸ್ ಆಕ್ಟ್ 1993, ನಿಯಮ 25 ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲ್‌ನ ನಿಯಮ 48–51 ನ್ನು ಓದಿಕೊಂಡಂತೆ)

ಆರ್‌ಸಿ ನಂ. 187/2024 ಒ.ಎ. ನಂ.1478/2018

ನಡುವೆ **ಕರ್ನಾಟಕ ಗ್ರಾಮೀಣ ಬ್ಯಾಂಕ್,** (ಈ ಮೊದಲು ಕಾವೇರಿ ಗ್ರಾಮೀಣ ಬ್ಯಾಂಕ್), ಬೆಳ್ಳಂದೂರು ಶಾಖೆ, ಹೊರ ವರ್ತುಲ ರಸ್ತೆ, ಬೆಂಗಳೂರು, ಕರ್ನಾಟಕ – 560 103 **...ಸರ್ಟಿಫಿಕೇಟ್ ಹೋಲ್ಡರ್**

V/s.

ಶ್ರೀ ಬಿ. ಕೆ. ಕೃಷ್ಣಮೂರ್ತಿ ಮತ್ತು ಇತರರು **...ಸರ್ಟಿಫಿಕೇಟ್ ಡೆಟರ್ಸ್**

(ಸಿಡಿ 1) ಶ್ರೀ ಬಿ. ಕೆ. ಕೃಷ್ಣಮೂರ್ತಿ, ಬಿನ್ ಲೇಟ್ ಶ್ರೀ ಬಿ .ಆರ್. ಕೃಷ್ಣಪ್ಪ, ನಂ. 251, ಹಾಳುಬಾವಿ ರಸ್ತೆ, ವರ್ತೂರು ಗ್ರಾಮ ಮತ್ತು ಅಂಚೆ, ಬೆಂಗಳೂರು – 560 087.
(ಸಿಡಿ 2) ಶ್ರೀ ಬಿ. ಕೆ. ಮಂಜುನಾಥ್ ಬಿನ್ ಲೇಟ್ ಶ್ರೀ ಬಿ .ಆರ್. ಕೃಷ್ಣಪ್ಪ, ನಂ. 256, ಹಾಳುಬಾವಿ ರಸ್ತೆ, ವರ್ತೂರು ಗ್ರಾಮ ಮತ್ತು ಅಂಚೆ, ಬೆಂಗಳೂರು – 560 087.
ಇವರಿಗೆ, ಶಾಖಾ ಪ್ರಬಂಧಕರು, ಕರ್ನಾಟಕ ಗ್ರಾಮೀಣ ಬ್ಯಾಂಕ್, ಬೆಳ್ಳಂದೂರು ಶಾಖೆ, ಹೊರ ವರ್ತುಲ ರಸ್ತೆ, ಬೆಂಗಳೂರು, ಕರ್ನಾಟಕ – 560 087.

ಆದಾಗ್ಯೂ, ಮೇಲ್ಕಂಡ ಸರ್ಟಿಫಿಕೇಟ್ ಡೆಟರ್ಸ್‌ರವರು ನ್ಯಾಯಾಧಿಕರಣದಿಂದ ಜಾರಿಯಾದ ರಿಕವರಿ ಸರ್ಟಿಫಿಕೇಟ್ ಆರ್‌ಸಿ ನಂ. 187/2024 ನಂತೆ ಸರ್ಟಿಫಿಕೇಟ್ ಹೋಲ್ಡರ್ ರವರಿಗೆ ನೀಡಬೇಕಾದ ಬಾಕಿ ಮೊತ್ತ ರರೂ.19,64,293/– (ರೂಪಾಯಿ ಹತ್ತೊಂಬತ್ತು ಲಕ್ಷ ಅರವತ್ತನಾಲ್ಕು ಸಾವಿರದ ಇನ್ನೂರ ತೊಂಬತ್ತ ಮೂರು ಮಾತ್ರ) ಜೊತೆಗೆ ಖರ್ಚು ಮತ್ತು ವೆಚ್ಚ ಒ.ಎ ಯನ್ನು ಸಲ್ಲಿಸಿದ ದಿನಾಂಕದಿಂದ ಪೂರ್ತಿ ಪಾವತಿಯ ದಿನಾಂಕದವರೆಗಿನ ಬಡ್ಡಿಯನ್ನು ಸರ್ಟಿಫಿಕೇಟ್ ಡೆಟರ್ಸ್‌ರವರಿಗೆ ಬರಬೇಕಾಗಿದೆ. ಮತ್ತು ಸರ್ಟಿಫಿಕೇಟ್ ಡೆಟರ್ಸ್‌ರವರು ಸದರಿ ಮೊತ್ತವನ್ನು ಪಾವತಿಸಲು ವಿಫಲರಾಗಿರುತ್ತಾರೆ.

ದಿನಾಂಕ 30.11.2024ರಂತೆ ಈ ವಿಷಯದಲ್ಲಿನ ಬಾಕಿ ಮೊತ್ತ ರೂ.33,54,159/– (ರೂಪಾಯಿ ಮೂವತ್ತ ಮೂರು ಲಕ್ಷ ಐವತ್ತ ನಾಲ್ಕು ಸಾವಿರದ ಒಂದು ನೂರ ಐವತೊಂಬತ್ತು ಮಾತ್ರ) ಜೊತೆಗೆ ಸದರಿ ಮೊತ್ತ ಮತ್ತು ಖರ್ಚು, ವೆಚ್ಚ ಮತ್ತು ಮುಂದಿನ ಬಡ್ಡಿಯನ್ನು ಪಾವತಿಸಿರುವುದಿಲ್ಲ. ಕೆಳಸಹಿದಾರರು ಈ ಕೆಳಗೆ ಸೂಚಿಸಿರುವ ಆಸ್ತಿಗಳ ಮಾರಾಟಕ್ಕೆ ಆದೇಶವನ್ನು ನೀಡಿರುತ್ತಾರೆ.

ಆದಾಗ್ಯೂ, ಮೇಲ್ಕಂಡ ಬಾಕಿಗಳನ್ನು ಸರ್ಟಿಫಿಕೇಟ್ ಡೆಟರ್ಸ್‌ರವರು ಪಾವತಿಸಿರುವುದಿಲ್ಲ, ಈ ಮೂಲಕ ನಿಮಗೆ ಆದೇಶ ನೀಡುವುದೇನೆಂದರೆ, ಸದರಿ ಸೆಕ್ಯೂರ್ಡ್ ಕ್ರೆಡಿಟರ್ ರವರ ಈ ಕೆಳಗೆ ಸೂಚಿಸಿರುವ ಷೆಡ್ಯೂಲ್‌ನಲ್ಲಿರುವ ಸ್ಥಿರಾಸ್ತಿಗಳನ್ನು ಜಪ್ತಿಮಾಡಿಕೊಳ್ಳಬಹುದಾಗಿದೆ. ಸದರಿ ವ್ಯಕ್ತಿಗಳು ಮೇಲೆ ಸೂಚಿಸಿರುವ ಮೊತ್ತ ಮತ್ತು ಜಪ್ತಿಮಾಡಲು ತಗಲುವ ವೆಚ್ಚಗಳನ್ನು ಪಾವತಿಸಲು ತಪ್ಪಿದ್ದಲ್ಲಿ,ರಿಕವರಿ ಆಫೀಸರ್‌ರವರ ಮುಂದಿನ ಆದೇಶದವರೆಗೆ ಸದರಿ ಆಸ್ತಿಗಳನ್ನು ನಿಮ್ಮ ವಶದಲ್ಲಿಸಿಕೊಳ್ಳಬಹುದಗಿದೆ.

ಮುಂದುವರಿದಂತೆ ನಿಮಗೆ ಆದೇಶಿಸುವುದೇನೆಂದರೆ ಈ ಆದೇಶವು ಯಾವ ದಿನ ಯಾವ ರೀತಿಯಲ್ಲಿ ಕಾರ್ಯಗತವಾಗಿದೆ ಅಥವ ಯಾಕಾಗಿ ಕಾರ್ಯಗತವಾಗಿಲ್ಲ ಎಂಬುದರ ಕುರಿತಾಗಿ ಪ್ರಮಾಣ ಪತ್ರದ ಮೂಲಕ ದಿನಾಂಕ 10.02.2025ರ ಈ ವಾರಂಟನ್ನು ಹಿಂದಿರುಗಿಸಬೇಕು.

ಷೆಡ್ಯೂಲ್ ಆಸ್ತಿಯ ವಿವರ

ಕ್ರ. ಸಂ.	ಆಸ್ತಿ ವಿವರ	ವಿಸ್ತೀರ್ಣ	ಚಕ್ಕುಬಂದಿ	ಸ್ಥಳ
1	ಸರ್ವೆ ನಂ.89 ಬಿಬಿಎಂಪಿ ಖಾತಾ ನಮ. 253/128/1/140/1	24.6x33	ಪೂರ್ವ–ಶ್ರೀಮತಿ ಪದ್ಮಾರವರಿಗೆ ಸೇರಿದ ಅದೇ ಆಸ್ತಿಯ ಉಳಿದ ಭಾಗ. ಪಶ್ಚಿಮ –ಸರಕಾರಿ ಓಣಿ/ಗಲ್ಲಿ ಉತ್ತರ –ಶ್ರೀ ಎನ್. ವೆಂಕಟೇಶ್‌ರವರಿಗೆ ಸೇರಿದ ಅದೇ ಆಸ್ತಿಯ ಉಳಿದ ಭಾಗ. ದಕ್ಷಿಣ – ರಸ್ತೆ	ವರ್ತೂರು ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಬೆಂಗಳೂರು

ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **18.12.2024**ರಂದು ಕೊಡಲ್ಪಟ್ಟಿದೆ.

ಸಹಿ/– ವಸೂಲಾತಿ ಅಧಿಕಾರಿ–1
ಸಾಲವಸೂಲಾತಿ ನ್ಯಾಯಾಧಿಕರಣ–1, ಬೆಂಗಳೂರು,

ಭಾರತ ಸರ್ಕಾರ
ಸಾಲ ವಸೂಲಾತಿ ನ್ಯಾಯಾಧಿಕರಣ–1, ಕರ್ನಾಟಕ
ಬಿಎಸ್‌ಎನ್‌ಎಲ್ ಬಿಲ್ಡಿಂಗ್, 2ನೇ ಮಹಡಿ, ಟೆಲಿಫೋನ್ ಹೌಸ್, ರಾಜಭವನ್ ರಸ್ತೆ, ಬೆಂಗಳೂರು-01

ಮಾರಾಟ ಘೋಷಣೆ ಇತ್ಯರ್ಥಗೊಳಿಸುವ ಸೂಚನೆ

(ರಿಕವರಿ ಆಫ್ ಡೆಟ್ಸ್ ಅಂಡ್ ಬ್ಯಾಂಕರಪ್ಸ್ಟಿ ಆಕ್ಟ್ 1993ರ ನಿಯಮ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲನ್ನು ಓದಿಕೊಂಡಂತೆ)

ಆರ್‌ಸಿ ನಂ. 187/2024 ಒ.ಎ. ನಂ.1478/2018

ನಡುವೆ **ಕರ್ನಾಟಕ ಗ್ರಾಮೀಣ ಬ್ಯಾಂಕ್,** (ಈ ಮೊದಲು ಕಾವೇರಿ ಗ್ರಾಮೀಣ ಬ್ಯಾಂಕ್), ಬೆಳ್ಳಂದೂರು ಶಾಖೆ, ಹೊರ ವರ್ತುಲ ರಸ್ತೆ, ಬೆಂಗಳೂರು, ಕರ್ನಾಟಕ – 560 103 **...ಸರ್ಟಿಫಿಕೇಟ್ ಹೋಲ್ಡರ್**

V/s.

ಶ್ರೀ ಬಿ. ಕೆ. ಕೃಷ್ಣಮೂರ್ತಿ ಮತ್ತು ಇತರರು **...ಸರ್ಟಿಫಿಕೇಟ್ ಡೆಟರ್ಸ್**

(ಸಿಡಿ 1) ಶ್ರೀ ಬಿ. ಕೆ. ಕೃಷ್ಣಮೂರ್ತಿ, ಬಿನ್ ಲೇಟ್ ಶ್ರೀ ಬಿ .ಆರ್. ಕೃಷ್ಣಪ್ಪ, ನಂ. 251, ಹಾಳುಬಾವಿ ರಸ್ತೆ, ವರ್ತೂರು ಗ್ರಾಮ ಮತ್ತು ಅಂಚೆ, ಬೆಂಗಳೂರು – 560 087.
(ಸಿಡಿ 2) ಶ್ರೀ ಬಿ. ಕೆ. ಮಂಜುನಾಥ್ ಬಿನ್ ಲೇಟ್ ಶ್ರೀ ಬಿ .ಆರ್. ಕೃಷ್ಣಪ್ಪ, ನಂ. 256, ಹಾಳುಬಾವಿ ರಸ್ತೆ, ವರ್ತೂರು ಗ್ರಾಮ ಮತ್ತು ಅಂಚೆ, ಬೆಂಗಳೂರು – 560 087.

ಆದಾಗ್ಯೂ ಮೇಲ್ಕಂಡ ಸರ್ಟಿಫಿಕೇಟ್ ಆರ್‌ಸಿ. ನಂ. **187/2024** ಒ.ಎ. ನಂ. **1478/2018** ಅನ್ನು ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು ಇವರು ಹೊರಡಿಸಿದ್ದು, ಕೆಳಸಹಿದಾರರು ಕೆಳಗೆ ಷೆಡ್ಯೂಲ್‌ನಲ್ಲಿ ಸೂಚಿಸಿರುವ ಆಸ್ತಿಗಳನ್ನು ಮಾರಾಟಮಾಡಲು ಆದೇಶಿಸಿರುತ್ತಾರೆ.

ಆದಾಗ್ಯೂ, ಮೇಲ್ಕಂಡ ಸರ್ಟಿಫಿಕೇಟ್ ಡೆಟರ್ಸ್‌ರವರು ನ್ಯಾಯಾಧಿಕರಣದಿಂದ ಜಾರಿಯಾದ ರಿಕವರಿ ಸರ್ಟಿಫಿಕೇಟ್ ಆರ್‌ಸಿ ನಂ. 187/2024 ನಂತೆ ಸರ್ಟಿಫಿಕೇಟ್ ಹೋಲ್ಡರ್ ರವರಿಗೆ ನೀಡಬೇಕಾದ ಬಾಕಿ ಮೊತ್ತ ರೂ.19,64,293/– (ರೂಪಾಯಿ ಹತ್ತೊಂಬತ್ತು ಲಕ್ಷ ಅರವತ್ತನಾಲ್ಕು ಸಾವಿರದ ಇನ್ನೂರ ತೊಂಬತ್ತ ಮೂರು ಮಾತ್ರ) ಜೊತೆಗೆ ಖರ್ಚು ಮತ್ತು ವೆಚ್ಚ ಒ.ಎ ಯನ್ನು ಸಲ್ಲಿಸಿದ ದಿನಾಂಕದಿಂದ ಪೂರ್ತಿ ಪಾವತಿಯ ದಿನಾಂಕದವರೆಗಿನ ಬಡ್ಡಿಯನ್ನು ಸರ್ಟಿಫಿಕೇಟ್ ಡೆಟರ್ ಶ್ರೀ ಬಿ.ಕೆ .ಕೃಷ್ಣಮೂರ್ತಿ ಮತ್ತು ಇತರರಿಂದ ಬರಬೇಕಾಗಿದೆ. ಮತ್ತು ಸರ್ಟಿಫಿಕೇಟ್ ಡೆಟರ್ಸ್‌ರವರು ಸದರಿ ಮೊತ್ತವನ್ನು ಪಾವತಿಸಲು ವಿಫಲರಾಗಿರುತ್ತಾರೆ.

ದಿನಾಂಕ 30.11.2024ರಂತೆ ಈ ವಿಷಯದಲ್ಲಿನ ಬಾಕಿ ಮೊತ್ತ ರೂ.33,54,159/– (ರೂಪಾಯಿ ಮೂವತ್ತ ಮೂರು ಲಕ್ಷ ಐವತ್ತ ನಾಲ್ಕು ಸಾವಿರದ ಒಂದು ನೂರ ಐವತೊಂಬತ್ತು ಮಾತ್ರ) ಜೊತೆಗೆ ಸದರಿ ಮೊತ್ತ ಮತ್ತು ಖರ್ಚು, ವೆಚ್ಚ ಮತ್ತು ಮುಂದಿನ ಬಡ್ಡಿಯನ್ನು ಪಾವತಿಸಿರುವುದಿಲ್ಲ. ಕೆಳಸಹಿದಾರರು ಈ ಕೆಳಗೆ ಸೂಚಿಸಿರುವ ಆಸ್ತಿಗಳ ಮಾರಾಟಕ್ಕೆ ಆದೇಶವನ್ನು ನೀಡಿರುತ್ತಾರೆ.

ನಿಮಗೆ ಈ ಮೂಲಕ ಸೂಚಿಸುವುದೇನೆಂದರೆ ಈ ನೋಟಿಸನ್ನು ಜಾರಿ ಮಾಡಿದ ದಿನಾಂಕದಿಂದ 15ನೇ ದಿನ ಅಥವ ಅದರ ನಂತರ ಮಾರಾಟ ಉದ್ಘೋಷಣೆಯನ್ನು ಘೋಷಿಸಲು ನಿಯಮಗಳ ಅನುಸಾರ ದಿನಾಂಕವನ್ನು ನಿಗದಿ ಪಡಿಸಬೇಕಾಗಿರುವುದರಿಂದ ಈ ಕೆಳಗೆ ಸೂಚಿಸಿರುವ ಆಸ್ತಿಗಳಿಗೆ ಅಥವ ಅವುಗಳ ಭಾಗಗಳಿಗೆ ಸಂಬಂಧಿಸಿದಂತೆ ಋಣ ಭಾರಗಳು, ಚಾರ್ಜ್‌ಗಳು, ಕ್ಲೈಮ್ ಅಥವ ಹೊಣೆಗಾರಿಕೆಗಳು ಇದ್ದಲ್ಲಿ ಅದನ್ನು ಕೆಳಗೆ ಸಹಿ ಮಾಡಿದವರ ಗಮನಕ್ಕೆ ತರಬೇಕೆಂದು ಈ ಮೂಲಕ ಕೋರಲಾಗಿದೆ.

ಷೆಡ್ಯೂಲ್ ಆಸ್ತಿಯ ವಿವರ

ಕ್ರ. ಸಂ.	ಆಸ್ತಿ ವಿವರ	ವಿಸ್ತೀರ್ಣ	ಚಕ್ಕುಬಂದಿ	ಸ್ಥಳ
1	ಸರ್ವೆ ನಂ.89 ಬಿಬಿಎಂಪಿ ಖಾತಾ ನಮ. 253/128/1/140/1	24.6x33	ಪೂರ್ವ–ಶ್ರೀಮತಿ ಪದ್ಮಾರವರಿಗೆ ಸೇರಿದ ಅದೇ ಆಸ್ತಿಯ ಉಳಿದ ಭಾಗ. ಪಶ್ಚಿಮ –ಸರಕಾರಿ ಓಣಿ/ಗಲ್ಲಿ ಉತ್ತರ –ಶ್ರೀ ಎನ್. ವೆಂಕಟೇಶ್‌ರವರಿಗೆ ಸೇರಿದ ಅದೇ ಆಸ್ತಿಯ ಉಳಿದ ಭಾಗ. ದಕ್ಷಿಣ – ರಸ್ತೆ	ವರ್ತೂರು ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಬೆಂಗಳೂರು

ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **18.12.2024**ರಂದು ಕೊಡಲ್ಪಟ್ಟಿದೆ.

ಸಹಿ/– ವಸೂಲಾತಿ ಅಧಿಕಾರಿ–1
ಸಾಲವಸೂಲಾತಿ ನ್ಯಾಯಾಧಿಕರಣ–1, ಬೆಂಗಳೂರು,

ಬೆಂಗಳೂರು ನಗರ ವಿವಿ 4ನೇ ಘಟಿಕೋತ್ಸವದಲ್ಲಿ ನ್ಯಾ. ಪಿ.ಬಿ.ಭಜಂತ್ರಿ ಸಲಹೆ

‘ಜ್ಞಾನಾನ್ವೇಷಣೆ ನಿರಂತರವಾಗಿರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೃತ್ತಿಪರ ಜೀವನ ನಿರಂತರ ಕಲಿಕೆಯ ಪ್ರಕ್ರಿಯೆ. ನೀವೆಲ್ಲ ಹೊಸ ಆಲೋಚನೆಗಳಿಗೆ ಮುಕ್ತವಾಗಿದ್ದು, ಸವಾಲುಗಳನ್ನು ಬೆಳವಣಿಗೆಗೆ ಅವಕಾಶಗಳನ್ನಾಗಿ ಸ್ವೀಕರಿಸಿ. ಜ್ಞಾನದ ಅನ್ವೇಷಣೆ ನಿರಂತರ ವಾಗಿರಲಿ’ ಎಂದು ಬಿಹಾರ ಹೈಕೋರ್ಟ್‌ನ ನ್ಯಾಯಮೂರ್ತಿ ಪಿ.ಬಿ. ಭಜಂತ್ರಿ ಅವರು ನವ ಪದವೀಧರರಿಗೆ ಕಿವಿಮಾತು ಹೇಳಿದರು.

ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬುಧವಾರ ನಡೆದ ಬೆಂಗಳೂರು ನಗರ ವಿಶ್ವವಿದ್ಯಾಲಯದ 4ನೇ ಘಟಿಕೋತ್ಸವದಲ್ಲಿ ಭಾಷಣ ಮಾಡಿದ ಅವರು, ‘ಸಾಮಾಜಿಕ ಜವಾಬ್ದಾರಿಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಿ’ ಎಂದು ಸಲಹೆ ನೀಡಿದರು.

ಪದವಿ ಪ್ರದಾನ

‘ಈ ಘಟಿಕೋತ್ಸವ ಅಂತ್ಯವಲ್ಲ, ಅದ್ಭುತ ಆರಂಭ. ಪದವಿಗಳು ಕೇವಲ ಕಾಗದದ ತುಂಡುಗಳಲ್ಲ. ಕಠಿಣ ಪರಿಶ್ರಮ ಮತ್ತು ದೃಢ ನಿಶ್ಚಯಕ್ಕೆ ಮಾಡಿದ ಹೂಡಿಕೆಗಳು’ ಎಂದರು.

‘ನೊಂದವರ ಧ್ವನಿಯಾಗಿರಿ. ಸಾರ್ವಜನಿಕ ಸಂವಾದವನ್ನು ರೂಪಿಸುವಲ್ಲಿ ಮತ್ತು ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ, ವಿಶೇಷವಾಗಿ ಎಲ್ಲ ರೀತಿಯ ಅಸಮಾನತೆಗಳನ್ನು ಎದುರಿಸುವಾಗ ನಿಮ್ಮ ಧ್ವನಿ ಎಂದಿಗೂ ಕಡಿಮೆಯಾಗದಿರಲಿ’ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪದವಿ, ಸ್ನಾತಕೋತ್ತರ ಪದವಿಯಲ್ಲಿ ರ‍್ಯಾಂಕ್ ಪಡೆದವರಿಗೆ ಚಿನ್ನದ ಪದಕ ಮತ್ತು ನಗದು ಬಹುಮಾನ ನೀಡಲಾಯಿತು.

ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಪ್ರೊ. ಕೆ.ಆರ್.ಜಲಜಾ, ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ್ ಬಿ., ವಿವಿಧ ವಿಭಾಗಗಳ ಡೀನ್‌ಗಳು ಮತ್ತು ಸಿಂಡಿಕೇಟ್ ಸದಸ್ಯರು ಉಪಸ್ಥಿತರಿದ್ದರು.



ಬಿ.ಕಾಂನಲ್ಲಿ 3 ಚಿನ್ನದ ಪದಕ ಪಡೆದ ಸಂಜನಾ ಆರ್.ಎಸ್., ಎಂ.ಎಸ್ಸಿ ರಸಾಯನ ವಿಜ್ಞಾನದಲ್ಲಿ 5 ಚಿನ್ನದ ಪದಕ ಪಡೆದ ಅನುಷಾ ಎಸ್. ಮತ್ತು ಬಿಬಿಎ ಪದವಿಯಲ್ಲಿ 3 ಚಿನ್ನದ ಪದಕ ಪಡೆದ ಮನನ್ ಜೈನ್ ಸಂಭ್ರಮಿಸಿದ ಕ್ಷಣ —ಪ್ರಜಾವಾಣಿ ಚಿತ್ರ

ಮಾತೃಭಾಷೆಯಲ್ಲಿ ಶಿಕ್ಷಣ: ರಾಜ್ಯಪಾಲ



‘ಕನಸನ್ನು ಸಾಕಾರ ಮಾಡಲು ಶಿಕ್ಷಣ ಅತ್ಯಂತ ಮಹತ್ವದ ಆಯುಧವಾಗಿದ್ದು, ವ್ಯಕ್ತಿಯ ಜೀವನವನ್ನು ಅರ್ಥಪೂರ್ಣಗೊಳಿಸುತ್ತದೆ. ಉದ್ಯೋಗ, ನೈತಿಕತೆ, ಹೊಸ ವಿಚಾರ, ಜ್ಞಾನವನ್ನು ನೀಡುತ್ತದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ರ‍್ಯಾಂಕ್ ಪಡೆದ ಪದವೀಧರರಿಗೆ ಚಿನ್ನದ ಪದಕಗಳನ್ನು ಪ್ರದಾನ ಮಾಡಿ ಮಾತನಾಡಿದ ಅವರು, ‘ಜಪಾನ್, ರಷ್ಯಾ, ಜರ್ಮನಿ, ಫ್ರಾನ್ಸ್ ಮುಂತಾದ ದೇಶಗಳಲ್ಲಿ ಆ ದೇಶದ ಮಾತೃಭಾಷೆಯಲ್ಲಿ ಶಿಕ್ಷಣ ನೀಡಲಾಗುತ್ತದೆ. ನಮ್ಮ ದೇಶದಲ್ಲೂ ಪ್ರಾದೇಶಿಕ ಭಾಷೆಗೆ ಮಹತ್ವ ನೀಡಬೇಕು. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದೆ. ಇದರಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ನೀಡಲು ವಿಶೇಷ ಒತ್ತು ನೀಡಲಾಗಿದೆ’ ಎಂದರು.

ವಿದ್ಯಾರ್ಥಿ/ನಿ	ಕಾಲೇಜು	ಪದವಿ	ಪದಕ
ಅನುಷಾ ಎಸ್.	ಸೆಂಟ್ರಲ್ ಕಾಲೇಜು	ಎಂ.ಎಸ್ಸಿ(ರಸಾಯನ ವಿಜ್ಞಾನ)	5
ಮನನ್ ಜೈನ್	ಶೇಷಾದ್ರಿಪುರಂ ಕಲಾ ಮತ್ತು ವಾಣಿಜ್ಯ ಕಾಲೇಜು	ಬಿಬಿಎ	3
ಸಂಜನಾ ಆರ್.ಎಸ್.	ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಕಾಲೇಜು	ಬಿ.ಕಾಂ	3
ಪ್ರಿಯಾ ಬಾಲಚಂದ್ರ	ಸೆಂಟ್ರಲ್ ಕಾಲೇಜು	ಎಂಎ(ಫ್ರೆಂಚ್)	2
ಮೇಘನಾ ಯು.	ಸಿಕೆಪಿ ಬೆಂಗಳೂರು ದೃಶ್ಯ ಕಲೆಗಳ ಶಾಲೆ	ಎಂ.ವಿಎ (ಅಪ್ಲೈಡ್ ಆರ್ಟ್ಸ್)	2
ನುನ್ನ ಹೇಮಸ್ವಿತ	ಆದರ್ಶ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಇನ್‌ಫಾರ್ಮೇಶನ್ ಟೆಕ್ನಾಲಜಿ	ಎಂಬಿಎ,	2
ವೈಷ್ಣವಿ ಎನ್.	ಎಂ.ಎಸ್.ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು	ಎಂ.ಎಸ್ಸಿ ಜೀವರಸಾಯನ ವಿಜ್ಞಾನ	2
ಬಿ.ಸಂಗೀತ		ಎಂ.ಎಸ್ಸಿ ಸೂಕ್ಷ್ಮ ಜೀವವಿಜ್ಞಾನ	2
ಲಿಬುಮ್‌ಥಂಗ್ ಕಿಕಾನ್	ಆಕ್ಸ್‌ಫರ್ಡ್ ಕಾಲೇಜ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್	ಎಂಟಿಟಿಎಂ ಪದವಿ	2
ನಿಖಿಲ್ ವಂಶಿ ಎನ್.	ಸೆಂಟ್ರಲ್ ಕಾಲೇಜು	ಎಂ.ಎಸ್ಸಿ. ರಸಾಯನ ವಿಜ್ಞಾನ	1

‘ಭಿನ್ನಾಪ್ರಾಯವಿದ್ದರೂ ಅಭಿನಂದಿಸಬೇಕಿತ್ತು’

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪಡೆದ ಹಂಪನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಕರ್ ಪ್ರಶಸ್ತಿ ಪಡೆದಿರುವ ಬಾನು ಮುಷ್ತಾಕ್ ಅವರ ಸಿದ್ಧಾಂತ, ನಡೆಯ ಬಗ್ಗೆ ಭಿನ್ನಾಭಿಪ್ರಾಯ, ವ್ಯತ್ಯಾಸಗಳಿದ್ದರೂ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಬೇಕಿತ್ತು ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ತಿಳಿಸಿದರು.

ಕನ್ನಡ ಜನಶಕ್ತಿ ಕೇಂದ್ರ ನೀಡುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಯನ್ನು ಬುಧವಾರ ಸ್ವೀಕರಿಸಿ ಅವರು ಮಾತನಾಡಿದರು.

ನರೇಂದ್ರ ಮೋದಿ ದೇಶಕ್ಕೆ ಪ್ರಧಾನಿ. ಸಾಹಿತ್ಯಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಬಂದಾಗ ಅವರು ಅಭಿನಂದಿಸಬೇಕಿತ್ತು ಎಂದು ಸಾಹಿತಿಗಳು ಬಯಸುವುದು ಸಹಜ. ಬಾಬಾಬುಡನ್‌ಗಿರಿ ಹೋರಾಟದಲ್ಲಿ ಬಾನು ಭಾಗವಹಿಸಿದ್ದು, ಅವರಿಗೆ ಇಷ್ಟವಾಗಿಲ್ಲ ಎಂದಿದ್ದರೆ ಸಿದ್ಧಾಂತಕ್ಕೆ ಸಹಮತ ಇಲ್ಲ ಎಂದು ಹೇಳಿಯೇ ಸಾಹಿತ್ಯ ಸಾಧನೆಗೆ ಅಭಿನಂದಿಸಬಹುದಿತ್ತು ಎಂದರು.

ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಹಿ.ಚಿ. ಬೋರಲಿಂಗಯ್ಯ ಮಾತನಾಡಿ, ‘ಕನ್ನಡವು ತಮಿಳಿನಿಂದ ಹುಟ್ಟಿತು ಎಂದು ಕಮಲ್ ಹಾಸನ್ ಅವರು ನೀಡಿದ ಹೇಳಿಕೆಗೆ ಸಹಜವಾಗಿಯೇ ವಿರೋಧ ಬಂದಿತ್ತು. ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆಗಳಾದವು. ಆದರೆ, ಕನ್ನಡವು ಸಂಸ್ಕೃತದಿಂದ ಹುಟ್ಟಿತು ಎಂದು ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಎಸ್.ಎಲ್. ಭೈರಪ್ಪ ಹೇಳಿದಾಗ ಯಾವುದೇ ವಿರೋಧಗಳು ಬಾರದೇ ಇದ್ದಿದ್ದು ವಿಪರ್ಯಾಸ. ಕನ್ನಡವು ತಮಿಳು ಅಥವಾ ಸಂಸ್ಕೃತದಿಂದ ಹುಟ್ಟಿಲ್ಲ. ಆದಿದ್ರಾವಿಡ ಎಂಬ ಬೃಹತ್ ವೃಕ್ಷದಿಂದ ಹುಟ್ಟಿದೆ’ ಎಂದು ಹೇಳಿದರು.

ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಮಾತನಾಡಿ, ‘ಹಂಪನಾ ಅವರು ಜೈನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಜಾಗತಿಕ ವಾಣಿಯಾಗಿದ್ದಾರೆ. ಆಳವಾದ ಅಧ್ಯಯನ, ಗಾಢವಾದ ಸಂಶೋಧನೆ, ಬದುಕಿನ ಬಗ್ಗೆ ಬರಹಗಳನ್ನು ಮಾಡಿದ ಸಾರಸ್ವತ ಲೋಕದ ಸಂಶೋಧನಾ ಯೋಗಿ ಹಂಪನಾ’ ಎಂದು ಬಣ್ಣಿಸಿದರು.

ಕನ್ನಡ ಜನಶಕ್ತಿ ಕೇಂದ್ರದ ಸಿ.ಕೆ. ರಾಮೇಗೌಡ ಮಾತನಾಡಿ, ‘ಕನ್ನಡದ ಬೆಳವಣಿಗೆಗಾಗಿ ನಾಲ್ವಡಿಯವರು ಕನ್ನಡ ಸಾಹಿತ್ಯ ಪರಿಷತ್ತು ಕಟ್ಟಿದ್ದರು. ಗೊ.ರು.ಚ. ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಒಂದು ರೂಪಾಯಿ ಭತ್ಯೆಯನ್ನೂ ಪಡೆಯದೇ ಕೆಲಸ ಮಾಡಿದ್ದರು. ಈಗಿನ ಅಧ್ಯಕ್ಷರು ತಿಂಗಳಿಗೆ ₹1.95 ಲಕ್ಷ, ವರ್ಷಕ್ಕೆ ₹22.93 ಲಕ್ಷ ಭತ್ಯೆ ಪಡೆದಿರುವುದು ಪರಿಷತ್ತಿನ ಲೆಕ್ಕಪತ್ರದಲ್ಲಿದೆ’ ಎಂದು ಬೇಸರ ವ್ಯಕ್ತಪಡಿಸಿದರು.ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ ಉಪಸ್ಥಿತರಿದ್ದರು.



ಹಂಪ ನಾಗರಾಜಯ್ಯ ಅವರಿಗೆ ‘ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಶಂಕರ್ ಹೂಗಾರ, ಗೊ.ರು. ಚನ್ನಬಸಪ್ಪ, ಸಿ.ಕೆ ರಾಮೇಗೌಡ, ಹಿ.ಚಿ ಬೋರಲಿಂಗಯ್ಯ, ಪಿ.ಮಲ್ಲಿಕಾರ್ಜುನಪ್ಪ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕೋಟೆ ಮಾರಮ್ಮ ದೇವಿ ನಾಡ ಹಬ್ಬ 17ರಿಂದ

ಬೆಂಗಳೂರು: ಕೋಟೆ ಮಾರಮ್ಮ ದೇವಸ್ಥಾನದ ಅನ್ನದಾನ ಸಮಿತಿ ವತಿಯಿಂದ ಜೂನ್ 17ರಿಂದ 21ರವರೆಗೆ ಕೋಟೆ ಮಾರಮ್ಮ ದೇವಿ ಊರನಾಡ ಹಬ್ಬ ಹಾಗೂ ಸಮಿತಿಯ 47ನೇ ರಜತ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ಜೂನ್ 17ರಂದು ಕೋಟೆ ಜಲ ಕಂಠೇಶ್ವರ ದೇವಸ್ಥಾನದಿಂದ ಸುಮಂಗಲಿಯರೊಂದಿಗೆ ಗಂಗೆಯನ್ನು ತರುವುದು, ದೇವಿಗೆ ಮಹಾ ಅಭಿಷೇಕ, ದೀಪಾಲಂಕೃತ ಪಲ್ಲಕ್ಕಿಯಲ್ಲಿ ಕೋಟೆ ಇ-ಬೀದಿಯಲ್ಲಿ ಮೆರವಣಿಗೆ ನಡೆಯಲಿದ್ದು, ದೇವಿಗೆ ರಜತ ಕವಚ ಅಲಂಕಾರವೂ ಇರಲಿದೆ. 18ರಂದು ಮುತ್ತಿನ ಅಲಂಕಾರ, ವಾದ್ಯಗೋಷ್ಠಿ ನಡೆಯಲಿದ್ದು, 19ರಂದು ಸುಗಂಧಪುಷ್ಪ ಅಲಂಕಾರ, ಮರ ಆರತಿ ಹಾಗೂ ಪ್ರಸಾದ ವಿನಿಯೋಗ ನಡೆಯಲಿದೆ. 20ರಂದು ಲಕ್ಷ್ಮಿ ಅಲಂಕಾರ, ವಾದ್ಯಗೋಷ್ಠಿ ಆಯೋಜಿಸಲಾಗಿದೆ. 21ರಂದು ಅರಿಶಿಣ ಕುಂಕುಮ ಅಲಂಕಾರ, ಅನ್ನಸಂತರ್ಪಣೆ, ರಾಜ ಬೀದಿಯಲ್ಲಿ ದೇವಿಯ ಮೆರವಣಿಗೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಲಕ್ಷ್ಮಣರಾವ್‌ಗೆ ‘ಕನ್ನಡ ಕಾಯಕಶ್ರೀ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನ ವಿಮಾನ ವಿಭಾಗದಲ್ಲಿರುವ ವಿಮಾನ ಕನ್ನಡ ಸಂಘ ನೀಡುವ ‘ಕನ್ನಡ ಕಾಯಕಶ್ರೀ’ ಪ್ರಶಸ್ತಿಗೆ ಕವಿ ಬಿ.ಆರ್. ಲಕ್ಷ್ಮಣರಾವ್ ಆಯ್ಕೆಯಾಗಿದ್ದಾರೆ.

ಲಕ್ಷ್ಮಣರಾವ್ ಅವರು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹20 ಸಾವಿರ ನಗದು, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ಒಳಗೊಂಡಿದೆ.

ಜೂನ್ 22ರಂದು ಎಚ್‌ಎಎಲ್ ಬಳಿ ಇರುವ ವಿ.ಎಂ. ಘಾಟ್ಗೆ ಸಭಾಂಗಣದಲ್ಲಿ ನಡೆಯುವ ಸಂಘದ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಹೃದ್ರೋಗ ತಜ್ಞೆ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ವಿಮಾನ ವಿಭಾಗದ ಮಹಾ ವ್ಯವಸ್ಥಾಪಕ ವಿ. ಶ್ರೀಕೃಷ್ಣ ಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಸಂಘದ ಅಧ್ಯಕ್ಷ ಜಿ.ಎಸ್. ಗೋಪಾಲನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ನೆಲಮಂಗಲದಲ್ಲಿ 2 ನಿಮಿಷ ರೈಲು ನಿಲುಗಡೆ

ಬೆಂಗಳೂರು: ಸೋಲ್ಲಾಪುರ-ಹಾಸನ ಎಕ್ಸ್‌ಪ್ರೆಸ್ ರೈಲು ನೆಲಮಂಗಲದಲ್ಲಿ ಎರಡು ನಿಮಿಷ ನಿಲ್ಲಲಿದೆ ಎಂದು ನೈರುತ್ಯ ರೈಲ್ವೆಯ ಪ್ರಕಟಣೆ ತಿಳಿಸಿದೆ.

ನವೆಂಬರ್ 1ರವರೆಗೆ ತಾತ್ಕಾಲಿಕವಾಗಿ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಸೋಲಾಪುರದಿಂದ ನೆಲಮಂಗಲಕ್ಕೆ ಬೆಳಿಗ್ಗೆ 7.38ಕ್ಕೆ ಬಂದು 7.40ಕ್ಕೆ ನಿರ್ಗಮಿಸಲಿದೆ. ಹಾಸನ ಕಡೆಯಿಂದ ಸಂಜೆ 5.59ಕ್ಕೆ ಆಗಮಿಸಿ 6.01ಕ್ಕೆ ನಿರ್ಗಮಿಸಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ನಿಲುಗಡೆ ಮುಂದುವರಿಕೆ: ಯಶವಂತಪುರ-ಶಿವಮೊಗ್ಗ ಟೌನ್ - ಯಶವಂತಪುರ ದೈನಂದಿನ ಇಂಟರ್‌ಸಿಟಿ ಎಕ್ಸ್‌ಪ್ರೆಸ್ ರೈಲಿಗೆ ಚಿಕ್ಕಬಾಣಾವರ ನಿಲ್ದಾಣದಲ್ಲಿ ಇರುವ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆಯನ್ನು ಡಿ.15ರವರೆಗೆ ವಿಸ್ತರಿಸಲಾಗಿದೆ.

ಜಾತಿ ಜನಗಣತಿ ಮರು ಸಮೀಕ್ಷೆ: ಸ್ವಾಗತ

ಬೆಂಗಳೂರು: ಜಾತಿ ಜನಗಣತಿಯ ಮರು ಸಮೀಕ್ಷೆ ಮಾಡಲು ಆದೇಶಿಸಿರುವ ಸರ್ಕಾರದ ನಡೆ ಸ್ವಾಗತಾರ್ಹ ಎಂದು ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ತಿಳಿಸಿದೆ.

‘ಇದು ರಾಜ್ಯ ಒಕ್ಕಲಿಗರ ಮೀಸಲಾತಿಯ ಹೋರಾಟಕ್ಕೆ ಸಂದ ಜಯವಾಗಿದೆ. ಇದನ್ನು ನಮ್ಮ ಸಮುದಾಯದ ಸ್ವಾಮೀಜಿಗಳು ಮತ್ತು ನಮ್ಮ ಸಮಿತಿ ಸ್ವಾಗತಿಸುತ್ತದೆ. ಇದರಿಂದ, ರಾಜ್ಯದ ಎಲ್ಲಾ ಸಮುದಾಯಗಳಿಗೆ ನ್ಯಾಯ ಸಿಗಲಿದೆ’ ಎಂದು ಸಮಿತಿಯ ಅಧ್ಯಕ್ಷ ಗಾ.ನಂ. ಶ್ರೀಕಂಠಯ್ಯ, ಪ್ರಧಾನ ಕಾರ್ಯದರ್ಶಿ ಆಡಿಟರ್ ನಾಗರಾಜ್ ಯಲಚವಾಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಯಾಗಾರದಲ್ಲಿ ಪಿ.ಜಿ.ಆರ್. ಸಿಂಧ್ಯ ಸಲಹೆ

‘ಹಳೇಬಟ್ಟೆ ಮರುಬಳಕೆಗೆ ಕೊಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಳೇ ಬಟ್ಟೆಗಳನ್ನು ಬಿಸಾಡುವ ಬದಲು ತೊಳೆದು, ಇಸ್ತ್ರಿ ಹಾಕಿ ಸ್ಕೌಟ್ಸ್ ಮತ್ತು ಗೈಡ್ಸ್ ಕಚೇರಿಗೆ ತಂದು ಕೊಡಿ. ನಾವು ಅದನ್ನು ಮರುಬಳಕೆ ಮಾಡುತ್ತೇವೆ’ ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ ತಿಳಿಸಿದರು.

ನಗರದಲ್ಲಿ ಬುಧವಾರ ನಡೆದ ‘ಹಳೆಯ ಬಟ್ಟೆಗಳ ಸಂಗ್ರಹ, ವಿಲೇವಾರಿ’ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಹಳೆಯ ಬಟ್ಟೆಗಳನ್ನು ಇನ್ನೊಬ್ಬರು ತೊಡಬಾರದು ಎಂಬುದು ಮೂಢನಂಬಿಕೆ. ಯಾರೂ ಬೇಕಾದರೂ ಬಳಸಬಹುದು ಎಂದು ಹೇಳಿದರು.

ಸ್ಕೌಟ್ಸ್ ಮತ್ತು ಗೈಡ್ಸ್, ಬಿಬಿಸಿ ಆ್ಯಕ್ಷನ್ ಮೀಡಿಯಾದ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಹಳೆ ಬಟ್ಟೆ, ವಸ್ತ್ರಗಳ ಮರು ಬಳಕೆ ನಿರ್ವಹಣಾ ಅಭಿಯಾನಕ್ಕೆ ಬಿಬಿಸಿ ಆ್ಯಕ್ಷನ್ ಮೀಡಿಯಾದ ಭಾರತದ ನಿರ್ದೇಶಕಿ ವರಿಂದರ್ ಗಂಭೀರ್ ಚಾಲನೆ ನೀಡಿದರು.

ಹಳೆಯ ಬಟ್ಟೆಗಳ ಮರು ಬಳಕೆ ಆಂದೋಲನ ಕುರಿತು ಸಮಾಜ ಸೇವಕಿ ರೀತು ಗಂಜಿಗಟ್ಟಿ ವಿವರ ನೀಡಿದರು. ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಸಹಾಯಕ ಆಯುಕ್ತ ಮೋಹನ್ ಕೊಂಡಜ್ಜಿ, ರಾಜ್ಯ ಕಾರ್ಯದರ್ಶಿ ಕೆ. ಗಂಗಪ್ಪಗೌಡ, ರಾಜ್ಯ ಆಯುಕ್ತೆ ಬಿ.ವಿ.ರಾಮಲತಾ, ಜಿಲ್ಲಾ ಕಾರ್ಯದರ್ಶಿ ಬಿ.ಕೆ.ಶೇಷಾದ್ರಿ, ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



‘ಹಳೆಯ ಬಟ್ಟೆಗಳ ಸಂಗ್ರಹ, ವಿಲೇವಾರಿ’ ಕಾರ್ಯಾಗಾರದಲ್ಲಿ ರೀತು ಗಂಜಿಗಟ್ಟಿ, ವರಿಂದರ್ ಗಂಭೀರ್, ಪಿ.ಜಿ.ಆರ್. ಸಿಂಧ್ಯ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕಾಮೆಡ್–ಕೆ: ವರುಣ್‌ಗೆ 3ನೇ ರ‍್ಯಾಂಕ್



ಕಾಮೆಡ್–ಕೆ ಫಲಿತಾಂಶದಲ್ಲಿ ಮೂರನೇ ರ‍್ಯಾಂಕ್ ಪಡೆದ ವರುಣ್ ಅವರಿಗೆ ವಿಷನ್ ಪಿಯು ಕಾಲೇಜಿನ ನಿರ್ದೇಶಕರಾದ ರಾಮ್ ಮನೋಹರ್ ರೆಡ್ಡಿ, ಮುನ್ನೆಮ್ ಬ್ರಹ್ಮಯ್ಯ, ಪ್ರಾಂಶುಪಾಲ ಚೆಲಂ ₹25 ಸಾವಿರ ನಗದು ಬಹುಮಾನ ನೀಡಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಷನ್ ಪಿಯು ಕಾಲೇಜಿನ ವಿದ್ಯಾರ್ಥಿ ವರುಣ್ ಜೆ.ಕುಮಾರ್ ಕಾಮೆಡ್-ಕೆ ಫಲಿತಾಂಶದಲ್ಲಿ ಮೂರನೇ ರ‍್ಯಾಂಕ್ ಪಡೆದುಕೊಂಡಿದ್ದಾರೆ.

ವರುಣ್ ಪಿಯು ವಿಜ್ಞಾನ ವಿಭಾಗದಲ್ಲಿ ಒಂಬತ್ತನೇ ಸ್ಥಾನ, ಕೆ-ಸಿಇಟಿನಲ್ಲಿ 106ನೇ ರ‍್ಯಾಂಕ್ ಹಾಗೂ ಜೆಇಇ ಮುಖ್ಯ ಪರೀಕ್ಷೆಯಲ್ಲಿ ಶೇಕಡ 99.71ರಷ್ಟು ಅಂಕ ಗಳಿಸಿದ್ದಾರೆ.

ವಿಷನ್ ಪಿಯು ಕಾಲೇಜಿನ ನಿರ್ದೇಶಕರಾದ ರಾಮ್ ಮನೋಹರ್ ರೆಡ್ಡಿ, ಮುನ್ನೆಮ್ ಬ್ರಹ್ಮಯ್ಯ, ಪ್ರಾಂಶುಪಾಲ ಚೆಲಂ ಅವರು ವರಣ್ ಅವರಿಗೆ ₹25 ಸಾವಿರ ನಗದು ಬಹುಮಾನ ನೀಡಿ, ಅಭಿನಂದನೆ ಸಲ್ಲಿಸಿದ್ದಾರೆ.

‘ಕಾಲೇಜಿನಲ್ಲಿ ಬೋಧಿಸಿದ ಪಾಠ ಪ್ರವಚನಗಳನ್ನು ಅದೇ ದಿನ ಪುನರ್ ಮನನ ಮಾಡಿಕೊಳ್ಳುತ್ತಿದ್ದೆ. ನಮ್ಮ ಕಾಲೇಜಿನಲ್ಲಿ ನುರಿತ ಪ್ರಾಧ್ಯಾಪಕರ ತಂಡವಿದ್ದು, ಗುಣಮಟ್ಟದ ಶಿಕ್ಷಣ ನೀಡುತ್ತಾರೆ. ನಾನು ಐಐಟಿಯಲ್ಲಿ ಎಂಜಿನಿಯರಿಂಗ್ ಪದವಿಗೆ ಸೇರುವ ಆಸೆ ಇದೆ ಎಂದು ವರುಣ್ ತಿಳಿಸಿದ್ದಾರೆ.

ಎನ್‌ಎಂಕೆಆರ್‌ವಿ: ಪುರುಷರಿಗೂ ಪ್ರವೇಶ

ಬೆಂಗಳೂರು: ಜಯನಗರದ ಎನ್‌ಎಂಕೆಆರ್‌ವಿ ಮಹಿಳಾ ಪದವಿ ಕಾಲೇಜಿಗೆ ಇನ್ನು ಮುಂದೆ ಪುರುಷರೂ ಪ್ರವೇಶ ಪಡೆಯಬಹುದು.

ಮಹಿಳಾ ಕಾಲೇಜನ್ನು ಸಹ ಶಿಕ್ಷಣದ ಕಾಲೇಜಾಗಿ ಬದಲಾಯಿಸಲಾಗಿದೆ. ಎನ್‌ಎಂಕೆಆರ್‌ವಿ ಪದವಿ ಕಾಲೇಜು ಎಂದು ಮರು ನಾಮಕರಣ ಮಾಡಲಾಗಿದೆ. 2025–26ನೇ ಸಾಲಿನಿಂದ ಪುರುಷರಿಗೆ ಶೇ 10ರಷ್ಟು ಸೀಟುಗಳನ್ನು ಮೀಸಲಿಡಲಾಗಿದೆ. ಈಗಾಗಲೇ 60 ಮಂದಿ ಪ್ರವೇಶ ಪಡೆದಿದ್ದಾರೆ.

‘ಪ್ರಸ್ತುತ ಕಾಲೇಜಿನಲ್ಲಿ 14 ಕೋರ್ಸ್‌ಗಳಿದ್ದು, 2,300 ವಿದ್ಯಾರ್ಥಿಗಳು ಪದವಿ ಶಿಕ್ಷಣ ವ್ಯಾಸಂಗ ಮಾಡುತ್ತಿದ್ದಾರೆ. ಸಹ ಶಿಕ್ಷಣಕ್ಕೆ ಅವಕಾಶ ನೀಡಿರುವುದರಿಂದ ಪ್ರವೇಶದಲ್ಲಿ ಹೆಚ್ಚಳವಾಗಿದೆ’ ಎಂದು ಪ್ರಾಂಶುಪಾಲರಾದ ಸ್ನೇಹಲತಾ ಜಿ. ನಾಡಿಗೇರ್ ಮಾಹಿತಿ ನೀಡಿದ್ದಾರೆ.

ಕಾಂಗ್ರೆಸ್ ಸೇರಿದ ಜೆಡಿಎಸ್ ಮುಖಂಡರು

ನೆಲಮಂಗಲ: ವೃಷಭಾವತಿ ಏತ ನೀರಾವರಿ ಯೋಜನೆಯಡಿ ಕಲುಷಿತ ನೀರು ಪೂರೈಕೆಯಾದರೆ, ಆ ನೀರನ್ನು ಖುದ್ದು ವಾಪಸ್ ಕಳುಹಿಸಿ, ಶುದ್ಧ ಹಾಗೂ ಶಾಶ್ವತ ನೀರಾವರಿ ಯೋಜನೆ ನನ್ನ ಸಂಕಲ್ಪವಾಗಿದೆ ಎಂದು ಶಾಸಕ ಎನ್.ಶ್ರೀನಿವಾಸ್ ತಿಳಿಸಿದರು.

ಜೆಡಿಎಸ್ ಮುಖಂಡರು ಹಾಗೂ ಅವರ 50ಕ್ಕೂ ಹೆಚ್ಚು ಬೆಂಬಲಿಗರನ್ನು ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಅವರು 'ಬೇಷರತ್ ಆಗಿ ಕಾಂಗ್ರೆಸ್‌ಗೆ ಸೇರಿರುವ ಜೆಡಿಎಸ್ ಮುಖಂಡರನ್ನು ಕಡೆಗಣಿಸುವುದಿಲ್ಲ' ಎಂದು ಅವರು ಭರವಸೆ ನೀಡಿದರು.

ಟಿ.ಬೇಗೂರು ಪಂಚಾಯತಿ ಸದಸ್ಯ ಬಿ.ಕೆ.ಮುನಿರಾಜು, ಗ್ರಾಮ ಪಂಚಾಯಿತಿ ಸದಸ್ಯ ಬಿ.ಕೆ.ಶ್ರೀನಿವಾಸ್, ವಜ್ರಘಟ್ಟೆಪಾಳ್ಯ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಮುನಿರಾಮು, ಮುಖಂಡ ಸುರೇಶ್, ಮಣ್ಣೆ ಎನ್.ಸೀತಾರಾಮಯ್ಯ, ದೊಡ್ಡಬೆಲೆ ಗಂಗಣ್ಣ, ಲಕ್ಕೇನಹಳ್ಳಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಮಂಜುನಾಥ್, ಕುಲುವನಹಳ್ಳಿ ಕನ್ನಿಕ, ಟಿ.ಬೇಗೂರು ಯಶೋಧಮ್ಮ ತಿಮ್ಮರಾಜು, ಲತಾ ಹನುಮಂತರಾಜು, ರಾಧಾ ಸಿದ್ದರಾಜು, ಕಲಾವತಿ ಮುನಿರಾಜು ವಸಂತಕುಮಾರ್, ಜಗದೀಶ್ ಚೌಡಯ್ಯ ಇನ್ನು ಅನೇಕರು ಬೆಂಬಲಿಗರೊಂದಿಗೆ ಸೇರ್ಪಡೆಗೊಂಡರು.

ಅನಧಿಕೃತ ಕಟ್ಟಡ ತೆರವಿಗೆ ಸೂಚನೆ

ನಲ್ಲೂರುಹಳ್ಳಿ ಮೆಟ್ರೊದಿಂದ ವೈಟ್‌ಫೀಲ್ಡ್ ಮುಖ್ಯರಸ್ತೆವರೆಗೆ ಪರಿಶೀಲಿಸಿದ ಮುಖ್ಯ ಆಯುಕ್ತರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮುಖ್ಯರಸ್ತೆಯ ಇಕ್ಕೆಲಗಳಲ್ಲಿ ವಾಹನ ನಿಲುಗಡೆಯನ್ನು ತೆರವುಗೊಳಿಸಲು ಆದೇಶ
- ರಸ್ತೆ ಪಕ್ಕದ ಚರಂಡಿಗಳ ಹೂಳೆತ್ತಲು ಸೂಚನೆ

ಬೆಂಗಳೂರು: ಅನಧಿಕೃತ ಕಟ್ಟಡ ಹಾಗೂ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿದ ಕಟ್ಟಡಗಳನ್ನು ಗುರುತಿಸಿ, ತೆರವು ಕಾರ್ಯ ನಡೆಸುವಂತೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮಹದೇವಪುರ ವಲಯದ ನಲ್ಲೂರುಹಳ್ಳಿ ಮೆಟ್ರೊ ನಿಲ್ದಾಣದಿಂದ ನಲ್ಲೂರಹಳ್ಳಿ ಬೋರ್ವೆಲ್ ರಸ್ತೆ ಮುಖಾಂತರ ವೈಟ್‌ಫೀಲ್ಡ್ ಮುಖ್ಯರಸ್ತೆವರೆಗೆ ಬುಧವಾರ ಪರಿಶೀಲನೆ ನಡೆಸಿ, ರಸ್ತೆ ವಿಸ್ತರಣೆಗೆ ಕ್ರಮ ಕೈಗೊಳ್ಳಲು ಹೇಳಿದರು.

ನಲ್ಲೂರಹಳ್ಳಿ ಕಾಲೊನಿಯ 3ನೇ ಅಡ್ಡರಸ್ತೆ ಹಾಗೂ 7ನೇ ಅಡ್ಡರಸ್ತೆಯಲ್ಲಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ನಿಯಮಾನುಸಾರ ಅನಧಿಕೃತ ಕಟ್ಟಡದ ಭಾಗವನ್ನು ತ್ವರಿತವಾಗಿ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಡಾಡ್ಸ್ ವರ್ತ್ ಎನ್ಕ್ಲೇವ್ ರಸ್ತೆ ಬಳಿ ಚರಂಡಿಯ ನೀರು ರಸ್ತೆಗೆ ಬರುತ್ತಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ಪರಿಶೀಲನೆ ನಡೆಸಿ ಕಟ್ಟಡದ ಮಾಲೀಕರಿಗೆ ನೋಟಿಸ್ ನೀಡಲು ಹಾಗೂ ಕಟ್ಟಡ ಮಾಲೀಕರಿಗೆ ದಂಡ ವಿಧಿಸಲು ಆದೇಶಿಸಿದರು.

ನಲ್ಲೂರಹಳ್ಳಿ ಮುಖ್ಯರಸ್ತೆಯ ಇಕ್ಕೆಲಗಳಲ್ಲಿ ವಾಹನ ನಿಲುಗಡೆಯನ್ನು ತೆರವುಗೊಳಿಸಬೇಕು. ರಾಜಕಾಲುವೆಗೆ ತಡೆಗೋಡೆ ನಿರ್ಮಿಸಬೇಕು, ಬಫರ್ ವಲಯದಲ್ಲಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿ ನೀಡಬಾರದು ಎಂದರು. ಪಾದಚಾರಿ ಮಾರ್ಗ ಒತ್ತುವರಿ ಹಾಗೂ ಅನಧಿಕೃತ ಒಎಫ್‌ಸಿ ತೆರವುಗೊಳಿಸಿ, ರಸ್ತೆ ಪಕ್ಕದ ಚರಂಡಿಗಳ ಹೂಳೆತ್ತಬೇಕು. ಮುರಿದು ಬಿದ್ದ ಸ್ಲ್ಯಾಬ್‌ಗಳನ್ನು ಸರಿಪಡಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ವಲಯ ಆಯುಕ್ತ ರಮೇಶ್, ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ಉಪಸ್ಥಿತರಿದ್ದರು.


ನಲ್ಲೂರಹಳ್ಳಿಯಲ್ಲಿ ರಾಜಕಾಲುವೆಯನ್ನು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಪರಿಶೀಲಿಸಿದರು

ಕಾಲ್ತುಳಿತ ಪ್ರಕರಣ: ಕೆಎಸ್‌ಸಿಎ ಮಾಜಿ ಕಾರ್ಯದರ್ಶಿ, ಖಜಾಂಚಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತ ಘಟನೆಯ ಸಂಬಂಧ ಸಿಐಡಿ ಅಧಿಕಾರಿಗಳು, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಮಾಜಿ ಕಾರ್ಯದರ್ಶಿ ಎ.ಶಂಕರ್ ಹಾಗೂ ಮಾಜಿ ಖಜಾಂಚಿ ಜಯರಾಮ್ ಅವರನ್ನು ಬುಧವಾರ ವಿಚಾರಣೆಗೆ ಒಳಪಡಿಸಿದರು.

ಸಿಐಡಿ ಕಚೇರಿಗೆ ಮಧ್ಯಾಹ್ನ 3 ಗಂಟೆ ಸುಮಾರಿಗೆ ಬಂದಿದ್ದ ಶಂಕರ್ ಮತ್ತು ಜಯರಾಮ್ ಅವರನ್ನು ಸಿಐಡಿ ಎಸ್‌ಪಿ ಶುಭನ್ವಿತಾ ನೇತೃತ್ವದ ತಂಡವು ವಿಚಾರಣೆಗೆ ಒಳಪಡಿಸಿತು. ರಾತ್ರಿ 7.30ರವರೆಗೂ ವಿಚಾರಣೆ ನಡೆಯಿತು ಎಂದು ಗೊತ್ತಾಗಿದೆ.

'ದುರಂತಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲ. ಕಾರ್ಯಕ್ರಮ ಆಯೋಜನೆ ಮಾಡುವುದಾಗಿ ಪೊಲೀಸರಿಗೆ ಮೊದಲೇ ಮನವಿ ಮಾಡಲಾಗಿತ್ತು. ಆದರೆ, ಕಬ್ಬನ್‌ಪಾರ್ಕ್ ಠಾಣೆ ಇನ್‌ಸ್ಪೆಕ್ಟರ್ ಅನುಮತಿ ನಿರಾಕರಿಸಿದ್ದರು. ಡಿಸಿಎಂ ಬರುತ್ತಾರೆ ಎಂದಾಗ ಭದ್ರತೆ ನೀಡಲಾಗಿತ್ತು. ಅಭಿಮಾನಿಗಳಿಗೆ ಉಚಿತ ಪ್ರವೇಶಕ್ಕೆ ಅವಕಾಶ ನೀಡುವುದಾಗಿ ನಾವು ಹೇಳಿಲ್ಲ. ಆರ್‌ಸಿಬಿಗೆ ಸಂಬಂಧಿಸಿದವರು ಹೇಳಿರುವ ಸಾಧ್ಯತೆ ಇದೆ ಎಂಬುದಾಗಿ ಕೆಎಸ್‌ಸಿಎ ಪದಾಧಿಕಾರಿಗಳಾದ ಶಂಕರ್ ಹಾಗೂ ಜಯರಾಮ್ ಹೇಳಿಕೆ ನೀಡಿದ್ದಾರೆ' ಎಂದು ಗೊತ್ತಾಗಿದೆ.

ಅಮಾನತು ಆದೇಶ ಹಿಂಪಡೆಯಲು ವಾಲ್ಮೀಕಿ ಸಮಾಜದ ಆಗ್ರಹ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ವಿಜಯೋತ್ಸವದ ವೇಳೆ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಅವರನ್ನು ಅಮಾನತು ಮಾಡಿರುವ ಆದೇಶವನ್ನು ರಾಜ್ಯ ಸರ್ಕಾರ ಹಿಂಪಡೆದುಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಕಾರ್ಯಾಧ್ಯಕ್ಷ ಎಂ.ನರಸಿಂಹಯ್ಯ, 'ಎರಡು ವರ್ಷಗಳಿಂದ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಆಗಿ ಕಾರ್ಯನಿರ್ವಹಿಸಿದ್ದ ದಯಾನಂದ ಅವರನ್ನು ಕಾಲ್ತುಳಿತ ಪ್ರಕರಣದಲ್ಲಿ ಹರಕೆಯ ಕುರಿ ಮಾಡಲಾಗಿದೆ. ಪ್ರಕರಣವನ್ನು ಸರಿಯಾಗಿ ನಿಭಾಯಿಸಿಲ್ಲ ಎಂಬ ಕಾರಣ ನೀಡಿ ಅಮಾನತು ಮಾಡಿರುವುದು ಖಂಡನೀಯ. ರಾಜ್ಯ ಸರ್ಕಾರ ತಪ್ಪಿತಸ್ಥರನ್ನು ರಕ್ಷಣೆ ಮಾಡುವ ಉದ್ದೇಶದಿಂದ ದಕ್ಷ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದೆ.

ಇದು ನಮ್ಮ ನಾಯಕ ಸಮಾಜಕ್ಕೆ ಮಾಡಿದ ಅಪಮಾನವಾಗಿದೆ. ಕೂಡಲೇ ಅಮಾನತು ಆದೇಶವನ್ನು ಹಿಂಪಡೆದುಕೊಳ್ಳಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.


ಮಳೆಯಿಂದಾಗಿ ಜೆ.ಸಿ. ರಸ್ತೆಯಲ್ಲಿ ಟ್ರಾಫಿಕ್ ದಟ್ಟಣೆ ಕಂಡು ಬಂತು

ರಸ್ತೆಯಲ್ಲಿ ನೀರು: ಸಂಚಾರಕ್ಕೆ ಅಡ್ಡಿ

ಬೆಂಗಳೂರು: ನಗರದ ಕೆಲವು ಪ್ರದೇಶಗಳಲ್ಲಿ ಬುಧವಾರ ಸಂಜೆ ಉತ್ತಮ ಮಳೆಯಾಗಿದ್ದು, ಹಲವು ಭಾಗಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಯಿತು.

ಮಂಗಳವಾರ ತಡರಾತ್ರಿ ಸುರಿದ ಮಳೆಯಿಂದ ಹಲವು ರಸ್ತೆಗಳಲ್ಲಿ ನೀರು ತುಂಬಿತ್ತು. ಬುಧವಾರ ಬೆಳಿಗ್ಗೆ ವೇಳೆಗೆ ನೀರಿನ ಪ್ರಮಾಣ ಕಡಿಮೆಯಾಗುತ್ತಿತ್ತು. ಬೆಳಿಗ್ಗೆಯಿಂದಲೇ ನಗರದಲ್ಲಿ ಮೋಡಕವಿದ ವಾತಾವರಣವಿತ್ತು. ಆಗ್ಗಾಗ್ಗೆ ತುಂತುರು ಮಳೆಯಾಗುತ್ತಿತ್ತು. ಸಂಜೆಯ ವೇಳೆಗೆ ಮಳೆ ರಭಸದಿಂದ ಸುರಿಯಿತು.

ವಿ.ನಾಗೇನಹಳ್ಳಿ, ಹೊರಮಾವು, ಬಸವನಪುರ, ಪುಲಕೇಶಿನಗರ, ಹಗದೂರು, ವಿದ್ಯಾರಣ್ಯಪುರ, ಎಚ್‌ಎಎಲ್ ವಿಮಾನ ನಿಲ್ದಾಣ, ಎಚ್‌ಎಸ್‌ಆರ್ ಲೇಔಟ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತಲಾ ಎರಡು ಸೆಂ.ಮೀ ಮಳೆಯಾಯಿತು.

ಕೆ.ಆರ್.ಪುರ ಮೆಟ್ರೊ ನಿಲ್ದಾಣದಿಂದ ಬೆನ್ನಿಗಾನಹಳ್ಳಿ, ನಾಗವಾರ ವೃತ್ತದಿಂದ ಹೆಬ್ಬಾಳ, ಹಲಸೂರಿನಿಂದ ಕೆ.ಆರ್. ಪುರ, ಮಾರತ್‌ಹಳ್ಳಿಯಿಂದ ಇಬ್ಲೂರು, ಹೋಪ್ ಫಾರ್ಮ್‌ನಿಂದ ಬೆಳತ್ತೂರು, ಹೆಬ್ಬಾಳ ಮೇಲ್ಸೇತುವೆ, ಸಿದ್ದಾಪುರದಿಂದ ವರ್ತೂರು ಕೋಡಿ, ಹೆಣ್ಣೂರು ಕಡೆಯಿಂದ ಗೆದ್ದಲಹಳ್ಳಿ, ಥಣಿಸಂದ್ರದಿಂದ ಹೆಗಡೆ ನಗರ, ಸಹಕಾರ ನಗರದಿಂದ ಕೊಡಿಗೇಹಳ್ಳಿ, ಜಯಮಹಲ್ ರಸ್ತೆಗಳಲ್ಲಿ ಮಳೆ ನೀರು ನಿಂತಿದ್ದರಿಂದ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು.

ರಸ್ತೆಯಲ್ಲಿ ಹೆಚ್ಚು ನೀರು ನಿಂತಿದ್ದರಿಂದ ದ್ವಿಚಕ್ರ ವಾಹನ ಸವಾರರು ಸಂಚರಿಸಲು ಸಾಧ್ಯವಾಗದೆ ಸಂಕಷ್ಟಕ್ಕೊಳಗಾದರು. ಸಂಚಾರ ಪೊಲೀಸರು ವಾಹನ ಸಂಚಾರವನ್ನು ಸುಗಮಗೊಳಿಸಲು ಪ್ರಯಾಸಪಟ್ಟರು.

'ನನಗೆ ಕನ್ನಡ ಗೊತ್ತು' ಪ್ರಮಾಣಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡೇತರರಿಗೆ ಕನ್ನಡ ಕಲಿಸುವ 'ಮನೆ ಮನಗಳಲ್ಲಿ ಕನ್ನಡ ರಂಗವಲ್ಲಿಯ ದರ್ಪಣ-ಮಕರಂದ' ಅಭಿಯಾನದ ಮೊದಲ ಆವೃತ್ತಿಗೆ ಸಂಬಂಧಿಸಿದಂತೆ 'ನನಗೆ ಕನ್ನಡ ಗೊತ್ತು' ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮ ಕೆ.ಆರ್.ಪುರದ 'ಸೀ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ನಡೆಯಿತು.

ಬೆಂಗಳೂರಿನ ಅಪಾರ್ಟ್‌ಮೆಂಟ್‌ನ 450 ಅನ್ಯಭಾಷಿಕ ನಿವಾಸಿಗಳು ನಾಲ್ಕು ತಿಂಗಳಲ್ಲಿ ಕನ್ನಡ ಕಲಿತಿದ್ದು, ಪ್ರಮಾಣಪತ್ರ ಸ್ವೀಕರಿಸಿದರು.

ಗಡಿನಾಡಿನಲ್ಲಿ ಕನ್ನಡದ ಕಿಚ್ಚು ಹಚ್ಚಿದ್ದ ಕವಿ, ದಿವಂಗತ ಕಯ್ಯಾರ ಕಿಞ್ಞಣ್ಣ ರೈ ಅವರ ಜನ್ಮದಿನದ ಪ್ರಯುಕ್ತ ಅವರ ಭಾವಗೀತೆಗಳನ್ನು ಹಾಡಲಾಯಿತು.

ಕಿಞ್ಞಣ್ಣ ರೈ ಅವರ ಪುತ್ರ ಡಾ. ಪ್ರಸನ್ನ ರೈ ಮಾತನಾಡಿ, 'ಯಾವುದೇ ಭಾಷೆ ದೊಡ್ಡದು ಅಥವಾ ಚಿಕ್ಕದು ಅಲ್ಲ. ಮಕರಂದ ಸಂಸ್ಥೆಯ ಪರಿಕಲ್ಪನೆಯಂತೆ ಕರ್ನಾಟಕದಲ್ಲಿ ಅನ್ಯಭಾಷಿಕರು ಕನ್ನಡ ಕಲಿಯಬೇಕು. ಇದೇ ರೀತಿ ಎಲ್ಲ ರಾಜ್ಯಗಳಲ್ಲಿಯೂ ಅಲ್ಲಿನ ಪ್ರಾದೇಶಿಕ ಭಾಷೆಯನ್ನು, ಅಲ್ಲಿ ವಾಸ ಮಾಡುವವರು ಕಲಿಯುವಂತಾಗಬೇಕು' ಎಂದು ಹೇಳಿದರು.

ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ ಅಧ್ಯಕ್ಷ ವಿಕ್ರಮ ರೈ ಮಾತನಾಡಿ, 'ಸ್ಥಳೀಯ ಭಾಷೆಯನ್ನು ಕಲಿಯುವುದರಿಂದ ಸ್ನೇಹ ಸಂಪಾದನೆಯಾಗುತ್ತದೆ. ವ್ಯವಹಾರವೂ ಸುಲಭ. ಕನ್ನಡವನ್ನು ಕಲಿಯಬೇಕು. ಬೇರೆ ಭಾಷೆಗಳನ್ನೂ ಗೌರವಿಸಬೇಕು' ಎಂದು ತಿಳಿಸಿದರು.

ಸೀ ಸಮೂಹ ಶಿಕ್ಷಣ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕಿ ಪೂರ್ಣಿಮಾ ಶ್ರೀನಿವಾಸ್ ಮಾತನಾಡಿ, 'ಬೇರೆ ರಾಜ್ಯಗಳಿಂದ ಬಂದವರೊಂದಿಗೆ ಸಂಘರ್ಷಕ್ಕೆ ಎಡೆ ಇಲ್ಲದಂತೆ ಪ್ರೀತಿಯಿಂದ ಭಾಷೆ ಕಲಿಸಬೇಕು' ಎಂದು ಸಲಹೆ ನೀಡಿದರು.


ಕೆ.ಆರ್‌ಪುರದ 'ಸೀ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ 'ನನಗೆ ಕನ್ನಡ ಗೊತ್ತು' ಪ್ರಮಾಣ ಪತ್ರ ವಿತರಿಸಲಾಯಿತು.

'₹7 ಕೋಟಿ ಬಿಡುಗಡೆ'

ಹೊಸಪೇಟೆ (ವಿಜಯನಗರ): ರಾಜ್ಯ ಸರ್ಕಾರ 2 ವರ್ಷ ಪೂರೈಸಿದ ಪ್ರಯುಕ್ತ ನಗರದಲ್ಲಿ ಮೇ 20ರಂದು ನಡೆದಿದ್ದ ಸಮರ್ಪಣಾ ಸಂಕಲ್ಪ ಸಮಾವೇಶಕ್ಕೆ ಆಗಿದ್ದ ಖರ್ಚು ಭರಿಸಲುವಾಗಿ ಕಂದಾಯ ಇಲಾಖೆ ₹7 ಕೋಟಿ ಬಿಡುಗಡೆ ಮಾಡಿದೆ. ಸಂಡೂರಿನ ರೈತ ಸಂಘದ ಮಾಧವರೆಡ್ಡಿ ಕರೂರು ಅವರು ಆರ್‌ಟಿಐ ಅಡಿ ಈ ಮಾಹಿತಿ ಪಡೆದಿದ್ದಾರೆ.

ನಿಧನ ವಾರ್ತೆ

ರಾಹುಲ್.ಬಿ.ಪಾಟೀಲ್



ನೆಲಮಂಗಲ: ಮಲ್ಲಾಪುರ ನಿವಾಸಿ ರಾಹುಲ್. ಬಿ.ಪಾಟೀಲ್ (28) ಅವರು ಬುಧವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಮೃತರಿಗೆ ತಂದೆ, ತಾಯಿ, ಸಹೋದರಿ ಇದ್ದಾರೆ. ಸೊಂಡೆಕೊಪ್ಪದಲ್ಲಿ ಅಂತ್ಯಸಂಸ್ಕಾರ ನೆರವೇರಿತು.

ರೀಲ್ಸ್ ಮೆಚ್ಚಿ ಮದುವೆ; ಜಾತಿ ಕಾರಣಕ್ಕೆ ನಾಪತ್ತೆಯಾದ ಪತಿ

ಪ್ರಜಾವಾಣಿ ವಾರ್ತೆ


ಪ್ರತಾಪ್

ರಾಮನಗರ: ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾದ ಯುವತಿಯನ್ನು ಕುಟುಂಬದ ವಿರೋಧ ಲೆಕ್ಕಿಸದೆ ಅಂತರ್ಜಾತಿ ವಿವಾಹವಾದ ಕೆಎಸ್‌ಆರ್‌ಟಿಸಿ ಬಸ್ ಚಾಲಕನೊಬ್ಬ ವರ್ಷದ ಬಳಿಕ ಜಾತಿ ಕಾರಣಕ್ಕೆ ಯುವತಿಗೆ ಕೈಕೊಟ್ಟು ತಲೆ ಮರೆಸಿಕೊಂಡಿದ್ದಾರೆ.

ಅತ್ತ ಪತಿ ಮನೆಯವರು ಸೇರಿಸದೆ ಇತ್ತ ತವರು ಮನೆಯಲ್ಲೂ ಆಶ್ರಯ ಸಿಗದೆ ಅತಂತ್ರ ಸ್ಥಿತಿ ತಲುಪಿರುವ ಯುವತಿ, ತಾಲ್ಲೂಕಿನ ಬಿಳಗುಂಬದಲ್ಲಿರುವ ಪತಿ ಮನೆ ಎದುರು ನ್ಯಾಯಕ್ಕಾಗಿ ಬುಧವಾರ ಧರಣಿ ನಡೆಸಿದರು.


ನ್ಯಾಯಕ್ಕೆ ಆಗ್ರಹಿಸಿ ಪತಿ ಮನೆ ಎದುರು ಪ್ರತಿಭಟನೆ ನಡೆಸಿದ ರಕ್ಷಿತಾ

ಇನ್‌ಸ್ಟಾಗ್ರಾಂನಲ್ಲಿ ರೀಲ್ಸ್ ಪೋಸ್ಟ್ ಮಾಡುತ್ತಿದ್ದ ತಾಲ್ಲೂಕಿನ ಬನ್ನಿಕುಪ್ಪೆಯ ಪರಿಶಿಷ್ಟ ಜಾತಿಯ ರಕ್ಷಿತಾ ಮತ್ತು ರೀಲ್ಸ್‌ಗಳನ್ನು ಮೆಚ್ಚಿ ಸಂದೇಶ ಕಳಿಸುತ್ತಿದ್ದ ಬಿಳಗುಂಬದ ಒಕ್ಕಲಿಗ ಸಮುದಾಯದ ಪ್ರತಾಪ್ ನಡುವಣ ಸ್ನೇಹ ಪ್ರೀತಿಗೆ ತಿರುಗಿತ್ತು. ಅಂತರ್ಜಾತಿ ಕಾರಣಕ್ಕೆ ಮದುವೆಗೆ ಇಬ್ಬರ ಮನೆಯವರೂ ವಿರೋಧಿಸಿದ್ದರು. ವಿರೋಧ ಲೆಕ್ಕಿಸದೆ ವರ್ಷದ ಹಿಂದೆ ಇಬ್ಬರೂ ತಿರುಪತಿಯಲ್ಲಿ ಮದುವೆಯಾಗಿದ್ದರು.

'ಪ್ರತಾಪ್, ನನಗೆ ಮೋಸ ಮಾಡಿದ್ದಾರೆ. ಎಷ್ಟು ಹುಡುಕಿದರೂ ಸಿಗಲಿಲ್ಲ. ನಾಪತ್ತೆಯಾಗಿರುವ ಅವರನ್ನು ಹುಡುಕಿ ಕೊಡುವಂತೆ ಕಳೆದ ತಿಂಗಳು ಚಾಮರಾಜಪೇಟೆ ಮತ್ತು ಬಿಡದಿ ಠಾಣೆಗೆ ದೂರು ಕೊಟ್ಟಿದ್ದೇನೆ' ಎಂದು ರಕ್ಷಿತಾ ಹೇಳಿದ್ದಾರೆ.


ತಿರುಪತಿ ತಿರುಮಲ ದೇವಸ್ಥಾನ (ಟಿಟಿಡಿ) ಟ್ರಸ್ಟ್ ಅಧ್ಯಕ್ಷ ಬಿ.ಆರ್. ನಾಯ್ಡು ಅವರು ಬುಧವಾರ ನಗರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ವೇಳೆ ಸನ್ಮಾನಿಸಿದರು. ಟಿಟಿಡಿ ಸದಸ್ಯ ಎಸ್‌.ನರೇಶ್‌ಕುಮಾರ್ ಜೊತೆಗಿದ್ದರು.

ನಗರದಲ್ಲಿ ಇಂದು

ವಿಶ್ವ ಪರಿಸರ ದಿನಾಚರಣೆ: ಉದ್ಘಾಟನೆ: ವಿ. ಕಾಮೇಶ್ವರ ರಾವ್, ಉಪಸ್ಥಿತಿ: ಶ್ರೀನಿವಾಸ್ ಹರೀಶ್ ಕುಮಾರ್, ಅತಿಥಿಗಳು: ಮೀನಾಕ್ಷಿ ನೇಗಿ, ಕೆ.ಎಸ್. ಭರತ್ ಕುಮಾರ್, ಶಿವಶಂಕರ್, ಡಿ.ಎಸ್. ರಮೇಶ್, ಆಯೋಜನೆ: ಕರ್ನಾಟಕ ಹೈಕೋರ್ಟ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ, ಸ್ಥಳ: ಬಾಲಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 9.30

ಅ.ನ. ಯಲ್ಲಪ್ಪ ರೆಡ್ಡಿ ಅವರ 'ಕರ್ನಾಟಕ ಪ್ರಕೃತಿ ವಿಕೋಪಗಳು-ಆತಂಕಗಳು' ಪುಸ್ತಕ ಬಿಡುಗಡೆ: ಸಂತೋಷ್ ಹೆಗ್ಡೆ, ಅತಿಥಿಗಳು: ಡಾ. ವಿವೇಕ್ ಜವಳಿ, ಟಿ.ಎನ್. ಸೀತಾರಾಮ್, ಪಿ. ಶೇಷಾದ್ರಿ, ವೆಂಕಟಶಿವಾರೆಡ್ಡಿ, ಪುಸ್ತಕದ ಕುರಿತು: ದೇವು ಪತ್ತಾರ್, ಗಾಯಿತ್ರಿ ವಿ., ಸಂಧ್ಯಾ ಹೆಗ್ಡೆ, ಆಯೋಜನೆ: ಜನ ಪ್ರಕಾಶನ, ಬೆಂಗಳೂರು ವಿಜ್ಞಾನ ವೇದಿಕೆ ಮತ್ತು ಸಮಾಜ ವಿಜ್ಞಾನ ವೇದಿಕೆ, ನ್ಯಾಷನಲ್ ಕಾಲೇಜು, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30


ಯಲ್ಲಪ್ಪ ರೆಡ್ಡಿ

ಐತಿಹಾಸಿಕ ಪಾಕ ಪದ್ಧತಿಗಳನ್ನು ಪುನರುಜ್ಜೀವನಗೊಳಿಸುವ ಸ್ಪರ್ಧೆ: ಉದ್ಘಾಟನೆ: ದಿನೇಶ್ ಗುಂಡೂರಾವ್, ಆಯೋಜನೆ: ವರ್ಲ್ಡ್ ಆಫ್ ಹಾಸ್ಪಿಟಾಲಿಟಿ, ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 11.30ರಿಂದ

ಅಂತರರಾಷ್ಟ್ರೀಯ ಯೋಗ ದಿನಾಚರಣೆ: ಭಾಗವಹಿಸುವವರು: ಥಾವರಚಂದ್ ಗೆಹಲೋತ್, ಎಚ್.ಆರ್. ನಾಗೇಂದ್ರ, ಬಿ.ಸಿ. ಭಗವಾನ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಸಚಿನ್ ಘೋರ್ಪಡೆ, ಡಾ. ನಾಗರಾಜ್, ಬಿ.ಎನ್. ಗಂಗಾಧರ್, ಡಾ. ವಿಜಯಲಕ್ಷ್ಮಿ ದೇಶಮಾನೆ, ಡಾ. ಪ್ರತಿಮಾ ಮೂರ್ತಿ, ಆಯೋಜನೆ: ಎಸ್. ವ್ಯಾಸ, ಸ್ಥಳ: ರಾಯಲ್ ಸೆನೆಟ್, ಅರಮನೆ ಮೈದಾನ, ಮಧ್ಯಾಹ್ನ 3ರಿಂದ

ನವೀಕೃತ ವೆಂಕಟಪ್ಪ ಚಿತ್ರಶಾಲೆಯ ಉದ್ಘಾಟನೆ: ಎಚ್.ಕೆ. ಪಾಟೀಲ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅತಿಥಿ: ಎಂ.ಆರ್. ಜೈಶಂಕರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಸ್ಥಳ: ವೆಂಕಟಪ್ಪ ಚಿತ್ರಶಾಲೆ, ಕಸ್ತೂರಬಾ ರಸ್ತೆ, ಸಂಜೆ 4

ಸಂಘದ ವಜ್ರ ಮಹೋತ್ಸವ, ಸಂಸ್ಥಾಪನಾ ದಿನಾಚರಣೆ: ಶುಭ ಹಾರೈಕೆ: ಉಮಾಶ್ರೀ, ಅತಿಥಿ: ಕೆ. ಮೋಹನ್‌ದೇವ್ ಆಳ್ವ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಭಾಂಗಣ, ಕೆಂಪೇಗೌಡನಗರ, ಸಂಜೆ 5ರಿಂದ

ಹರಿದಾಸ ವಾಣಿ: ಗಾಯನ: ಕೆ. ಸುಧಾಕರ್ ಶೆಟ್ಟಿ, ರಮೇಶಚಂದ್ರ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.30

'ಸಂತೋಷ ಮತ್ತು ಆರೋಗ್ಯ' ಉಪನ್ಯಾಸ: ಕೆ.ಪಿ. ಪುತ್ತೂರಾಯ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

'ಅಶ್ವತ್ಥಾಮ ನಾಟ್‌ಔಟ್' ನಾಟಕ ಪ್ರದರ್ಶನ: ನಿರ್ದೇಶನ: ಮೋಹನಚಂದ್ರ, ಆಯೋಜನೆ: ಮಂಗಳೂರಿನ ಆಯನ ನಾಟಕದ ಮನೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ದಾಸ ವರ್ಷಿಣಿ ಗಾಯನ: ನಿರೀಕ್ಷಾ ಮಂಜುನಾಥ್, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7





ಸಿ.ಎಂ, ಡಿಸಿಎಂ, ಮುಖ್ಯ ಆಯುಕ್ತರ ಭರವಸೆಯಲ್ಲೇ ಉಳಿದ ಗುಂಡಿಮುಕ್ತ ರಸ್ತೆ ● ವಾಹನ ಸವಾರರಿಗೆ ಕಂಟಕ, ಹೆಚ್ಚಿದ ಅಪಘಾತಗಳು

ರಸ್ತೆ ಗುಂಡಿ: ಸರ್ವಋತುವಿನಲ್ಲೂ ಗಂಡಾಂತರ

● ಆರ್. ಮಂಜುನಾಥ್

ಬೆಂಗಳೂರು: ಚಳಿಗಾಲ, ಬೇಸಿಗೆ ಕಾಲ ಮುಗಿದು ಮತ್ತೆ ಮಳೆಗಾಲ ಆರಂಭವಾಗಿದ್ದರೂ ನಗರದ ರಸ್ತೆಗಳನ್ನು ಗುಂಡಿಮುಕ್ತವಾಗಿಸುವ ಭರವಸೆ ಈಡೇರಿಲ್ಲ. ಮಳೆನೀರಿನಿಂದ ಆವೃತವಾದ ಗುಂಡಿಗಳಿಂದಾಗುವ ಅನಾಹುತಗಳೂ ಕಡಿಮೆಯಾಗಿಲ್ಲ.

ಬೇಸಿಗೆಯಲ್ಲಿ ರಸ್ತೆ ಗುಂಡಿ ದುರಸ್ತಿ ಆರಂಭವಾಗುವುದಿಲ್ಲ. ಮಳೆಗಾಲಕ್ಕೆ ಕೆಲವೇ ದಿನಗಳ ಮುನ್ನ ದುರಸ್ತಿ ಆರಂಭಿಸುತ್ತಾರೆ. ಮಳೆ ಆರಂಭವಾದರೆ, ಮಳೆ ಬಿಡುವು ನೀಡಿದ ಕೂಡಲೇ ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತದೆ ಎಂದು ಬಿಬಿಎಂಪಿ ಅಧಿಕಾರಿಗಳು, ಎಂಜಿನಿಯರ್‌ಗಳು ಹೇಳುತ್ತಾರೆ. ಮಳೆ ನಿಂತ ಮೇಲೆ, ಟೆಂಡರ್ ಆಗಿದೆ ಗುತ್ತಿಗೆದಾರರು ಕೆಲಸ ಆರಂಭಿಸುತ್ತಾರೆ ಎನ್ನುತ್ತಾರೆ. ಕಾರ್ಯಾದೇಶ ನೀಡುವ ವೇಳೆಗೆ ಮತ್ತೆ ಮಳೆ ಆರಂಭವಾಗುತ್ತದೆ. ಮಳೆಯಲ್ಲಿ ಗುಂಡಿ ಮುಚ್ಚಲು ಸಾಧ್ಯವಿಲ್ಲ ಎಂದು ಮತ್ತೆ ಸಬೂಬು ನೀಡುತ್ತಾರೆ. ಹೀಗಾಗಿ, ನಗರದಲ್ಲಿ ಎಲ್ಲ ಕಾಲದಲ್ಲೂ ರಸ್ತೆಗುಂಡಿಗಳು ಹೆಚ್ಚಾಗುತ್ತಲೇ ಇದ್ದು, ವಾಹನ ಸವಾರರಿಗೆ ಕಂಟಕವಾಗಿವೆ.



ಮಳೆಗಾಲಕ್ಕೆ ಮುನ್ನ ರಸ್ತೆಗುಂಡಿಗಳನ್ನು ಮುಚ್ಚಲಾಗುತ್ತದೆ, ರಸ್ತೆ ನಿರ್ವಹಣೆ ಮಾಡಲಾಗುತ್ತದೆ ಎಂದು ಬಿಬಿಎಂಪಿ ಅಧಿಕಾರಿಗಳು ಜನವರಿಯಿಂದ ಹೇಳುತ್ತಿದ್ದಾರೆ. ಪೂರ್ವ ಮುಂಗಾರು ಅಬ್ಬರಿಸಿ, ಬಿಡುವು ನೀಡಿತ್ತು. ಈಗ ಮುಂಗಾರು ಮಳೆ ಆರಂಭವಾಗಿದ್ದು ಗುಂಡಿಗಳು ಹೆಚ್ಚಾಗುತ್ತಲೇ ಇವೆ.

ನಗರದಲ್ಲಿ ರಸ್ತೆ ಗುಂಡಿಗಳಿಂದ ಹಲವು ರೀತಿಯ ಅನಾಹುತಗಳಾಗುತ್ತಿದ್ದು, ಮಳೆ ಬಂದಾಗ ರಸ್ತೆ ಜಲಾವೃತವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ವಾಹನಗಳು ಅದರಲ್ಲೂ ದ್ವಿಚಕ್ರ ವಾಹನ ಸವಾರರು ಬಿದ್ದು, ಸಂಕಷ್ಟಕ್ಕೀಡಾಗುತ್ತಾರೆ. ಆದರೆ ಪ್ರಕರಣಗಳು ದಾಖಲಾಗುವುದಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು 2024ರ ಸೆಪ್ಟೆಂಬರ್‌ನಲ್ಲಿ ನಗರ ಸಂಚಾರ ಮಾಡಿದ ಸಂದರ್ಭದಲ್ಲಿ, ರಸ್ತೆಗಳಲ್ಲಿ ಗುಂಡಿಗಳು ಇರದಂತೆ ಕ್ರಮ ಕೈಗೊಳ್ಳಬೇಕು ಎಂದು ಬಿಬಿಎಂಪಿ ಎಂಜಿನಿಯರ್‌ಗಳಿಗೆ ಸೂಚಿಸಿ, ಒಂದು ತಿಂಗಳ ಗಡುವನ್ನೂ ನೀಡಿದ್ದರು. ಆಗ ದುರಸ್ತಿ ಕಾರ್ಯ ಚುರುಕಾಗಿತ್ತಾದರೂ, ನಂತರ ಬಹುತೇಕ ಸ್ಥಗಿತಗೊಂಡಿತು.

‘ರಸ್ತೆಗುಂಡಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದ್ದರೂ, ಅದು ಬಿಬಿಎಂಪಿ ಎಂಜಿನಿಯರ್‌ಗಳ ಗಮನಕ್ಕೇ ಬರುವುದಿಲ್ಲ. ಚೆನ್ನಾಗಿರುವ ರಸ್ತೆಗಳಿಗೆ ರಾತ್ರೋರಾತ್ರಿ ಡಾಂಬರು ಹಾಕುತ್ತಾರೆ. ಅದರ ಪಕ್ಕದ ರಸ್ತೆಯಲ್ಲಿರುವ ಗುಂಡಿಗೆ ಡಾಂಬರು ಹಾಕುವುದಿಲ್ಲ’ ಎಂದು ಮಲ್ಲೇಶ್ವರದ ನಿವಾಸಿ ಶ್ರೀನಿವಾಸ್ ದೂರಿದರು.

ನಗರದ ಎಲ್ಲ ವಲಯಗಳಲ್ಲಿ 1,700ರಿಂದ 1,900 ರಸ್ತೆಗುಂಡಿಗಳಿವೆ ಎಂದು ಬಿಬಿಎಂಪಿ ಎಂಜಿನಿಯರ್‌ಗಳು ಅಂಕಿ–ಅಂಶ ನೀಡುತ್ತಿದ್ದರು. 2024ರ ಸೆಪ್ಟೆಂಬರ್‌ನಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಟ್ಟಪ್ಪಣೆ ಮಾಡಿ, ರಸ್ತೆ ಗುಂಡಿ ಮುಚ್ಚಲು 15 ದಿನ ಗಡುವು ನೀಡಿದಾಗ, 16 ಸಾವಿರ ರಸ್ತೆ ಗುಂಡಿಗಳನ್ನು ಮುಚ್ಚಿ ‘ದಾಖಲೆ’ ಬರೆದರು.

ಮುಖ್ಯ ಆಯುಕ್ತರೂ ಸೇರಿದಂತೆ ವಲಯ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳೆಲ್ಲ ಹಗಲು–ರಾತ್ರಿ ರಸ್ತೆಗಿಳಿದು, ಗುಂಡಿಗಳನ್ನು ಮುಚ್ಚುವ ಕಾರ್ಯದ ಮೇಲ್ವಿಚಾರಣೆ ನಡೆಸಿದರು. ಉಪ ಮುಖ್ಯಮಂತ್ರಿ ವಿದೇಶದಿಂದ ಬಂದ ಕೂಡಲೇ ಅವರಿಂದ ಶಹಭಾಷ್‌ಗಿರಿ ಪಡೆಯಬೇಕೆಂಬ ಉಮೇದಿನಲ್ಲಿ ಕೆಲಸ ಮಾಡಿದರು. ಹೀಗಾಗಿ ಎರಡು ಸಾವಿರದ ಆಸುಪಾಸಿನಲ್ಲಿವೆ ಎಂದು ಹೇಳಲಾಗಿದ್ದ ರಸ್ತೆಗುಂಡಿಗಳು 16 ಸಾವಿರವಾದವು. ಇವುಗಳ ದುರಸ್ತಿಯಾಗಿವೆ ಎಂದು ದೊಡ್ಡ ಚಿತ್ರಗಳಲ್ಲಿ ತೋರಿಸಿದರು. ಅದಾದ ನಂತರ, ರಸ್ತೆ ಗುಂಡಿಗಳ ಬಗ್ಗೆ ತಾತ್ಸಾರ ಮುಂದುವರಿಯಿತು.

‘ನಿತ್ಯವೂ ಸಾವಿರಾರು ಗುಂಡಿಗಳು ಹೊಸದಾಗಿ ಬೀಳುತ್ತಿವೆ’ ಎಂದು ಬಿಬಿಎಂಪಿಯ ಅಂದಿನ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದ ಮೇಲಂತೂ ಎಲ್ಲ ಮುಖ್ಯ ಎಂಜಿನಿಯರ್‌ಗಳು, ವಲಯ ಅಧಿಕಾರಿಗಳು ಅದನ್ನೇ ಹೇಳುತ್ತಿದ್ದಾರೆ. ರಸ್ತೆ ಗುಂಡಿ ದುರಸ್ತಿ ನಿರಂತರ ಕಾರ್ಯ ಅದು ಮುಗಿಯುವುದಿಲ್ಲ ಎಂದೇ ಸಬೂಬು ನೀಡುತ್ತಾರೆ. ಹೀಗಾಗಿ, ಕಳೆದ ಆರು ತಿಂಗಳಲ್ಲಿ ರಸ್ತೆ ಗುಂಡಿಗಳನ್ನು ಗುರುತಿಸಿಲ್ಲ, ಅಂಕಿ–ಅಂಶಗಳನ್ನೂ ಸಂಗ್ರಹಿಸಿಲ್ಲ. ಸಂಚಾರ ಪೊಲೀಸರು ನೀಡಿದ ಮಾಹಿತಿಯನ್ನೇ ಅಂಕಿಗಳನ್ನಾಗಿ ಉಳಿಸಿಕೊಂಡಿದ್ದಾರೆ.



ಬನಶಂಕರಿ 3ನೇ ಹಂತದ ಡಿಸೋಜ ನಗರದಲ್ಲಿ ಹದಗೆಟ್ಟಿರುವ ಮುಖ್ಯರಸ್ತೆಯಲ್ಲಿ ವಾಹನ ಸವಾರರ ಪರದಾಟ
ಪ್ರಜಾವಾಣಿ ಚಿತ್ರ:ರಂಜು ಪಿ.

ಹೇಳಿಕೆಯಲ್ಲೇ ಉಳಿದ ಡಿಸಿಎಂ ಬೈಕ್ ಸವಾರಿ!

‘16 ಸಾವಿರ ಗುಂಡಿಗಳನ್ನು ಮುಚ್ಚಿ ಬಿಬಿಎಂಪಿ ಸಿಬ್ಬಂದಿ ದಾಖಲೆ ಸೃಷ್ಟಿಸಿದ್ದಾರೆ. ಆದರೂ ಅವರ ಮಾತನ್ನು ನಂಬುವುದಿಲ್ಲ. ಕಾಲೇಜು ದಿನಗಳಲ್ಲಿ ಬಳಸುತ್ತಿದ್ದ ಬೈಕ್ ಅನ್ನು ಸಿದ್ಧಪಡಿಸಲಾಗಿದೆ. ಅದರಲ್ಲೇ ಎಲ್ಲ ರಸ್ತೆಗಳಿಗೂ ಹೋಗುತ್ತೇನೆ. ಅಧಿಕಾರಿಗಳು ಮುಖ್ಯರಸ್ತೆಗಳನ್ನು ಮಾತ್ರ ತೋರಿಸುತ್ತಾರೆ. ಒಳ ರಸ್ತೆಗಳನ್ನು ಬೈಕ್‌ನಲ್ಲಿ ಓಡಾಡಿ ನಾನು ವೀಕ್ಷಿಸುತ್ತೇನೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 2024ರ ಸೆಪ್ಟೆಂಬರ್‌ನಲ್ಲಿ ಹೇಳಿದ್ದರು.

ಬಿಬಿಎಂಪಿ ಎಂಜಿನಿಯರ್‌ಗಳ ಮಾತನ್ನು ನಂಬದ ಉಪ ಮುಖ್ಯಮಂತ್ರಿಯವರು ತಮ್ಮದೇ ಶೈಲಿಯಲ್ಲಿ ರಸ್ತೆಗುಂಡಿಗಳನ್ನು ಪರಿಶೀಲಿಸಿ, ರಸ್ತೆಗಳನ್ನು ಗುಂಡಿ ಮುಕ್ತಗೊಳಿಸುವುದಾಗಿ ಹೇಳಿದ್ದರು. ಆದರೆ, ಆ ಮಾತನ್ನಾಡಿ ಎಂಟು ತಿಂಗಳಾದರೂ ಶಿವಕುಮಾರ್ ಅವರು ಬೈಕ್ ಹತ್ತಲೇ ಇಲ್ಲ, ನಗರದ ರಸ್ತೆಗಳಲ್ಲಿ ಸಂಚರಿಸಲೇ ಇಲ್ಲ. ಆದ್ದರಿಂದ, ಬಿಬಿಎಂಪಿ ಎಂಜಿನಿಯರ್‌ಗಳು ರಸ್ತೆಯಲ್ಲಿರುವ ಗುಂಡಿಗಳನ್ನು ಗುರುತಿಸುವುದನ್ನು ಬಿಟ್ಟರು. ದುರಸ್ತಿ ಕಾರ್ಯಕ್ಕೆ ಹಲವು ನೆಪಗಳನ್ನು ಹೇಳುತ್ತಲೇ ಇದ್ದಾರೆ.



ಸಮರೋಪಾದಿಯಲ್ಲಿ ದುರಸ್ತಿ: ಮಹೇಶ್ವರ್ ರಾವ್

‘ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚುವ ಕೆಲಸ ನಡೆಯುತ್ತಿದೆ. ಎಲ್ಲವನ್ನೂ ಮುಚ್ಚಿದ್ದೇವೆ ಎಂದು ಹೇಳಲಾಗದಿದ್ದರೂ, ಸಮರೋಪಾದಿಯಲ್ಲಿ ದುರಸ್ತಿ ಕಾರ್ಯ ನಡೆಯುತ್ತಿದೆ. ವಲಯಗಳ ಅನುದಾನದಲ್ಲಿ ವಾರ್ಡ್ ರಸ್ತೆಗಳ ಗುಂಡಿಗಳನ್ನು ಮುಚ್ಚಲು ಸೂಚಿಸಲಾಗಿದೆ. ಅದಕ್ಕಾಗಿ ಟೆಂಡರ್ ಕರೆಯಲಾಗಿದ್ದು, ಕೆಲವೇ ದಿನಗಳಲ್ಲಿ ದುರಸ್ತಿ ಕಾರ್ಯ ಆರಂಭವಾಗುತ್ತದೆ. ಮಳೆಗಾಲ ಆರಂಭವಾಗಿರುವುದರಿಂದ ಮಳೆ ಬಿಡುವು ನೀಡಿದ ಸಂದರ್ಭದಲ್ಲಿ ಕೆಲಸ ಮಾಡಲಾಗುತ್ತದೆ. ಹಾಟ್‌ಮಿಕ್ಸ್, ಕೋಲ್ಡ್ ಮಿಕ್ಸ್ ಎಲ್ಲವನ್ನೂ ಸಿದ್ಧಪಡಿಸಿಟ್ಟುಕೊಳ್ಳುವಂತೆ ಸೂಚಿಸಲಾಗಿದೆ. ತುರ್ತು ಸಂದರ್ಭದಲ್ಲಿ ವೆಟ್ ಮಿಕ್ಸ್ ಹಾಕಿ ಗುಂಡಿಗಳನ್ನು ದುರಸ್ತಿ ಮಾಡಲಾಗುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ತಿಳಿಸಿದರು.

647 ಗುಂಡಿ 10 ದಿನದಲ್ಲಿ ದುರಸ್ತಿ: ಲೋಕೇಶ್

‘ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳಲ್ಲಿ ಸುಮಾರು 647 ಗುಂಡಿಗಳಿವೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ. ಇದಲ್ಲದೆ ‘ರಸ್ತೆ ಗಮನ’ ಆ್ಯಪ್ ಸೇರಿದಂತೆ ಬಿಬಿಎಂಪಿಗೆ ಬರುವ ದೂರುಗಳನ್ನು ಆಧರಿಸಿ ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತಿದೆ. ಈಗಿರುವ ಗುಂಡಿಗಳನ್ನು ಇನ್ನು 10 ದಿನದಲ್ಲಿ ಮುಚ್ಚಲಾಗುತ್ತದೆ. ಒಂದು ಕಡೆಯಿಂದ ಮುಚ್ಚಿಕೊಂಡು ಬಂದರೆ ಮತ್ತೊಂದು ಕಡೆ ಹೊಸದಾಗಿ ಗುಂಡಿಗಳಾಗುತ್ತವೆ. ಇದೊಂದು ನಿರಂತರ ಪ್ರಕ್ರಿಯೆ. ತ್ವರಿತವಾಗಿ ಗುಂಡಿಗಳನ್ನು ಮುಚ್ಚಲಾಗುತ್ತಿದೆ’ ಎಂದು ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ಹೇಳಿದರು.



ಸಿಟಿ ಸಿವಿಲ್ ಕೋರ್ಟ್ ರಸ್ತೆಯು ಗುಂಡಿಮಯವಾಗಿದೆ
ಪ್ರಜಾವಾಣಿ ಚಿತ್ರ ಪ್ರಶಾಂತ್ ಎಚ್‌.ಜಿ.

ರಸ್ತೆ ಗುಂಡಿ ಕಂಡರೆ ಫೋಟೊ ಕಳುಹಿಸಿ

ನಾಗರಿಕರು ತಾವು ವಾಸಿಸುವ ಹಾಗೂ ಸಂಚರಿಸುವ ರಸ್ತೆಗಳಲ್ಲಿ ಗುಂಡಿ ಕಂಡರೆ ಅದರ ಚಿತ್ರ ಸಹಿತ ಮಾಹಿತಿಯನ್ನು ‘ಪ್ರಜಾವಾಣಿ’ಗೆ ಕಳುಹಿಸಿಕೊಡಬಹುದು. ನಿಮ್ಮ ಹೆಸರು ಹಾಗೂ ವಿಳಾಸವಿರಲಿ. ವಾಟ್ಸ್ ಆ್ಯಪ್: **9606038256**

ಅಪಘಾತದಲ್ಲಿ ಮಹಿಳೆ ಸಾವು: ಲಾರಿ ಚಾಲಕ, ಮಾಲೀಕನಿಗೆ ಜೈಲು, ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ವಿಭಾಗದ ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ್ದ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಲಾರಿ ಚಾಲಕ ಹಾಗೂ ಮಾಲೀಕನಿಗೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ಎಸಿಜೆಎಂ ಬೆಂಗಳೂರು ಗ್ರಾಮಾಂತರ ಜಿಲ್ಲಾ ನ್ಯಾಯಾಲಯ ಆದೇಶಿಸಿದೆ.

ಚಾಲಕ ಪುಟ್ಟಸ್ವಾಮಿ (58) ಹಾಗೂ ಲಾರಿ ಮಾಲೀಕ ರಮೇಶ್ (58) ಶಿಕ್ಷೆಗೆ ಒಳಗಾದವರು.

2023ರ ಜುಲೈ 18ರಂದು ಕಾಡುಗೋಡಿ ರೈಲ್ವೆ ಮೇಲ್ಸೇತುವೆಯಲ್ಲಿ ಅಪಘಾತ ಸಂಭವಿಸಿತ್ತು. ಹೋಪ್ ಫಾರಂ ಕಡೆಯಿಂದ ಕಾಡುಗೋಡಿ ಕಡೆಗೆ ಪೂರ್ಣಿಮಾ ಎಸ್. ಹೆಗಡೆ (35) ಅವರು ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ಅದೇ ರಸ್ತೆಯಲ್ಲಿ ಹಿಂಬದಿಯಿಂದ ವೇಗವಾಗಿ ಬಂದ ಲಾರಿಯೊಂದು ಸ್ಕೂಟರ್‌ಗೆ ಡಿಕ್ಕಿ ಹೊಡೆದಿತ್ತು. ಸ್ಕೂಟರ್‌ನಿಂದ ಕೆಳಕ್ಕೆ ಬಿದ್ದಿದ್ದ ಪೂರ್ಣಿಮಾ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ವೈದೇಹಿ ಆಸ್ಪತ್ರೆಗೆ ಕರೆದೊಯ್ಯುವ ದಾರಿಯಲ್ಲಿ ಮೃತಪಟ್ಟಿದ್ದರು.

ವೈಟ್‌ಫೀಲ್ಡ್ ಸಂಚಾರ ಠಾಣೆಯ ಪೊಲೀಸರು ಲಾರಿ ಚಾಲಕ ಹಾಗೂ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು. ನ್ಯಾಯಾಲಯಕ್ಕೆ ಸಂಚಾರ ಪೊಲೀಸರು ತನಿಖಾ ವರದಿಯನ್ನು ಸಲ್ಲಿಸಿದ್ದರು. ಚಾಲಕ ಪುಟ್ಟಸ್ವಾಮಿಗೆ 1 ವರ್ಷ 9 ತಿಂಗಳು ಜೈಲು ಶಿಕ್ಷೆ ಹಾಗೂ ₹15 ಸಾವಿರ ದಂಡ, ದಂಡ ಪಾವತಿಸಲು ವಿಫಲವಾದರೆ 3 ತಿಂಗಳು ಸಾದಾ ಸಜೆ ಹಾಗೂ ಮಾಲೀಕ ರಮೇಶ್‌ಗೆ 3 ತಿಂಗಳು ಸಾದಾ ಸಜೆ ಹಾಗೂ ₹5 ಸಾವಿರ ದಂಡ, ದಂಡ ಪಾವತಿಸಲು ವಿಫಲವಾದರೆ 10 ದಿನ ಶಿಕ್ಷೆ ವಿಧಿಸಿ, ನ್ಯಾಯಾಲಯ ಆದೇಶಿಸಿದೆ ಎಂದು ಸಂಚಾರ ವಿಭಾಗದ (ಪೂರ್ವ) ಡಿಸಿಪಿ ಸಾಹಿಲ್ ಬಾಗ್ಲಾ ತಿಳಿಸಿದ್ದಾರೆ.

‘ಒಡೆಯರ್ ಕಾರ್ಯ ಮಾದರಿ’

ನೆಲಮಂಗಲ: ‘ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರು ನಾಡು ನುಡಿ ಮತ್ತು ಸಮಾಜಕ್ಕೆ ನೀಡಿದ ಕೊಡುಗೆಯು ಅಪಾರವಾದದ್ದು’ ಎಂದು ಸಮತಾ ಸೈನಿಕ ದಳದ ತಾಲ್ಲೂಕು ಅಧ್ಯಕ್ಷೆ ಎಂ.ಶೋಭಾ ತಿಳಿಸಿದರು.

ಅಂಜನಾನಗರದಲ್ಲಿ ಸಮತಾ ಸೈನಿಕ ದಳದಿಂದ ಆಯೋಜಿಸಿದ್ದ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರ 141ನೇ ಜನ್ಮದಿನ ಹಾಗೂ ರಾಷ್ಟ್ರೀಯ ಎಸ್‌ಎಸ್‌ಡಿ ಅಧ್ಯಕ್ಷ ಡಾ.ಎಂ.ವೆಂಕಟಸ್ವಾಮಿ ಅವರ 71ನೇ ಜನ್ಮದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಒಳ್ಳೆಯ ಆರೋಗ್ಯ ವಿಮೆ ಪಡೆದುಕೊಳ್ಳುವುದು ಜೀವ ವಿಮೆ ಪಡೆದುಕೊಳ್ಳುವುದಕ್ಕಿಂತ ಹೆಚ್ಚು ಮುಖ್ಯವಾಗುತ್ತದೆ. ವ್ಯಕ್ತಿಯು ಅನಾರೋಗ್ಯಕ್ಕೆ ತುತ್ತಾಗಿ ಅಥವಾ ಅಪಘಾತಕ್ಕೆ ಈಡಾಗಿ ಆಸ್ಪತ್ರೆ ಸೇರುವ ಸಾಧ್ಯತೆಗಳು ಸಾವಿನ ಸಾಧ್ಯತೆಗಿಂತ ಹೆಚ್ಚಿರುತ್ತವೆ.

ಮೋನಿಕಾ ಹಾಲನ್, ಲೇಖಕಿ

ದುಡ್ಡಿನಂಥಾ ಮಾತು

ರೆಪೊ ಇಳಿಕೆ ಸಾಲಗಾರರಿಗೆ ಸಿಹಿ, ಹೂಡಿಕೆದಾರರಿಗೆ?

• ವಿಜಯ್ ಜೋಷಿ

ರೆಪೊ ದರವನ್ನು ಇಳಿಸುವ ಮೂಲಕ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸಾಲಗಾರರಿಗೆ ಸಿಹಿ ಸುದ್ದಿಯನ್ನೇನೋ ನೀಡಿದೆ. ನಗದು ಮೀಸಲು ಅನುಪಾತವನ್ನು (ಸಿಆರ್‌ಆರ್) ತಗ್ಗಿಸುವ ಮೂಲಕ ಸಾಲ ನೀಡಲು ಬ್ಯಾಂಕ್‌ಗಳ ಬಳಿ ಹೆಚ್ಚು ಹಣವಿರುವಂತೆಯೂ ನೋಡಿಕೊಂಡಿದೆ. ಆದರೆ, ರೆಪೊ ದರ ಇಳಿಕೆಯು ಠೇವಣಿದಾರರಿಗೆ ಒಳ್ಳೆಯ ಸುದ್ದಿಯಂತೂ ಅಲ್ಲವೇ ಅಲ್ಲ.

ರೆಪೊ ದರ ಇಳಿಕೆಯಾಗುತ್ತಿದ್ದಂತೆಯೇ ದೇಶದ ಕೆಲವು ಮುಂಚೂಣಿ ಬ್ಯಾಂಕ್‌ಗಳು ಠೇವಣಿಗಳ ಮೇಲಿನ ಬಡ್ಡಿ ದರವನ್ನು ಕಡಿಮೆ ಮಾಡುವ ಘೋಷಣೆ ಹೊರಡಿಸಿವೆ. ಠೇವಣಿಗಳ ಮೇಲಿನ ಬಡ್ಡಿ ದರ ಇಳಿಕೆಯಷ್ಟೇ ಅಲ್ಲದೆ, ಪಿಪಿಎಫ್, ಎನ್‌ಎಸ್‌ಸಿಯಂತಹ ಕೆಲವು ಜನಪ್ರಿಯ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರ ಕೂಡ ಕಡಿಮೆ ಆಗುವ ಸಾಧ್ಯತೆ ಹೆಚ್ಚಾಗಿದೆ. ಹಾಗಾದರೆ ಇಂತಹ ಸಂದರ್ಭದಲ್ಲಿ ಸಣ್ಣ ಹೂಡಿಕೆದಾರರಿಗೆ ಹೆಚ್ಚಿನ ಲಾಭ ಪಡೆಯಲು ಇರುವ ಆಯ್ಕೆಗಳೇನು?

ರೆಪೊ ದರವನ್ನು ಆರ್‌ಬಿಐ ಇಳಿಸಿದೆ. ಸಾಲಗಾರರು ಇಎಂಐ ಹೊರೆ ತಗ್ಗಿದ ಖುಷಿಯಲ್ಲಿದ್ದಾರೆ. ಆದರೆ ಠೇವಣಿದಾರರ ಕಥೆ? ಬದಲಾದ ಸಂದರ್ಭದಲ್ಲಿ ಅವರು ಸಿಹಿಯನ್ನು ಎಲ್ಲಿ ಅರಸಬಹುದು?



ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ ದರ ಇಳಿಕೆ ಆಗುತ್ತದೆ ಎಂಬುದರಲ್ಲಿ ಯಾವ ಅನುಮಾನವೂ ಉಳಿದಿಲ್ಲ. ಆದರೆ ಸಣ್ಣ ಹೂಡಿಕೆದಾರರು ತಮ್ಮ ಹೂಡಿಕೆಗಳ ಮೇಲಿನ ಲಾಭವು ಗಣನೀಯವಾಗಿ ತಗ್ಗಬಾರದು ಎಂದಾದರೆ ಒಂದಿಷ್ಟು ಮರುಹೊಂದಾಣಿಕೆಗಳನ್ನು ಮಾಡಿಕೊಳ್ಳುವುದು ಸೂಕ್ತ ಎಂದು ವೈಯಕ್ತಿಕ ಹಣಕಾಸು ತಜ್ಞರು ಹೇಳಿದ್ದಾರೆ. ಹೆಚ್ಚಿನ ಬಡ್ಡಿ ಸಿಗುತ್ತದೆ ಎಂಬ ಒಂದೇ ಕಾರಣಕ್ಕೆ ಸುಭದ್ರವಲ್ಲದ ಹಣಕಾಸು ಸಂಸ್ಥೆಗಳ ಕಡೆ ಮುಖ ಮಾಡಬಾರದು, ಬಹಳ ಎಚ್ಚರಿಕೆಯಿಂದ ಪೋರ್ಟ್‌ಫೋಲಿಯೊ ಮರುಹೊಂದಾಣಿಕೆ ಮಾಡಿಕೊಳ್ಳಬೇಕು ಎಂದು ಅವರು ಕಿವಿಮಾತು ಹೇಳಿದ್ದಾರೆ.

ರೆಪೊ ದರ ಇಳಿಕೆಯ ಪರಿಣಾಮವನ್ನು ಬ್ಯಾಂಕ್‌ಗಳು ಗ್ರಾಹಕರಿಗೆ ವರ್ಗಾಯಿಸಲು ಆರಂಭಿಸಿವೆ. 'ಆದರೆ ಕೆಲವು ಬ್ಯಾಂಕ್‌ಗಳು ಠೇವಣಿಗಳ ಮೇಲಿನ ಬಡ್ಡಿ ದರವನ್ನು ಇನ್ನೂ ತಗ್ಗಿಸಿಲ್ಲ. ಅವು ಆ ಕೆಲಸ ಮಾಡುವ ಮೊದಲು ಈಗಿರುವ ಹೆಚ್ಚಿನ ಬಡ್ಡಿ ದರದ ಪ್ರಯೋಜನ ಪಡೆದುಕೊಳ್ಳಬೇಕು, ದೀರ್ಘ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ಹಣ ತೊಡಗಿಸಬೇಕು. ಆಗ ಈಗಿರುವ ಹೆಚ್ಚಿನ ಬಡ್ಡಿ ದರದ ಪ್ರಯೋಜನ ದಕ್ಕುತ್ತದೆ' ಎಂದು ಬ್ಯಾಂಕಿಂಗ್ ತಜ್ಞ ವಸಂತ ಜಿ. ಹೆಗಡೆ ಸಲಹೆ ನೀಡಿದರು.

ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವನ್ನು ಕೇಂದ್ರ ಸರ್ಕಾರವು ಮೂರು ತಿಂಗಳಿಗೊಮ್ಮೆ ಪರಿಷ್ಕರಿಸುತ್ತದೆ. ಜೂನ್ 30ಕ್ಕೆ ಪರಿಷ್ಕರಣೆ ನಡೆಯಲಿದೆ. ರೆಪೊ ದರ ಇಳಿಕೆ ಹಾಗೂ ಹಣದುಬ್ಬರ ತಗ್ಗಿರುವುದರ ಪರಿಣಾಮವಾಗಿ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರವು ಕಡಿಮೆ ಆಗುವ ಸಾಧ್ಯತೆ ಇದೆ.

'ಸಣ್ಣ ಹೂಡಿಕೆದಾರರು ಆರ್‌ಬಿಐನ ಫ್ಲೋಟಿಂಗ್ ರೇಟ್ ಸೇವಿಂಗ್ಸ್ ಬಾಂಡ್‌ಗಳಲ್ಲಿಯೂ ಹಣ ತೊಡಗಿಸಬಹುದು. ಈ ಬಾಂಡ್‌ಗಳಲ್ಲಿ ತೊಡಗಿಸುವ ಹಣವನ್ನು ಏಳು ವರ್ಷ ಹಿಂದಕ್ಕೆ ಪಡೆಯಲಾಗದು. ಇಲ್ಲಿ ಹೂಡಿಕೆ ಮಾಡುವ ಹಣಕ್ಕೆ ಎನ್‌ಎಸ್‌ಸಿಗೆ ನೀಡುವ ಬಡ್ಡಿ ದರದ ಮೇಲೆ ಹೆಚ್ಚುವರಿಯಾಗಿ ಶೇ 0.35ರಷ್ಟು ಬಡ್ಡಿ ಸಿಗುತ್ತದೆ. ಇದಕ್ಕೆ ಸರ್ಕಾರದ ಖಾತರಿ ಇರುವ ಕಾರಣಕ್ಕೆ ತೊಡಗಿಸಿದ ಹಣ ಸಂಪೂರ್ಣವಾಗಿ ಸುರಕ್ಷಿತವಾಗಿರುತ್ತದೆ' ಎಂದು ಅವರು ತಿಳಿಸಿದರು. ಇದುವರೆಗೆ 'ಹೊಂದಾಣಿಕೆ'ಯ ಹಣಕಾಸು ನೀತಿ ಅನುಸರಿಸುತ್ತಿದ್ದ ಆರ್‌ಬಿಐ ಈಗ ಅದನ್ನು ಬದಲಾಯಿಸಿದೆ. ಹಣಕಾಸು ನೀತಿಯು 'ತಟಸ್ಥ'ವಾಗಿ ಇರಲಿದೆ ಎಂದು ಹೇಳಿದೆ. ಅಂದರೆ, ರೆಪೊ ದರವು ಮುಂದಿನ ದಿನಗಳಲ್ಲಿ ಇನ್ನಷ್ಟು ಇಳಿಕೆ ಆಗುವ ಸಾಧ್ಯತೆ ಇಲ್ಲ.

ಕೆಲವು ಸಣ್ಣ ಬ್ಯಾಂಕ್‌ಗಳು ಹೆಚ್ಚಿನ ಠೇವಣಿ ಸಂಗ್ರಹಿಸುವ ಗುರಿಯೊಂದಿಗೆ ದೊಡ್ಡ ಬ್ಯಾಂಕ್‌ಗಳು ನೀಡುವುದಕ್ಕಿಂತ ತುಸು ಹೆಚ್ಚಿನ ಬಡ್ಡಿಯನ್ನು ಕೊಡುತ್ತವೆ. 'ಅಂತಹ ಬ್ಯಾಂಕ್‌ಗಳಲ್ಲಿ ₹5 ಲಕ್ಷಕ್ಕೆ ಮೀರದಂತೆ ಹೆಚ್ಚಿನ ಬಡ್ಡಿಗೆ ನಿಶ್ಚಿತ ಠೇವಣಿಯಲ್ಲಿ ಹಣ ತೊಡಗಿಸಬಹುದು. ದುರದೃಷ್ಟವಶಾತ್ ಬ್ಯಾಂಕ್‌ಗೆ ತೊಂದರೆ ಆದರೂ ₹5 ಲಕ್ಷದವರೆಗಿನ ಠೇವಣಿಗಳಿಗೆ ವಿಮೆಯ ರಕ್ಷೆ ಇರುತ್ತದೆ' ಎಂದು ಚಾರ್ಟರ್ಡ್ ಅಕೌಂಟೆಂಟ್ ಕುಮಾರ್ ಪ್ರಸಾದ್ ಸಲಹೆ ನೀಡಿದರು.

ರೆಪೊ ದರ ಇಳಿಕೆಯು ಆರ್ಥಿಕ ಚಟುವಟಿಕೆಗಳಿಗೆ ಇಂಬು ಕೊಡುವ ನಿರೀಕ್ಷೆ ಇದೆ. ಸಾಮಾನ್ಯವಾಗಿ ರೆಪೊ ದರ ಇಳಿಕೆ ಕಂಡಾಗ, ಈಕ್ವಿಟಿ ಮಾರುಕಟ್ಟೆಯು ಜಿಗಿಯುತ್ತದೆ. ಐದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಹಣ ತೊಡಗಿಸುವ ಶಕ್ತಿ ಇರುವವರು ಮ್ಯೂಚುವಲ್ ಫಂಡ್‌ಗಳ ಮೂಲಕ ಷೇರುಗಳಲ್ಲಿ ಹಣ ತೊಡಗಿಸಬಹುದು. ಡೆಟ್ ಫಂಡ್ ಅಥವಾ ಲಿಕ್ವಿಡ್ ಫಂಡ್‌ಗಳಲ್ಲಿಯೂ ಹೂಡಿಕೆ ಮಾಡಬಹುದು ಎಂದು ಪ್ರಸಾದ್ ಹೇಳಿದರು.

ಜಾಗತಿಕ ಮಟ್ಟದಲ್ಲಿ ವ್ಯಾಪಾರ, ವಾಣಿಜ್ಯ ಚಟುವಟಿಕೆಗಳ ಮೇಲೆ ಒಂದಿಷ್ಟು ಅಸ್ಥಿರತೆಯ ಕಾರ್ಮೋಡಗಳು ಇರುವ ಈಗಿನ ಸಂದರ್ಭದಲ್ಲಿ ಮ್ಯೂಚುವಲ್ ಫಂಡ್‌ಗಳ ಮೂಲಕ ಒಂದೇ ಬಾರಿಗೆ ಹಣ ತೊಡಗಿಸುವುದಕ್ಕಿಂತಲೂ, ವ್ಯವಸ್ಥಿತವಾಗಿ ಅವುಗಳಲ್ಲಿ ಹಣ ಹೂಡಿಕೆ ಮಾಡುವುದು ಸೂಕ್ತ ಎಂಬುದು ತಜ್ಞರ ಅನಿಸಿಕೆ. 'ಈಗಿನ ಸಂದರ್ಭಕ್ಕೆ ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್‌ಗಳು ಒಳ್ಳೆಯವು. ಅವು ಹಣವನ್ನು ಷೇರುಗಳಲ್ಲಿ ಹಾಗೂ ಸಾಲಪತ್ರಗಳಲ್ಲಿ ಹಂಚಿ ಮಾಡಿ, ಸರಾಸರಿ ಲಾಭವು ಚೆನ್ನಾಗಿ ಇರುವಂತೆ ಮಾಡಲು ಪ್ರಯತ್ನಿಸುತ್ತವೆ. ಹೂಡಿಕೆದಾರರು ಫ್ಲೆಕ್ಸಿ ಕ್ಯಾಪ್ ಫಂಡ್‌ಗಳಲ್ಲಿಯೂ ಹಣ ತೊಡಗಿಸಬಹುದು' ಎಂದು ಪ್ರಸಾದ್ ಸಲಹೆ ನೀಡಿದರು.

ಸಾಲದ ಮೇಲಿನ ಬಡ್ಡಿ ಕಡಿಮೆ ಆಗುವುದರಿಂದ ಸಣ್ಣ ಹಾಗೂ ಮಧ್ಯಮ ಪ್ರಮಾಣದ ಕಂಪನಿಗಳಿಗೆ ಸಾಲದ ಹೊರೆಯು ತುಸು ತಗ್ಗಬಹುದು, ಅವುಗಳ ಲಾಭ ಗಳಿಕೆ ಹೆಚ್ಚಾಗಬಹುದು ಎಂಬ ನಿರೀಕ್ಷೆಯು ಕೆಲವರಲ್ಲಿ ಇದೆ. ಹೀಗಿರುವಾಗ, ಸ್ಮಾಲ್ ಕ್ಯಾಪ್ ಮತ್ತು ಮಿಡ್ ಕ್ಯಾಪ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದಕ್ಕೆ ಇದು ಸರಿಯಾದ ಸಮಯವೇ ಎಂಬ ಪ್ರಶ್ನೆಯನ್ನು ವೈಯಕ್ತಿಕ ಹಣಕಾಸು ತಜ್ಞ ಪ್ರಮೋದ ಶ್ರೀಕಾಂತ ದೈತೋಟ ಅವರ ಮುಂದೆ ಇರಿಸಿದಾಗ, 'ಸಾಲದ ಮೂಲಕವೇ ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳುವ ಕಂಪನಿಗಳು ಹೆಚ್ಚು ಬೆಳವಣಿಗೆ ಕಾಣಬಹುದು. ಆದರೆ ಸಾಲವನ್ನು ನೆಚ್ಚಿಕೊಳ್ಳದ ಕಂಪನಿಗಳು ರೆಪೊ ದರದ ಇಳಿಕೆಯ ಕಾರಣದಿಂದಾಗಿ ದೊಡ್ಡ ಪ್ರಯೋಜನ ಪಡೆಯುವ ಸಾಧ್ಯತೆ ಕಡಿಮೆ' ಎಂದು ಉತ್ತರಿಸಿದರು.

ರೆಪೊ ದರದ ಇಳಿಕೆ ಹಾಗೂ ಸಿಆರ್‌ಆರ್ ಕಡಿತವನ್ನು ಒಟ್ಟಾಗಿ ಗ್ರಹಿಸಿದಾಗ, ಹಣಕಾಸು ಸೇವಾ ವಲಯಗಳಿಗೆ ಸಂಬಂಧಿಸಿದ ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ತೊಡಗಿಸುವುದು ಸೂಕ್ತವಾಗಬಹುದು ಎಂದು ದೈತೋಟ ಅಭಿಪ್ರಾಯ ವ್ಯಕ್ತಪಡಿಸಿದರು. ಇವುಗಳ ಜೊತೆಯಲ್ಲೇ, ಹೈಬ್ರಿಡ್ ಮ್ಯೂಚುವಲ್ ಫಂಡ್‌ಗಳ ಕಡೆ ಹೂಡಿಕೆದಾರರು ಗಮನಹರಿಸಬಹುದು. ಅವು ಒಂದಿಷ್ಟು ಹಣವನ್ನು ಬಾಂಡ್‌ಗಳಲ್ಲಿ ತೊಡಗಿಸುತ್ತವೆ, ರೆಪೊ ಇಳಿಕೆಯಾದಾಗ ಇವುಗಳಲ್ಲಿ ತುಸು ಹೆಚ್ಚು ಲಾಭ ಸಿಗಬಹುದು ಎಂದರು. ಈ ಸಲಹೆಗಳು ತುಸು ರಿಸ್ಕ್ ತೆಗೆದುಕೊಂಡು, ಹೆಚ್ಚಿನ ಲಾಭವನ್ನು ನಿರೀಕ್ಷಿಸುವ ವ್ಯಕ್ತಿಗಳಿಗೆ ಎಂದು ಸ್ಪಷ್ಟಪಡಿಸಿದರು.



ತಜ್ಞರ ಸಲಹೆಗಳು

- ಚಿನ್ನವು ಈಚಿನ ದಿನಗಳಲ್ಲಿ ಬಹಳ ಒಳ್ಳೆಯ ಪ್ರಮಾಣದಲ್ಲಿ ಲಾಭ ತಂದುಕೊಟ್ಟಿದೆ. ಹೀಗಾಗಿ ತಕ್ಷಣಕ್ಕೆ ಇನ್ನಷ್ಟು ಹೆಚ್ಚು ಲಾಭ ಸಿಗಲಿಕ್ಕಿಲ್ಲ. ಆದರೆ ದೀರ್ಘಾವಧಿಗೆ ಇದು ಒಳ್ಳೆಯ ಹೂಡಿಕೆ ಎಂಬುದರಲ್ಲಿ ಅನುಮಾನವಿಲ್ಲ
- ಸುರಕ್ಷತೆಯನ್ನು ಖಾತರಿಪಡಿಸಿಕೊಂಡು ಸಣ್ಣ ಬ್ಯಾಂಕ್‌ಗಳಲ್ಲಿ ಹೆಚ್ಚಿನ ಬಡ್ಡಿ ದರಕ್ಕೆ ₹5 ಲಕ್ಷದವರೆಗೆ ಹಣ ತೊಡಗಿಸಬಹುದು
- ಮ್ಯೂಚುವಲ್ ಫಂಡ್‌ಗಳ ಮೂಲಕ ಷೇರುಗಳಲ್ಲಿ ವ್ಯವಸ್ಥಿತವಾಗಿ ಹೂಡಿಕೆ ಹೆಚ್ಚು ಮಾಡಬಹುದು

ಅಂಗೈನಲ್ಲಿ ಎಂ.ಎಫ್ ವಿವರ



ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ತೊಡಗಿಸುವವರು ಸಾಮಾನ್ಯವಾಗಿ ಬೇರೆ ಬೇರೆ ಫಂಡ್‌ಗಳಲ್ಲಿ ಹೂಡಿಕೆ ಮಾಡಿರುತ್ತಾರೆ. ಬೇರೆ ಬೇರೆ ಆಸ್ತಿ ನಿರ್ವಹಣಾ ಕಂಪನಿಗಳು ನಡೆಸುವ ಫಂಡ್‌ಗಳಲ್ಲಿ ಅವರು ಹಣ ತೊಡಗಿಸುವುದಿದೆ.

ಪ್ರತಿ ಆಸ್ತಿ ನಿರ್ವಹಣಾ ಕಂಪನಿಯೂ ಹೂಡಿಕೆದಾರರಿಗೆ ಅವರು ಹೂಡಿಕೆ ಮಾಡಿದ ಮೊತ್ತ ಎಷ್ಟು, ಆ ಹೂಡಿಕೆ ಎಷ್ಟಾಗಿದೆ ಎಂಬ ಬಗ್ಗೆ ಕಾಲಕಾಲಕ್ಕೆ ಮಾಹಿತಿ ಒದಗಿಸುತ್ತ ಇರುತ್ತದೆ. ಹಾಗಾದರೆ, ಹೂಡಿಕೆದಾರರು ಬೇರೆ ಬೇರೆ ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಿರುವ ಹಣದ ಒಟ್ಟು ಮೊತ್ತ ಎಷ್ಟು?

ಬೇರೆ ಬೇರೆ ಆಸ್ತಿ ನಿರ್ವಹಣಾ ಕಂಪನಿಗಳಿಂದ ಬರುವ ಮಾಹಿತಿಯನ್ನು ಹೂಡಿಕೆದಾರರು ಒಗ್ಗೂಡಿಸಿ, ಹೂಡಿಕೆಗಳ ಒಟ್ಟು ಮೊತ್ತವನ್ನು ತಾವೇ ಲೆಕ್ಕ ಹಾಕಿದರೆ ಈ ಪ್ರಶ್ನೆಗೆ ಉತ್ತರ ಸಿಗುತ್ತದೆ. ಆದರೆ, ಇಷ್ಟೆಲ್ಲ ಕೆಲಸ ಮಾಡುವ ಬದಲು ಉಚಿತವಾಗಿ ಸಿಗುವ ಕೆಲವು ಸೇವೆಗಳನ್ನು ಬಳಸಿಕೊಳ್ಳಬಹುದಲ್ಲವೇ? ಪೇಟಿಎಂನಂತಹ ಆ್ಯಪ್‌ಗಳು, ವಿವಿಧ ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಿರುವ ಒಟ್ಟು ಮೊತ್ತ ಎಷ್ಟು ಎಂಬುದನ್ನು ಹೂಡಿಕೆದಾರರಿಗೆ ತಾವೇ ಲೆಕ್ಕ ಹಾಕಿ ತೋರಿಸುತ್ತವೆ.

'ಪೇಟಿಎಂ'ನಲ್ಲಿ 'ಟ್ರ್ಯಾಕ್ ಮ್ಯೂಚುವಲ್ ಫಂಡ್ ಪೋರ್ಟ್‌ಫೋಲಿಯೊ' ಎಂಬ ಆಯ್ಕೆಯೊಂದು ಇದೆ. ಅದರ ಮೇಲೆ ಬೆರಳು ಇರಿಸಿದರೆ, ಹೂಡಿಕೆದಾರರಿಗೆ ತಮ್ಮ ಎಲ್ಲ ಮ್ಯೂಚುವಲ್ ಫಂಡ್ ಹೂಡಿಕೆಗಳ ಒಟ್ಟು ಮೊತ್ತ ಎಷ್ಟಾಗಿದೆ ಎಂಬುದನ್ನು ಕಂಡುಕೊಳ್ಳುವ ಅವಕಾಶ ಸಿಗುತ್ತದೆ.

ಇಷ್ಟೇ ಅಲ್ಲ, ತಾವು ಬೇರೆ ಬೇರೆ ಫಂಡ್‌ಗಳ ಮೂಲಕ ಮಾಡಿರುವ ಹೂಡಿಕೆಗಳನ್ನು ಬಳಸಿ ಯಾವೆಲ್ಲ ಕಂಪನಿಗಳ ಷೇರುಗಳನ್ನು ಖರೀದಿಸಲಾಗಿದೆ ಎಂಬ ವಿವರವನ್ನೂ ಇಲ್ಲಿಯೇ ಪಡೆದುಕೊಳ್ಳಬಹುದು. ಒಟ್ಟು ಹೂಡಿಕೆಯಲ್ಲಿ ಶೇಕಡಾವಾರು ಎಷ್ಟು ಪ್ರಮಾಣವು ಯಾವ ಕಂಪನಿಯ ಷೇರುಗಳಲ್ಲಿ ವಿನಿಯೋಗ ಆಗಿದೆ ಎಂಬುದು ಕೂಡ ಗೊತ್ತಾಗುತ್ತದೆ.

ಅಲ್ಲದೆ, ಸ್ಮಾಲ್ ಕ್ಯಾಪ್, ಮಿಡ್ ಕ್ಯಾಪ್, ಲಾರ್ಜ್ ಕ್ಯಾಪ್ ಫಂಡ್‌ಗಳಲ್ಲಿ ಎಷ್ಟು ಹಣ ತೊಡಗಿಸಿದ್ದಾರೆ ಎಂಬುದರ ವಿವರ ಪಡೆಯಬಹುದು. ಆದರೆ, ಈ ಸೌಲಭ್ಯದ ಮೂಲಕ ಹಣವನ್ನು ಹಿಂಪಡೆಯಲು ಅವಕಾಶ ಇಲ್ಲ. ಹಣ ಹಿಂಪಡೆಯಬೇಕಿದ್ದರೆ ಆಯಾ ಆಸ್ತಿ ನಿರ್ವಹಣಾ ಕಂಪನಿಯ ಆ್ಯಪ್ ಮೂಲಕವೇ ಮನವಿ ಸಲ್ಲಿಸಬೇಕು.

ಪಂಜಾಬ್ ನ್ಯಾಷನಲ್ ಬ್ಯಾಂಕ್

ಬ್ರೋಕರೇಜ್ ಮಾತು

ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ (ಪಿಎನ್‌ಬಿ) ಷೇರು ಮೌಲ್ಯವು ₹125ಕ್ಕೆ ತಲುಪಬಹುದು ಎಂದು ಮೋತಿಲಾಲ್ ಓಸ್ವಾಲ್ ಹೇಳಿದೆ. ಪಿಎನ್‌ಬಿಯ ಸಾಲ ನೀಡಿಕೆ ಪ್ರಮಾಣವು ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಶೇಕಡ 15.3ರಷ್ಟು ಏರಿಕೆ ದಾಖಲಿಸಿದೆ.

ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ, ಕೃಷಿ ವಲಯಕ್ಕೆ ನೀಡಿರುವ ಸಾಲವು ಒಟ್ಟು ಸಾಲ ನೀಡಿಕೆ ಹೆಚ್ಚಲು ಕಾರಣ. ಇದೇ ವೇಳೆ ಬ್ಯಾಂಕ್‌ನಲ್ಲಿ ಠೇವಣಿ ಪ್ರಮಾಣವು ಶೇ 14.4ರಷ್ಟು ಹೆಚ್ಚಾಗಿದೆ.

ಆರ್‌ಬಿಐ ರೆಪೊ ದರವನ್ನು ಶೇಕಡ 0.50ರಷ್ಟು ತಗ್ಗಿಸಿರುವುದು ಪಿಎನ್‌ಬಿಯಂತಹ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಪ್ರಯೋಜನಕಾರಿ ಆಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಬ್ಯಾಂಕ್‌ನ ಸಾಲ ನೀಡಿಕೆ ಪ್ರಮಾಣ ಹಾಗೂ ಠೇವಣಿ ಪ್ರಮಾಣವು ತಲಾ ಶೇ 11–12ರಷ್ಟು ಮತ್ತು ಶೇ 10ರಷ್ಟು ಹೆಚ್ಚಳ ಕಾಣುವ ನಿರೀಕ್ಷೆ ಇದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಪಿಎನ್‌ಬಿ ಷೇರು ಬೆಲೆಯು ₹110.29 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ಮಾಹಿತಿ, ವಿವರಗಳಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗೆ ಇಷ್ಟವಾಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್‌ಎಸ್‌ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

Second Language ENGLISH
Unit-2 PROSE

There's a Girl by the Tracks!

3. Write briefly about the personal details such as qualification and Profession of Roma Talreja and Baleshwar Mishra after discussion with your classmates.

Ans: (……..Contd)

His job hunt has proved fruitless and he had resigned to this fact that he was running out of options. He spent his day with a friend, had lunch and watched a movie.

4) "Take the girl to Airoli," suggested the cop. But Baleshwar disagreed. Why did he do so?

Ans: Baleshwar disagreed with the suggestion of the cop as Airoli was at least 10 km away and Baleshwar knew of a nearby small hospital just 10 minutes away.

5) Some incidents mentioned in paragraph 12 are given in jumbled order below. Arrange them sequentially.

a. The on-duty physician advised Baleshwar to take Roma to a nearby hospital.
b. Baleshwar and Roma Telreja arrived at small hospital.
c. The nurses in the hospital helped Baleshwar to take the young women in.
d. The hospital lacked the facility and personnel to treat Roma.

Ans: b, c, d, a.

6) Was Baleshwar right in asking Roma her name while she lay in critical condidtion? Justify your answer.

Ans: Baleshwar asked Roma her name only when she gained little conscience. He is correct to ask as he needed to inform her family for coming and taking care of her further treatment.

7) "Baleshwar had a good memory." Do you agree with this?

Ans: I agree that Baleshwar had a good memory. This was amply proved when he disagreed with the suggestion the cop's to take Roma to Airoli hospital which was at least 10 km away. But Baleshwar who had come to Mumbai for a job hunt, remembered a small hospital nearby.

8) The doctor at the Divine Multi-Speciality hospital admitted Roma without any formalities. What made him do so?

Ans: Dr Anil Agarwal, Medical Director seeing the extent of injuries, admitted Roma to ICU without any paper work. In accident injuries time is very vital. Hence preference is given for treatment and not for paper work.

9) If Baleshwar had not come forward to help Roma, what would have happened to her?

Ans: It is difficult to imagine what would have happened if Baleshwar had not come forward to help Roma. Her fall from train had resulted in bleeding head injury and she lost consciousness immediately after fall. She could have bled to death.

10) How did the truck driver help Baleshwar?

Ans: Baleshwar carried Roma from tracks to road in his hands and tried to stop innumerable vehicles passing on the road but none stopped to help. That's when a tempo truck stooped and its Gujarati speaking middle aged driver offered help to carry her to hospital.

11) Baleshwar felt that people of Mumbai were afraid. What were they afraid of, according to his opinion?

Ans: According to Baleshwar Mumbai people were afraid of getting trapped in court and police by helping people injured in an accident.

12) The Dalai Lama says, "Love and Compassion are the true religions to me. But to develop this, we do not need to believe in any religion," Does this relate to the lesson "There is a Girl by the Tracks". How? Discuss with your friends.

Ans: Sage Dalai Lama's words are very true in relation to the lesson "There is a Girl by the Tracks". Let us see the key characters in this lesson. Roma, Baleshwar, tempo driver and the doctor. Baleshwar, tempo driver and the doctor help Roma beyond call their normal duty, even when they did not know the religion of Roma, they even did not know her! For, all of them love and compassion was true religion. Hence, Baleshwar impulsively pulls emergency stop chain, rushes to help Roma when co passenger do not respond to his request to help her, jumps out from running train, carry her for a long distance without his slippers over bitumen and tracks, tries to stop innumerable vehicles in vain, finds hospital better than cop. Similarly a tempo driver stops his vehicle and carries Roma to hospital and leaves the place without taking even a thanks. The doctor seeing Roma's injury admits her to ICU without any paper work for a quick treatment. It is love and compassion of these three gentlemen that Roma survives.

Enrich your vocabulary

Task 1: Verbs related to different actions are given below. Pick them and put them in their respective columns. Note that some words may fit into more than one column. Refer to a dictionary if necessary.

Tell, grab, pray, squeeze, glance, hurtle, observe, chat, snatch, plead, peep, utter, had beg, shove, talk, clutch, implore, rush. Stare, hold, appeal, dash, gaze, articulate, run

Words related to

Observing	Moving	Holding	Speaking	Requesting
1	1	1	1	1
2	2	2	2	2
3	3	3	3	3
4	4	4	4	4
5	5	5	5	5
6	6	6	6	6

Ans:- Enrich your vocabulary

Observing	Moving	Holding	Speaking	Requesting
Glance	Rush	Grab	Tell	Pray
Peep	*Dash*	*Snatch*	*Chat*	*Plead*
Stare	*Run*	*Had*	*Talk*	*Beg*
Gaze	*Hurtle*	*Clutch*	*Utter*	*Appeal*
	Shove	*Squeeze*	*Talk*	*Implore*
		Hold	*Articulate*	

(Contd……)

Biology

REPRODUCTION

Human Reproduction

Multiple Choice questions:- *(….Contd)*

5. Gestation period in humans is……
A) 10 weeks B) 25 weeks
C) 7 months D) 9 months

6. Clupein protein occurs in…….
A) Human sperms B) Avian sperms
C) Human ova D) Avian ova

7. Amniotic fluid protects the foetus from……
A) Shock B) Encystment
C) Degeneration D) Disease

8. Human placenta is…………
A) Haemochorial B) Syndesmochorial
C) Yolk sac D) Haemo-endothelial

9. The best definition of the process of gastrulation is that it is a process where the……..
A) Simple layered blastula becomes two layered
B) Archenteron is formed
C) Cells move to occupy their definite position
D) Zygote gets converted into larva.

10. Placenta is the region where
A) Foetus is attached to mother by umbilical cord
B) Foetus is provided with mother's blood
C) Foetus receives nourishment from mother's blood
D) Foetus is covered by membranes

11. If the ectoderm from neutral tissue area is removed from the embryo and transplanted in place of presumptive belly ectoderm, embryo will develop……………..
A) Without a neutral tube
B) With a neural tube
C) With two ectodermal coats
D) With two neural tubes.

12. The mesoderm gives rise to all the following structures in the fully developed animal except….
A) Muscular system B) Nervous system
C) Circulatory system D) Gonads

13. After a sperm has penetrated an ovum, entry of other sperm is prevented by…………
A) Condensation of yolk
B) Formation of pigment coat
C) Development of vitelline membrane
D) Development of fertilization membrane

14. Allantois of the mammalian embryo helps in
A) Respiration B) Excretion
C) Protection D) Nutrition

15. In development, nervous system (brain, spinal cord, nerve cells) is…………..
A) Ectodermal B) Endodermal
C) Ectomesodermal D) Endomesodermal

16. Graafian follicles are found in……..
A) Testis of mammal B) Ovary of frog
C) Ovary of cockroach D) Ovary of mammals

17. Clitoris in mammals is…………
A) Homologous to penis B) Analogous penis
C) Functional penis in female
D) Non-functional

18. Amnion is helpful to embryo in…………..
A) Nutrition B) protection from shock
C) Excretion D) Respiration

19. Human embryo is protected by……………
A) Allantois B) Amniotic cavity
C) Pleural cavity D) Peritoneal cavity

20. Umbilical cord contains……….
A) Umblicus B) Placenta
C) Discus proligerus
D) Allantoic artery and vein.

21. Cryptorchidism is a condition of testes……..
A) Unable to descend in scrotal sacs
B) Unable to produce sperms
C) Having been surgically removed
D) having remained undeveloped

22. Egg is liberated from ovary in……….
A) Secondary oocyte stage
B) Primary oocyte stage C) Oogonial stage
D) Mature ovum stage

23. Cells become variable in morphology and function in different regions of the embryo. The process is:…………….
A) Differentiation B) metamorphosis
C) Organisation D) Rearrangement

24. Site of fertilization in a mammal is…………
A) Ovary B) Uterus
C) Vagina D) Fallopian tube

25. Allantois is embryonic membrane found in…
A) Mammals B) Birds
C) Reptiles
D) Birds, mammals and reptiles

26. Gonads develop from embryonic……….
A) Ectoderm B) Endoderm
C) Mesoderm
D) Both mesoderm and endoderm.

27. How many sperms are formed from a secondary spermatocyte?
A) 4 B) 8 C) 2 D) 1

28. Human eggs are…………..
A) Alecithal B) Microlecithal
C) Mesolecithal D) Macrolecithal

29. Location and secretion of Leyding cells are …
A) Liver-cholesterol B) Ovary-estrogen
C) Testis-testesterone D) Pancreas-glucagon

30. Middle piece of mammalian sperm possesses...
A) Mitochondria and centriole
B) Mitochondria only C) Centriole only
D) Nucleus and mitochondria

31. Freshly released human egg has……..
A) One Y –chromosome B) One X- chromosome
C) Two X- chromosome
D) One X- chromosome and one Y – chromosome

Ans:-

1. (A)	2. (C)	3. (B)	4. (C)	5. (D)
6. (A)	7. (A)	8. (A)	9. (C)	10.(C)
11.(C)	12.(B)	13.(D)	14.(B)	15.(A)
16.(D)	17.(A)	18.(B)	19.(B)	20.(D)
21.(A)	22.(A)	23.(A)	24.(D)	25.(D)
26.(C)	27.(A)	28.(A)	29.(C)	30.(A)
31.(B)				

(Contd…..)

ಪಿಎಂ–ಕುಸುಮ್ 'ಸಿ' ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

'ಬಿಜೆಪಿ ಮಾಡದ್ದನ್ನು ನಾವು ಮಾಡಿದ್ದೇವೆ'

ಪ್ರಜಾವಾಣಿ ವಾರ್ತೆ



ಗೌರಿಬಿದನೂರು ತಾಲ್ಲೂಕಿನ ಹನುಮೇನಹಳ್ಳಿಯಲ್ಲಿ ಪಿಎಂ–ಕುಸುಮ್ 'ಸಿ' ಯೋಜನೆಯಡಿ ಸ್ಥಾಪಿಸಿರುವ ಸೋಲಾರ್ ಘಟಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಸಚಿವರಾದ ಕೆ.ಜೆ.ಜಾರ್ಜ್, ಡಾ.ಎಂ.ಸಿ. ಸುಧಾಕರ್, ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ, ಕ್ರೆಡಲ್ ಅಧ್ಯಕ್ಷ ಡಿ.ಟಿ.ರಾಜೇಗೌಡ ಚಿತ್ರದಲ್ಲಿ ಇದ್ದಾರೆ

ಚಿಕ್ಕಬಳ್ಳಾಪುರ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೌರಿಬಿದನೂರು ತಾಲ್ಲೂಕಿನ ತೊಂಡೇಬಾವಿ ಹೋಬಳಿ ಹನುಮೇನಹಳ್ಳಿಯಲ್ಲಿ ಬುಧವಾರ ಪಿಎಂ–ಕುಸುಮ್ 'ಸಿ' ಯೋಜನೆಯಡಿ ಸ್ಥಾಪಿಸಿರುವ ಸೋಲಾರ್ ಘಟಕ ಲೋಕಾರ್ಪಣೆಗೊಳಿಸಿದರು.

ನಂತರ ಗೌರಿಬಿದನೂರಿನಲ್ಲಿ ನಡೆದ ರಾಜ್ಯ ಮಟ್ಟದ ಈ ಕಾರ್ಯಕ್ರಮದಲ್ಲಿ ಗದಗ, ಚಾಮರಾಜನಗರ, ತುಮಕೂರು ಜಿಲ್ಲೆಯ ಸೋಲಾರ್ ಘಟಕಗಳನ್ನೂ ಆನ್‌ಲೈನ್ ಮೂಲಕ ಉದ್ಘಾಟಿಸಿದರು. ಈ ಮೂರು ಜಿಲ್ಲೆಗಳ ರೈತರು ಮತ್ತು ಜನಪ್ರತಿನಿಧಿಗಳ ಜತೆ ಮುಖ್ಯಮಂತ್ರಿ ಸಂವಾದ ನಡೆಸಿದರು.

ಸಂವಾದದ ವೇಳೆ ಮುಖ್ಯಮಂತ್ರಿ, 'ಕುಸುಮ್ 'ಸಿ' ಯೋಜನೆಯಲ್ಲಿ ಕೇಂದ್ರದ ಪಾಲು ಶೇ. 30, ರಾಜ್ಯದ ಪಾಲು ಶೇ. 50 ಮತ್ತು ಹೂಡಿಕೆದಾರರ ಪಾಲು ಶೇ. 20. ಆದರೂ, ಕೇಂದ್ರ ಸರ್ಕಾರ ಇದು ನನ್ನ ಯೋಜನೆ ಎನ್ನುತ್ತಿದೆ. 2021ರಲ್ಲಿ ಈ ಯೋಜನೆ ರಾಜ್ಯದಲ್ಲಿ ಜಾರಿ ಆಗಬೇಕಾಗಿತ್ತು. ಆದರೆ, ಅಂದಿನ ಬಿಜೆಪಿ ಸರ್ಕಾರವೇ ಜಾರಿಗೊಳಿಸಲಿಲ್ಲ. ಬಿಜೆಪಿ ರೈತರ ಪರವಾಗಿ ಇದ್ದಿದ್ದರೆ ಯೋಜನೆ ಅನುಷ್ಠಾನಗೊಳಿಸುತ್ತಿತ್ತು. ಒಂದು ಯುನಿಟ್ ವಿದ್ಯುತ್ ಸಹ ಅವರು ಉತ್ಪಾದಿಸಲಿಲ್ಲ. ನಾವು ಅಧಿಕಾರಕ್ಕೆ ಬಂದ ಮೇಲೆ ಈ ಯೋಜನೆ ಅನುಷ್ಠಾನಗೊಳಿಸಿದ್ದೇವೆ. ರೈತರ ಪರ ಯಾರು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು' ಎಂದು ಒತ್ತಿ ಹೇಳಿದರು.

ಸಂವಾದದಲ್ಲಿ ಪಾಲ್ಗೊಂಡಿದ್ದ ಗದಗ ಜಿಲ್ಲೆ ವಿಧಾನ ಪರಿಷತ್ ಬಿಜೆಪಿ ಸದಸ್ಯ ಎಸ್.ವಿ.ಸಂಕನೂರ, 'ನಮ್ಮ ಸರ್ಕಾರವೂ ಯೋಜನೆ ಅನುಷ್ಠಾನಕ್ಕೆ ಪ್ರಯತ್ನಿಸಿತ್ತು' ಎಂದರು. ಆಗ ಸಿದ್ದರಾಮಯ್ಯ, 'ನಾವು ಏನೂ ಮಾಡಿಲ್ಲ ಎನ್ನಬೇಡಿ ಸರ್. ನಮ್ಮ ಕೊಡುಗೆಯನ್ನೂ ಯೋಜನೆ ಅನುಷ್ಠಾನವನ್ನೂ ನೋಡಿ' ಎಂದರು.

ಸಂವಾದದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ, ಸೋಲಾರ್ ಘಟಕ ಅಳವಡಿಸಲು ಖಾಸಗಿಯವರಿಂದ ಗುತ್ತಿಗೆ ಪಡೆಯುತ್ತಿರುವ ಜಮೀನಿಗೆ ವಾರ್ಷಿಕ ₹25 ಸಾವಿರ ಬಾಡಿಗೆ ನೀಡಲಾಗುತ್ತಿದೆ. ಇದನ್ನು ಹೆಚ್ಚಿಸಬೇಕು ಎಂದು ಕೋರಿದರು. ಆಗ ಮುಖ್ಯಮಂತ್ರಿ ಈ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನಿಸೋಣ ಎಂದರು. ತಿಪಟೂರು ಶಾಸಕ ಕೆ.ಷಡಕ್ಷರಿ ಸಹ ಸಂವಾದದಲ್ಲಿ ಭಾಗಿಯಾಗಿದ್ದರು.

60 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ: 'ನಮ್ಮ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ 4 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ ಹೆಚ್ಚಿಸಿದೆ. ಈಗ ರಾಜ್ಯದಲ್ಲಿ 30 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಮುಂದಿನ ಮೂರು ವರ್ಷದಲ್ಲಿ 60 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದಿಸುತ್ತೇವೆ' ಎಂದು ಮುಖ್ಯಮಂತ್ರಿ ವಿಶ್ವಾಸ ವ್ಯಕ್ತಪಡಿಸಿದರು.

ಕುಸುಮ್ 'ಸಿ' ಯೋಜನೆ ಮೂಲಕ 2,400 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗುವುದು. ಇದರಿಂದ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಬೆಳಗಿನ ಸಮಯದಲ್ಲಿಯೇ 7 ತಾಸು ವಿದ್ಯುತ್ ನೀಡಲಾಗುವುದು ಎಂದರು.

'ನಮ್ಮ ಸರ್ಕಾರ ಪ್ರತಿವರ್ಷ ಇಂಧನ ಇಲಾಖೆ ಮೂಲಕ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ₹19,000 ಕೋಟಿ ಸಹಾಯಧನ ನೀಡುತ್ತಿದೆ' ಎಂದು ತಿಳಿಸಿದರು.

'ಕೋರ್ಟ್‌ಗೆ ಶರಣಾಗುವೆ'

ಪ್ರಜಾವಾಣಿ ವಾರ್ತೆ



ವಿನಯ ಕುಲಕರ್ಣಿ

ಧಾರವಾಡ: 'ಕೋರ್ಟ್ ಆದೇಶಕ್ಕೆ ತಲೆಬಾಗುವೆ. ಬೆಂಗಳೂರಿನಲ್ಲಿ ಜನಪ್ರತಿನಿಧಿಗಳ ಕೋರ್ಟ್‌ನಲ್ಲಿ ಶುಕ್ರವಾರ (ಜೂನ್ 13) ಶರಣಾಗುವೆ. ಸತ್ಯಕ್ಕೆ ಜಯ ಸಿಗುವ ನಂಬಿಕೆಯಿದೆ' ಎಂದು ಶಾಸಕ ವಿನಯ ಕುಲಕರ್ಣಿ ತಿಳಿಸಿದರು.

ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರಿನಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನನ್ನ ವಿರುದ್ಧ ಹುನ್ನಾರ ನಡೆದಿದೆ. ನಾನು ಬೆಳೆಯದಂತೆ ತುಳಿಯಲಾಗುತ್ತಿದೆ. ಯಾರ ಪಿತೂರಿ ಎಂಬುದು ಎಲ್ಲರಿಗೂ ಗೊತ್ತಿದೆ. ನಾನೀಗ ಅಸಹಾಯಕ ಸ್ಥಿತಿಯಲ್ಲಿದ್ದೇನೆ. ಬಸವಣ್ಣನ ಕಾಲದಲ್ಲೂ ಕೊಂಡಿ ಮಂಚಣ್ಣಗಳು ಇದ್ದರು. ಇವತ್ತೂ ಇದ್ದಾರೆ' ಎಂದರು.

'ನಾನೀಗ ಕಷ್ಟದಲ್ಲಿ ಇದ್ದೇನೆ. ಮತ್ತಷ್ಟು ಕಷ್ಟ ಹೇರುವುದು ಸರಿಯಲ್ಲ. ನಾನು ಕ್ಷೇತ್ರದಲ್ಲಿ ಇಲ್ಲದಿರುವಾಗ ಕ್ಷೇತ್ರದ ಕೆಲಸಗಳನ್ನು ಪತ್ನಿ ನೋಡಿಕೊಳ್ಳುತ್ತಾರೆ' ಎಂದರು.

ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶ್ ಗೌಡ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ವಿನಯ ಕುಲಕರ್ಣಿ ಅವರ ಜಾಮೀನನ್ನು ಸುಪ್ರೀಂ ಕೋರ್ಟ್ ಜೂನ್ 6ರಂದು ರದ್ದುಪಡಿಸಿತ್ತು. ವಾರದೊಳಗೆ ವಿಚಾರಣಾ ಕೋರ್ಟ್‌ನಲ್ಲಿ ಶರಣಾಗುವಂತೆ ಆದೇಶಿಸಿತ್ತು.

ಕೋವಿಡ್: ದುಬಾರಿ ಶುಲ್ಕ ವಿಧಿಸಿದರೆ ಕ್ರಮ– ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪರೀಕ್ಷೆ ಹೆಸರಿನಲ್ಲಿ ಖಾಸಗಿ ಆಸ್ಪತ್ರೆಗಳು ದುಬಾರಿ ಶುಲ್ಕ ವಿಧಿಸುತ್ತಿರುವ ದೂರುಗಳು ಬಂದರೆ ಪರಿಶೀಲನೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ಕೋವಿಡ್ ನಿಭಾಯಿಸುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಅವರು ಕೋವಿಡ್ ಪರಿಸ್ಥಿತಿ ಕುರಿತು ಬುಧವಾರ ನಡೆಸಿದ ಸಭೆಯಲ್ಲಿ ನಿರ್ದೇಶನ ನೀಡಿದರು. ಕೋವಿಡ್ ನಿಭಾಯಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರ ನೀಡಿದ ಅಧಿಕಾರಿಗಳು, ರಾಜ್ಯದಲ್ಲಿ ಮೇ ಬಳಿಕ ಕೋವಿಡ್ ಪರೀಕ್ಷೆ ಹೆಚ್ಚಿಸಲಾಗಿದ್ದು, ಈಗ ಪ್ರತಿ ದಿನ ಸರಾಸರಿ 500 ಪರೀಕ್ಷೆ ನಡೆಸಲಾಗುತ್ತಿದೆ ಎಂದು ವಿವರಿಸಿದರು. ಸಭೆಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭಾಗವಹಿಸಿದ್ದರು.

ಮೊಹಿಯುದ್ದೀನ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಮೊಹಿಯುದ್ದೀನ್

ಮಂಗಳೂರು: ಸರ್ಕಾರಿ ನೌಕರರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಮಂಗಳೂರು ಉತ್ತರ ಕ್ಷೇತ್ರದ ಮಾಜಿ ಶಾಸಕ ಮೊಹಿಯುದ್ದೀನ್ ಬಾವ ಹಾಗೂ ಅವರ ಇಬ್ಬರು ಸಹಚರರ ವಿರುದ್ಧ ಪಣಂಬೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಾಮಗಾರಿಯೊಂದರ ಬಿಲ್ ಮಂಜೂರು ಮಾಡುವ ವಿಷಯಕ್ಕೆ ನವಮಂಗಳೂರು ಬಂದರು ಪ್ರಾಧಿಕಾರದ (ಎನ್‌ಎಂಪಿಎ) ಉಪಾಧ್ಯಕ್ಷರ ಕಚೇರಿಗೆ ಇಬ್ಬರು ಸಹಚರರೊಂದಿಗೆ ಸೋಮವಾರ ರಾತ್ರಿ ನುಗ್ಗಿದ್ದ ಮೊಹಿಯುದ್ದೀನ್ ಸುಮಾರು 15 ನಿಮಿಷ ಗಲಾಟೆ ನಡೆಸಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದಾರೆ' ಎಂದು ದೂರಿನಲ್ಲಿ ತಿಳಿಸಲಾಗಿದೆ.

ಈ ಬಗ್ಗೆ ಎನ್‌ಎಂಪಿಎ ಕಾರ್ಯದರ್ಶಿಯವರು ಮಂಗಳವಾರ ದೂರು ನೀಡಿದ್ದು, ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 224 (ಸರ್ಕಾರಿ ಅಧಿಕಾರಿ ಮೇಲೆ ಹಲ್ಲೆ), ಸೆಕ್ಷನ್ 221 ಮತ್ತು 132 (ಸರ್ಕಾರಿ ಕರ್ತವ್ಯ ನಿಭಾಯಿಸಲು ಅಡ್ಡಿಪಡಿಸುವುದು), ಸೆಕ್ಷನ್ 126 ಮತ್ತು 127 (ಅಕ್ರಮ ಬಂಧನ) ಹಾಗೂ ಸೆಕ್ಷನ್ 226ರ ಅಡಿ ಪ್ರಕರಣ ದಾಖಲಾಗಿದೆ ಎಂದು ಪಣಂಬೂರು ಪೊಲೀಸರು ತಿಳಿಸಿದ್ದಾರೆ.

ರನ್ಯಾ ವಿಚಾರಣೆ: ಐ.ಟಿಗೆ ಅನುಮತಿ

ಪ್ರಜಾವಾಣಿ ವಾರ್ತೆ



ರನ್ಯಾ ರಾವ್

ಬೆಂಗಳೂರು: ದುಬೈನಿಂದ ಚಿನ್ನ ಕಳ್ಳ ಸಾಗಣೆಯ ಪ್ರಕರಣದಲ್ಲಿ ಬಂಧಿತರಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿ ಇರುವ ನಟಿ ಹರ್ಷವರ್ಧಿನಿ ರನ್ಯಾ (ರನ್ಯಾ ರಾವ್) ಅವರ ಹಣಕಾಸು ವ್ಯವಹಾರದ ಕುರಿತು ತನಿಖೆ ನಡೆಸಲು ಆದಾಯ ತೆರಿಗೆ ಇಲಾಖೆ (ಐ.ಟಿ) ಮುಂದಾಗಿದೆ.

ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ನಡೆದ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ರನ್ಯಾ ಅವರನ್ನು ವಿಚಾರಣೆ ನಡೆಸಲು ಅನುಮತಿ ನೀಡುವಂತೆ ಕೋರಿ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಐ.ಟಿ ಅಧಿಕಾರಿಗಳು ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯವು ಅನುಮತಿ ನೀಡಿದೆ.

ಜೈಲಿನ ವಿಶೇಷ ಕೊಠಡಿಯಲ್ಲೇ ಮೂರು ದಿನ ವಿಚಾರಣೆ ನಡೆಸಬಹುದು. ಬೆಳಿಗ್ಗೆ 10ರಿಂದ ಸಂಜೆ 5.30ರ ಒಳಗೆ ವಿಚಾರಣೆ ನಡೆಸಿ, ವಿಡಿಯೊ ರೆಕಾರ್ಡ್ ಮಾಡಿಕೊಳ್ಳಬೇಕು ಎಂದು ನ್ಯಾಯಾಲಯ ಸೂಚಿಸಿದೆ.

ಆರೋಪಿಗಳಾದ ರನ್ಯಾ ಹಾಗೂ ತರುಣ್ ಕೊಂಡೂರು ರಾಜ್ ಅವರಿಗೆ ನಗರದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯವು ಮೇ 20ರಂದು ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಆದರೆ, ರನ್ಯಾ ಅವರ ವಿರುದ್ಧ ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳ ಸಾಗಣೆ ಚಟುವಟಿಕೆಗಳ ತಡೆ ಕಾಯ್ದೆಯ (ಕಾಫಿಪೋಸಾ) 3(1) ಸೆಕ್ಷನ್ ಅಡಿಯಲ್ಲಿ ಕಳೆದ ಏಪ್ರಿಲ್ 22ರಂದು ಬಂಧನದ ಆದೇಶ ಹೊರಡಿಸಿತ್ತು.

ಕಾಫಿಪೋಸಾ ಪ್ರಕರಣದಲ್ಲಿ ಬಂಧನವಾದರೆ ಜಾಮೀನಿನ ಮೇಲೆ ಬಿಡುಗಡೆ ಸಾಧ್ಯವಿಲ್ಲ. ಹೀಗಾಗಿ, ಜಾಮೀನು ಸಿಕ್ಕರೂ ರನ್ಯಾ ಅವರಿಗೆ ಬಿಡುಗಡೆಯ ಭಾಗ್ಯ ಸಿಕ್ಕಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿ ಇ.ಡಿ ಅಧಿಕಾರಿಗಳು 15 ದಿನಗಳ ಹಿಂದೆ ಹಲವೆಡೆ ದಾಳಿ ಮಾಡಿ ತನಿಖೆ ನಡೆಸಿದ್ದರು.

ಬಿಜೆಪಿ: 10 ಜಿಲ್ಲೆಗಳಿಗೆ ಅಧ್ಯಕ್ಷರ ನೇಮಕ

ಬೆಂಗಳೂರು: ಎರಡನೇ ಹಂತದಲ್ಲಿ ಬಾಕಿ ಉಳಿದಿದ್ದ 10 ಸಂಘಟನಾ ಜಿಲ್ಲೆಗಳಿಗೆ ಅಧ್ಯಕ್ಷರನ್ನು ಬಿಜೆಪಿ ಆಯ್ಕೆ ಮಾಡಿದೆ.

ಕೆ.ಎನ್.ಸುಬ್ಬಣ್ಣ (ಮೈಸೂರು ಗ್ರಾಮಾಂತರ), ಸಿದ್ದೇಶ್ ನಾಗೇಂದ್ರ (ಹಾಸನ), ರವಿ ಕಾಳಪ್ಪ(ಕೊಡಗು), ಉಡುಪಿ(ಕುತ್ಯಾರು ನವೀನ್ ಶೆಟ್ಟಿ), ಹಾವೇರಿ(ವಿರೂಪಾಕ್ಷಪ್ಪ ಬಳ್ಳಾರಿ), ಎನ್.ರಾಜಶೇಖರ(ದಾವಣಗೆರೆ), ಕೆ.ಟಿ.ಕುಮಾರಸ್ವಾಮಿ(ಚಿತ್ರದುರ್ಗ), ಎಚ್.ಎಸ್.ರವಿಶಂಕರ್ ಹೆಬ್ಬಾಕ (ತುಮಕೂರು), ಚಿದಾನಂದಗೌಡ (ಮಧುಗಿರಿ), ಎಸ್.ವಿ.ರಾಮಚಂದ್ರ ಗೌಡ ಸೀಕಲ್ (ಚಿಕ್ಕಬಳ್ಳಾಪುರ).

ಈ ಹಿಂದೆ ಚಿಕ್ಕಬಳ್ಳಾಪುರ ಜಿಲ್ಲಾ ಅಧ್ಯಕ್ಷರನ್ನಾಗಿ ಸಂದೀಪ್ ರೆಡ್ಡಿ ಅವರನ್ನು ನೇಮಕ ಮಾಡಿದಾಗ ಸಂಸದ ಡಾ.ಕೆ. ಸುಧಾಕರ್ ಆಕ್ಷೇಪ ವ್ಯಕ್ತಪಡಿಸಿದ್ದರು. ತಾವು ಹೇಳಿದ ವ್ಯಕ್ತಿಯನ್ನು ನೇಮಿಸಲಿಲ್ಲ ಎಂಬ ಕಾರಣಕ್ಕೆ ಮುನಿಸಿಕೊಂಡಿದ್ದರು. ಬಳಿಕ ಸಂದೀಪ್ ರೆಡ್ಡಿ ಅವರ ಹೆಸರನ್ನು ತಡೆಹಿಡಿಯಲಾಗಿತ್ತು.

ಬಿಎಸ್‌ವೈ– ಈಶ್ವರಪ್ಪ ಮುಖಾಮುಖಿ

ವೈರತ್ವ ಮರೆಸಿದ ಮದುವೆ



ಸಂಸದ ಬಿ.ವೈ.ರಾಘವೇಂದ್ರ ಅವರ ಪುತ್ರನ ಆರತಕ್ಷತೆ ಕಾರ್ಯಕ್ರಮದಲ್ಲಿ ಈಶ್ವರಪ್ಪ ಹಾಗೂ ಅವರ ಪುತ್ರ ಕಾಂತೇಶ್ ಅವರನ್ನು ಗೌರವಿಸಲಾಯಿತು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬಿಎಸ್‌ವೈ ಮೊಮ್ಮಗನ ಆರತಕ್ಷತೆ
- ಕುಶಲೋಪರಿ ವಿಚಾರಿಸಿದ ಉಭಯ ನಾಯಕರು

ಶಿಕಾರಿಪುರ: ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಮತ್ತು ಅವರ ಪುತ್ರ ಕೆ.ಈ. ಕಾಂತೇಶ್ ಅವರು ಶಿಕಾರಿಪುರದಲ್ಲಿ ಬುಧವಾರ ನಡೆದ ಸಂಸದ ಬಿ.ವೈ.ರಾಘವೇಂದ್ರ ಅವರ ಪುತ್ರ ಸುಭಾಷ್ ಆರತಕ್ಷತೆಗೆ ಬಂದು ವಧು–ವರರನ್ನು ಹರಸಿ, ಕುಟುಂಬದ ಆತಿಥ್ಯ ಸ್ವೀಕರಿಸಿದರು. ಸರಿಸುಮಾರು ಒಂದು ವರ್ಷದ ನಂತರ ಜಿಲ್ಲೆಯ ಹಿರಿಯ ರಾಜಕಾರಣಿ ಬಿ.ಎಸ್. ಯಡಿಯೂರಪ್ಪ ಅವರೊಂದಿಗೆ ಮಾತನಾಡಿದರು.

ಶಿವಮೊಗ್ಗದಲ್ಲಿ ಈಚೆಗೆ ನಡೆದ ಕಾರ್ಯಕ್ರಮವೊಂದರಲ್ಲಿ ಯಡಿಯೂರಪ್ಪ ಮತ್ತು ಈಶ್ವರಪ್ಪ ವೇದಿಕೆ ಹಂಚಿಕೊಂಡಿದ್ದರೂ ಪರಸ್ಪರ ಮಾತನಾಡಿರಲಿಲ್ಲ. ರಾಘವೇಂದ್ರ ಅವರ ಪುತ್ರನ ಆರತಕ್ಷತೆಯಲ್ಲಿ ಭಾಗಿಯಾಗಿ ಯಡಿಯೂರಪ್ಪ ಅವರೊಂದಿಗೆ ಕುಶಲೋಪರಿ ನಡೆಸಿದರು.

ಬಿ.ವೈ.ರಾಘವೇಂದ್ರ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಬೆನ್ನುತಟ್ಟಿ ಮಾತನಾಡಿಸಿದರು. ಇದೇ ವೇಳೆ ವಿಜಯೇಂದ್ರ ಅವರು ಈಶ್ವರಪ್ಪ ಹಾಗೂ ಕಾಂತೇಶ್ ಅವರನ್ನು ಗೌರವಿಸಿದರು.

2024ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ಹಾವೇರಿ-ಗದಗ ಕ್ಷೇತ್ರದಿಂದ ಮಗನಿಗೆ ಪಕ್ಷದ ಟಿಕೆಟ್ ಕೊಡಿಸುವಲ್ಲಿ ಸಹಕಾರ ನೀಡಲಿಲ್ಲ ಎಂಬ ಕಾರಣ ಮುಂದಿರಿಸಿ ಈಶ್ವರಪ್ಪ ಅವರು ಅತ್ಯಾಪ್ತ ಗೆಳೆಯ ಬಿ.ಎಸ್. ಯಡಿಯೂರಪ್ಪ ವಿರುದ್ಧ ಬಹಿರಂಗ ಅಸಮಾಧಾನ ಹೊರಹಾಕಿದ್ದರು.

ನಂತರ ಪಕ್ಷದಿಂದ ಉಚ್ಚಾಟನೆಗೊಂಡು ಶಿವಮೊಗ್ಗ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸಿದ್ದರು. ಅಂದಿನಿಂದ ಯಡಿಯೂರಪ್ಪ ಕುಟುಂಬದ ವಿರುದ್ಧ ಹರಿಹಾಯುತ್ತಲೇ ಇದ್ದ ಈಶ್ವರಪ್ಪ ತಿಂಗಳುಗಳ ನಂತರ ಬಿಎಸ್‌ವೈ ಕುಟುಂಬದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು ವಿಶೇಷವಾಗಿತ್ತು.

ಆರ್‌ಎಸ್‌ಎಸ್ ಹಿರಿಯ ಪ್ರಚಾರಕ ಸು.ರಾಮಣ್ಣ, ಹಿರಿಯ ರಾಜಕಾರಣಿ ಡಿ.ಎಚ್. ಶಂಕರಮೂರ್ತಿ, ವಿಧಾನ ಪರಿಷತ್ ಸದಸ್ಯ ಧನಂಜಯ ಸರ್ಜಿ, ಕೆ.ಎಸ್. ಗುರುಮೂರ್ತಿ ಹಾಜರಿದ್ದರು.

ಪಿಯು ಡಿಡಿ ಕಚೇರಿ: ಡಯಟ್ ಉಪನ್ಯಾಸಕರ ನೇಮಕಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ



ನಿಂಗೇಗೌಡ

ಬೆಂಗಳೂರು: ಪದವಿಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರ ಕಚೇರಿಯ ಸಹಾಯಕ ನಿರ್ದೇಶಕರ ಹುದ್ದೆಗಳಿಗೆ ಪಿಯು ಉಪನ್ಯಾಸಕರು ಅಥವಾ ಪ್ರಾಂಶುಪಾಲರನ್ನೇ ನೇಮಕ ಮಾಡಿಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಒತ್ತಾಯಿಸಿದೆ.

ಸರ್ಕಾರಿ, ಅನುದಾನಿತ, ಖಾಸಗಿ ಕಾಲೇಜುಗಳು ಸೇರಿ ರಾಜ್ಯದಲ್ಲಿ 6 ಸಾವಿರಕ್ಕೂ ಹೆಚ್ಚು ಪದವಿಪೂರ್ವ ಕಾಲೇಜುಗಳಿವೆ. 12 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಜಿಲ್ಲಾ ಉಪ ನಿರ್ದೇಶಕರ ಕಚೇರಿಗಳಲ್ಲಿ ಕೆಲಸದ ಒತ್ತಡ ಅಧಿಕವಾಗಿದೆ. ಹಾಗಾಗಿ, ಅಗತ್ಯ ಅಧಿಕಾರಿಗಳು, ಸಿಬ್ಬಂದಿ ನೇಮಿಸುವ ಮೂಲಕ ಎಲ್ಲ ಜಿಲ್ಲಾ ಕಚೇರಿಗಳ ಬಲ ವರ್ಧನೆ ಮಾಡಬೇಕು ಎಂದು ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ ಹೇಳಿದ್ದಾರೆ.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ (ಡಯಟ್) ಉಪನ್ಯಾಸಕರನ್ನು ಪದವಿಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರ ಕಚೇರಿ ಕಾರ್ಯಗಳಿಗೆ ನೇಮಿಸಬಾರದು. ವೃಂದ ಮತ್ತು ನೇಮಕಾತಿ ನಿಯಮಗಳಲ್ಲೂ ನೇಮಕಕ್ಕೆ ಅವಕಾಶ ಇಲ್ಲ. ಪಿಯು ಕಾಲೇಜುಗಳಲ್ಲಿ ಬಡ್ತಿ ಇಲ್ಲದೇ 25, 30 ವರ್ಷಗಳು ಕೆಲಸ ಮಾಡಿರುವ ಉಪನ್ಯಾಸಕರನ್ನೇ ನಿಯೋಜನೆ ಮಾಡಬೇಕೆಂದು ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಆರ್‌ಸಿ ಕುಡಿಯಲ್ಲ, ಹುಚ್ಚ ಅಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಆಡಳಿತ ಮಂಡಳಿಯ ಭಾಗವಾಗಲು ನನಗೆ ಆಹ್ವಾನ ಬಂದಿದೆ. ಆದರೆ, ನನಗೆ ಸಮಯ ಇಲ್ಲ' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಆರ್‌ಸಿಬಿ ಫ್ರಾಂಚೈಸಿಯನ್ನು ಖರೀದಿಸುವ ಕುರಿತ ವದಂತಿಗಳಿಗೆ ದೆಹಲಿಯಲ್ಲಿ ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದ ಅವರು, 'ನಾನು ರಾಯಲ್ ಚಾಲೆಂಜ್ ವಿಸ್ಕಿ ಕುಡಿಯಲ್ಲ, ನಾನು ಹುಚ್ಚ ಅಲ್ಲ. ನನಗೇಕೆ ಆರ್‌ಸಿಬಿ ತಂಡ ಬೇಕು' ಎಂದು ಪ್ರಶ್ನಿಸಿದರು.

'ನಾನು ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಸದಸ್ಯ ಮಾತ್ರ. ಈ ಹಿಂದೆ ನನಗೆ ಕೆಎಸ್‌ಸಿಎ ಆಡಳಿತ ಮಂಡಳಿ ಸೇರಲು ಆಹ್ವಾನ ಬಂದಿತ್ತು. ಆದರೆ, ನನಗೆ ಸಮಯವಿಲ್ಲ. ನನ್ನ ಶಿಕ್ಷಣ ಸಂಸ್ಥೆಯನ್ನು ನೋಡಿಕೊಳ್ಳಲು ನಮ್ಮ ಕುಟುಂಬದ ಸದಸ್ಯರಿಗೆ ಬಿಟ್ಟಿದ್ದೇನೆ' ಎಂದರು.

ಸೂಲಿಬೆಲೆ ವಿರುದ್ಧದ ಎಫ್‌ಐಆರ್ ಮಾಹಿತಿಗೆ ಸೂಚನೆ



ಬೆಂಗಳೂರು: ಯುವ ಬ್ರಿಗೇಡ್‌ನ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಅವರ ವಿರುದ್ಧ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ದಾಖಲಾಗಿರುವ ಎಫ್‌ಐಆರ್‌ಗಳ ಮಾಹಿತಿ ನೀಡುವಂತೆ ಗೃಹ ಇಲಾಖೆ, ಎಲ್ಲ ಕಮಿಷನರ್‌ಗಳು ಹಾಗೂ ಎಸ್‌ಪಿಗಳಿಗೆ ಸೂಚಿಸಿದೆ.

2022ರಿಂದ 2025ರ ಮೇ 31ರ ವರೆಗೆ ದಾಖಲಾಗಿರುವ ಪ್ರಕರಣಗಳ ಮಾಹಿತಿ ಹಾಗೂ ಎಫ್‌ಐಆರ್ ಪ್ರತಿಗಳನ್ನು ಎಸ್.ಪಿ. ಪೊಲೀಸ್ ಪ್ರಧಾನ ಕಚೇರಿ, ಬೆಂಗಳೂರು–ಇಲ್ಲಿಗೆ ಕಳುಹಿಸುವಂತೆ ಆದೇಶಿಸಲಾಗಿದೆ.

ಚಕ್ರವರ್ತಿ ವಿರುದ್ಧದ ಎಫ್‌ಐಆರ್ ಪ್ರತಿ, ತೆಗೆದುಕೊಂಡ ಕ್ರಮಗಳು ಹಾಗೂ ಪ್ರಸ್ತುತ ಹಂತದ ಮಾಹಿತಿ ಒದಗಿಸುವಂತೆ ಆದೇಶದಲ್ಲಿ ಸೂಚಿಸಲಾಗಿದೆ. ಈ ಸಂಬಂಧ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರು ಬರೆದಿದ್ದರು ಎಂದು ಆದೇಶ ಹೇಳಿದೆ.

50ಕ್ಕೂ ಅಧಿಕ ಮೊಸಳೆಮರಿ, ಮೊಟ್ಟೆಗಳು ಪತ್ತೆ



ಅಥಣಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ದೇವರಡ್ಡೇರಟ್ಟಿ ಗ್ರಾಮದ ರೈತ ಅಪ್ಪಾಸಾಬ ನಾಯಕ ಅವರ ಕೃಷಿ ಹೊಂಡದ ಬಳಿ ಪತ್ತೆಯಾದ 50ಕ್ಕೂ ಅಧಿಕ ಮೊಸಳೆ ಮರಿಗಳು ಮತ್ತು ಮೊಟ್ಟೆಗಳನ್ನು ರಕ್ಷಿಸಿದ ಗ್ರಾಮಸ್ಥರು, ಸುರಕ್ಷಿತವಾಗಿ ಅರಣ್ಯ ಇಲಾಖೆಗೆ ಒಪ್ಪಿಸಿದ್ದಾರೆ.

ಅಪ್ಪಾಸಾಬ ಅವರ ಕೃಷಿ ಹೊಂಡದಲ್ಲಿ ಕೆಲ ತಿಂಗಳ ಹಿಂದೆ ದೊಡ್ಡ ಮೊಸಳೆ ಕಾಣಿಸಿತ್ತು. ಪಕ್ಕದಲ್ಲೇ ಅಗ್ರಾಣಿ ಹಳ್ಳ ಹರಿಯುವ ಕಾರಣ, ಅಲ್ಲಿಂದ ಅದು ಬಂದಿರಬಹುದು ಎಂದು ಭಾವಿಸಲಾಗಿತ್ತು. ಆದರೆ, ಕೃಷಿ ಹೊಂಡದಲ್ಲೇ ಠಿಕಾಣಿ ಹೂಡಿದ ಮೊಸಳೆ, ಮೊಟ್ಟೆಗಳನ್ನು ಇಟ್ಟು ಮರಿ ಮಾಡಿದೆ. ಮಂಗಳವಾರ ಒಂದು ಮರಿ ಕಾಣಿಸಿಕೊಂಡಿತ್ತು. ಅನುಮಾನಗೊಂಡ ಗ್ರಾಮಸ್ಥರು ಹೊಲದ ಬದು ಅಗೆದಾಗ 50ಕ್ಕೂ ಅಧಿಕ ಮರಿ ಹಾಗೂ ಮೊಟ್ಟೆಗಳು ಸಿಕ್ಕವು. 'ಅಗ್ರಾಣಿ ಹಳ್ಳ, ಅಕ್ಕಪಕ್ಕದ ಕೆಲ ಬಾವಿಗಳು ಮತ್ತು ಕೃಷಿ ಜಮೀನಿನಲ್ಲಿ ಆಗಾಗ ಮೊಸಳೆ ಗಳು ಕಾಣಿಸಿಕೊಳ್ಳುತ್ತವೆ. ಅರಣ್ಯ ಇಲಾಖೆ ಸಿಬ್ಬಂದಿ ಇವುಗಳನ್ನು ಸೆರೆಹಿಡಿಯ ಬೇಕು' ಎಂದು ರೈತರು ಆಗ್ರಹಿಸಿದ್ದಾರೆ.

ಕುತ್ತಿಗೆಗೆ ಬೆಲ್ಟ್, ಕೈ–ಕಾಲಿಗೆ ಬ್ಯಾಂಡೇಜ್ ಸಹಿತ ವಿಚಾರಣೆಗೆ ಬಂದಿದ್ದ ಗಾಯಾಳುಗಳು

'ಗೇಟ್ ತೆರೆದ ತಕ್ಷಣವೇ ತಳ್ಳಿದರು...'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಘಟನೆ ಸಂಬಂಧ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ನೇತೃತ್ವದಲ್ಲಿ ಮ್ಯಾಜಿಸ್ಟೀರಿಯಲ್ ತನಿಖೆ ನಡೆಯುತ್ತಿದ್ದು, ಬುಧವಾರ ಗಾಯಾಳುಗಳ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಯಿತು.

ಕಾಲ್ತುಳಿತದಿಂದ ಗಾಯಗೊಂಡಿದ್ದ 64 ಮಂದಿಯನ್ನು ವೈದೇಹಿ, ಸ್ಪರ್ಶ್ ಹಾಗೂ ಮಣಿಪಾಲ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಗಾಯಾಳುಗಳು ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ತೆರಳಿದ್ದಾರೆ. ಅವರ ಹೇಳಿಕೆ ದಾಖಲು ಪ್ರಕ್ರಿಯೆ ಆರಂಭವಾಗಿದೆ. ಘಟನೆಯ ಸಂಪೂರ್ಣ ಮಾಹಿತಿ ಸಂಗ್ರಹಿಸಲು ಜೂನ್ 11, 13 ಮತ್ತು 17ರಂದು ಸಂತ್ರಸ್ತರು ಹಾಗೂ ಅವರ ಕುಟುಂಬ ಸದಸ್ಯರಿಂದ ಹೇಳಿಕೆ ದಾಖಲಿಸಿಕೊಳ್ಳಲು ದಿನಾಂಕ ನಿಗದಿಪಡಿಸಲಾಗಿತ್ತು. ಬುಧವಾರ 14 ಮಂದಿಯ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೆ.ಜಿ.ರಸ್ತೆಯ ಜಿಲ್ಲಾಧಿಕಾರಿ ಕಚೇರಿಗೆ ಗಾಯಾಳುಗಳು ಕುತ್ತಿಗೆಗೆ ಬೆಲ್ಟ್, ಕೈ–ಕಾಲಿಗೆ ಬ್ಯಾಂಡೇಜ್ ಹಾಕಿಕೊಂಡು ಕುಂಟುತ್ತಲೇ ಹೇಳಿಕೆ ದಾಖಲಿಸಲು ಬಂದಿದ್ದರು. ಗಾಯಾಳುಗಳಿಗೆ ಪೋಷಕರು ಹಾಗೂ ಸಂಬಂಧಿಕರು ನೆರವಾದರು.

ಘಟನೆ ಹೇಗೆ ಸಂಭವಿಸಿತು? ಯಾವ ಮಾಹಿತಿ ಆಧರಿಸಿ ಆರ್‌ಸಿಬಿ ತಂಡದ ವಿಜಯೋತ್ಸವದ ಆಚರಣೆ ವೀಕ್ಷಿಸಲು ಕ್ರೀಡಾಂಗಣದ ಬಳಿಗೆ ಬಂದಿದ್ದೀರಿ? ಗೇಟ್ ಎಷ್ಟು ಹೊತ್ತಿಗೆ ತೆರೆಯಲಾಯಿತು? ಸ್ಥಳದಲ್ಲಿ ಏನೆಲ್ಲಾ ವ್ಯವಸ್ಥೆ ಮಾಡಲಾಗಿತ್ತು ಎಂಬ ಪ್ರಶ್ನೆಗಳನ್ನು ತನಿಖಾ ತಂಡವು ಕೇಳಿ, ಹೇಳಿಕೆ ದಾಖಲು ಮಾಡಿಕೊಂಡಿದೆ ಎಂದು ಮೂಲಗಳು ತಿಳಿಸಿವೆ.

'ಕ್ರೀಡಾಂಗಣದ ಬಳಿ ಆಂಬುಲೆನ್ಸ್ ಇರಲಿಲ್ಲ. ಪ್ರಥಮ ಚಿಕಿತ್ಸೆಗೂ ವ್ಯವಸ್ಥೆ ಮಾಡಿಕೊಂಡಿರಲಿಲ್ಲ. ಅಗ್ನಿಶಾಮಕ ದಳದ ಸಿಬ್ಬಂದಿಯೂ ಇರಲಿಲ್ಲ. ಪೊಲೀಸರೇ ತಮ್ಮ ವಾಹನದಲ್ಲಿ ಗಾಯಾಳುಗಳನ್ನು ಕರೆದೊಯ್ದರು. ನೆಲಕ್ಕೆ ಬಿದ್ದವರ ನರಳಾಟ ನೋಡಲು ಆಗುತ್ತಿರಲಿಲ್ಲ' ಎಂಬುದಾಗಿ ಗಾಯಾಳುಗಳು ಹೇಳಿಕೆ ನೀಡಿದ್ದಾರೆ.



ದುರಂತದಲ್ಲಿ ಮೃತಪಟ್ಟ ಭೂಮಿಕ್ ಅವರ ತಂದೆ ಲಕ್ಷ್ಮಣ್ ಅವರಿಗೆ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರ ಪರಿಹಾರದ ಚೆಕ್ ವಿತರಣೆ ಮಾಡಿದರು

ಡಿವಿಆರ್‌ಗಳ ಜಪ್ತಿ

ಕ್ರೀಡಾಂಗಣದ ಸುತ್ತಮುತ್ತಲ 21 ಗೇಟ್‌ಗಳ ಬಳಿ ಅಳವಡಿಸಿದ್ದ 42 ಸಿ.ಸಿ.ಟಿ.ವಿ ಕ್ಯಾಮೆರಾಗಳ ಡಿವಿಆರ್ ಅನ್ನು ಸಿಐಡಿ ತನಿಖಾಧಿಕಾರಿಗಳು ಜಪ್ತಿ ಮಾಡಿಕೊಂಡಿದ್ದಾರೆ.

'ಲಿಂಕ್ ರಸ್ತೆ, ಕಬ್ಬನ್ ಹಾಗೂ ಕ್ವೀನ್ಸ್ ರಸ್ತೆಯಲ್ಲಿದ್ದ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲು ಡಿವಿಆರ್ ಜಪ್ತಿ ಮಾಡಿಕೊಳ್ಳಲಾಗಿದೆ. ಕ್ರೀಡಾಂಗಣದ ಒಳಗಿರುವ 120ಕ್ಕೂ ಹೆಚ್ಚು ಕ್ಯಾಮೆರಾಗಳ ದೃಶ್ಯಾವಳಿಯನ್ನೂ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಸಿಐಡಿ ಪೊಲೀಸರು ಹೇಳಿದರು.



ಘಟನೆ ಕುರಿತು ಹೇಳಿಕೆ ದಾಖಲಿಸಲು ಜಿಲ್ಲಾಧಿಕಾರಿ ಕಚೇರಿಗೆ ಬಂದಿದ್ದ ಗಾಯಾಳು

'ಗೇಟ್ ನಂ.1ರಲ್ಲಿ ಬಹಳ ಸಮಯದಿಂದಲೂ ಕಾಯುತ್ತಿದ್ದೆ. ಅಲ್ಲಿ ಹೆಚ್ಚಿನ ಜನರು ಜಮಾಯಿಸಿದ್ದರು. ಗೇಟ್ ತೆರೆದ ತಕ್ಷಣವೇ ಹಿಂದಿನವರು ತಳ್ಳಿದರು. ಆಗ, ಹಲವರು ಕೆಳಕ್ಕೆ ಬಿದ್ದರು. ಆಗ ನಾನು ಕಬ್ಬಿಣದ ರಾಡ್ ಮೇಲೆ ಬಿದ್ದೆ' ಎಂದು ಗಾಯಾಳು ರಾಜೇಶ್ ಮಾಧ್ಯಮದವರಿಗೆ ತಿಳಿಸಿದರು.

'ಘಟನೆಗೆ ಸಂಬಂಧಿಸಿದಂತೆ ಯಾರನ್ನೂ ದೂಷಣೆ ಮಾಡುವುದಿಲ್ಲ. ಜನರದ್ದೂ ಸಹ ತಪ್ಪು' ಎಂದೂ ಹೇಳಿದರು.

'ವಿಧಾನಸೌಧದ ಬಳಿ ಭದ್ರತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜನೆ ಮಾಡಲಾಗಿತ್ತು. ಕ್ರೀಡಾಂಗಣದಲ್ಲಿ ಕಡಿಮೆ ಸಂಖ್ಯೆಯಲ್ಲಿ ಪೊಲೀಸರು ಇದ್ದರು. ಮುಂದಿನ ದಿನಗಳಲ್ಲಿ ಕ್ರೀಡಾಂಗಣಕ್ಕೆ ಹೋಗಿ ಪಂದ್ಯ ವೀಕ್ಷಿಸಲು ಭಯವಾಗುತ್ತದೆ. ಮುಂಚಿತವಾಗಿ ಟಿಕೆಟ್ ನೀಡಿದ್ದರೆ ಅನಾಹುತ ಆಗುತ್ತಿರಲಿಲ್ಲ' ಎಂದು ಗಾಯಾಳು ಮೋನಿಶ್ ಹೇಳಿದರು.

'ಕ್ರೀಡಾಂಗಣದ ಒಳಕ್ಕೆ ಪ್ರವೇಶಿಸಲು ಜೂನ್ 4ರಂದು ಸಂಜೆ 4 ಗಂಟೆಯ ಸುಮಾರಿಗೆ ಗೇಟ್ ನಂ.20ರ ಎದುರು ಕಾಯುತ್ತಿದ್ದೆ. ಆ ಸಂದರ್ಭದಲ್ಲಿ ನೂಕುನುಗ್ಗಲು ಉಂಟಾಯಿತು. ಬ್ಯಾರಿಕೇಡ್‌ಗೆ ನನ್ನ ಕಾಲು ಸಿಕ್ಕಿಹಾಕಿಕೊಂಡಿತು. 20ರಿಂದ 30 ಮಂದಿ ನನ್ನ ಕಾಲನ್ನು ತುಳಿಯುತ್ತಲೇ ಓಡಿದರು' ಎಂದು ಮತ್ತೊಬ್ಬ ಗಾಯಾಳು ತನಿಖಾ ತಂಡದ ಎದುರು ಹೇಳಿಕೆ ದಾಖಲಿಸಿದ್ದಾರೆ.

ಪರಿಹಾರದ ಚೆಕ್ ವಿತರಣೆ: ಕಾಲ್ತುಳಿತ ದುರಂತದಲ್ಲಿ ಮೃತಪಟ್ಟ ಯಲಹಂಕದ ಬಿ.ಎಸ್.ದಿವ್ಯಾಂಶಿ, ಯಲಹಂಕ ನ್ಯೂಟೌನ್‌ನ ಜಿ.ಪ್ರಜ್ವಲ್, ಎಂ.ಎಸ್. ರಾಮಯ್ಯ ಬಡಾವಣೆಯ ಭೂಮಿಕ್ ಹಾಗೂ ತಮಿಳುನಾಡಿನ ತಿರುಪೂರ್‌ನ ಎಂ.ಆರ್. ಕಾಮಾಕ್ಷಿದೇವಿ ಅವರ ಕುಟುಂಬದವರಿಗೆ ಜಿಲ್ಲಾಧಿಕಾರಿಯವರು ಪರಿಹಾರದ ಚೆಕ್ ವಿತರಣೆ ಮಾಡಿದರು.

ರಾಜ್ಯ ಸರ್ಕಾರ ಘೋಷಣೆ ಮಾಡಿದ್ದ ₹25 ಲಕ್ಷದ ಚೆಕ್ ಅನ್ನು ಮೃತರ ಪೋಷಕರು ಪಡೆದರು. ಈ ವೇಳೆ ಮೃತ ಮಕ್ಕಳನ್ನು ನೆನಪು ಮಾಡಿಕೊಂಡು ಪೋಷಕರು ಹಾಗೂ ಸಂಬಂಧಿಕರು ಕಣ್ಣೀರು ಹಾಕಿದರು.

ಪೊಲೀಸ್ ಕಮಿಷನರ್ ಭೇಟಿ: ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬುಧವಾರ ಭೇಟಿ ನೀಡಿ ಪರಿಶೀಲಿಸಿದರು. ದುರಂತ ಸಂಭವಿಸಿದ ಗೇಟ್ ಗಳ ಬಳಿ ತೆರಳಿ ಘಟನೆಯ ಬಗ್ಗೆ ಮಾಹಿತಿ ಪಡೆದುಕೊಂಡರು.

ಸುದ್ದಿ 2 ನಿಮಿಷ

ಕೆಪಿಸಿಸಿ ಅಧ್ಯಕ್ಷ ಬದಲಾವಣೆ ಚರ್ಚೆಯಾಗಿಲ್ಲ: ಖರ್ಗೆ

ಕಲಬುರಗಿ: 'ದೆಹಲಿಯಲ್ಲಿ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಚರ್ಚೆಯಾಗಿಲ್ಲ. ಜಾತಿ ಜನಗಣತಿ, ಕಾಲ್ತುಳಿತ ಸೇರಿ ಕೆಲ ವಿಚಾರಗಳು ಪ್ರಸ್ತಾಪವಾಗಿವೆ. ಸಚಿವ ಸಂಪುಟದ ಬದಲಾವಣೆ ಸದ್ಯಕ್ಕೆ ಇಲ್ಲ; ಮುಂಬರುವ ದಿನಗಳಲ್ಲಿ ನೋಡಬೇಕು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ನಗರದಲ್ಲಿ ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 'ಕಾಲ್ತುಳಿತದ ತಪ್ಪು ಯಾರಿಂದ ಆಗಿದೆ ಎಂಬುದನ್ನು ಪತ್ತೆಹಚ್ಚಿ ಅವರಿಗೆ ಶಿಕ್ಷೆ ಕೊಡಬೇಕು. ಸಂತ್ರಸ್ತರ ಕುಟುಂಬಗಳ ಬೆಂಬಲಕ್ಕೆ ನಿಲ್ಲುವಂತೆ ರಾಹುಲ್ ಗಾಂಧಿ ಅವರು ಸಿಎಂ, ಡಿಸಿಎಂಗೆ ಸ್ಪಷ್ಟವಾಗಿ ಹೇಳಿದ್ದಾರೆ' ಎಂದು ಹೇಳಿದರು.

'ಕುಂಭಮೇಳದಲ್ಲಿ ನಡೆದಿದ್ದ ಕಾಲ್ತುಳಿತಕ್ಕೆ ಉತ್ತರ ಪ್ರದೇಶದ ಸಿಎಂ ಯೋಗಿ ಆದಿತ್ಯನಾಥ್ ಅವರು ರಾಜೀನಾಮೆ ಕೊಟ್ಟಿದ್ದರಾ' ಎಂದೂ ಪ್ರಶ್ನಿಸಿದರು.



ಸಮರ್ಥನೆ: 'ಜಾತಿ ಜನಗಣತಿ ನಡೆದು 10 ವರ್ಷಗಳು ಕಳೆದಿದ್ದರಿಂದ ಎಸ್‌ಸಿ, ಎಸ್‌ಟಿ, ಒಬಿಸಿ ಪಟ್ಟಿಗಳಲ್ಲಿ ವ್ಯತ್ಯಾಸವಾಗಿದೆ. ಯಾವೆಲ್ಲ ಸಮುದಾಯಗಳಲ್ಲಿ ಏನೆಲ್ಲಾ ವ್ಯತ್ಯಾಸವಾಗಿದೆ ಅದನ್ನು ನೋಡಿ, ಸೇರ್ಪಡೆ ಮಾಡಿ ಮರು ಸಮೀಕ್ಷೆಗೆ ಸೂಚಿಸಲಾಗಿದೆ' ಎಂದು ಖರ್ಗೆ ಸಮರ್ಥಿಸಿಕೊಂಡರು.

ಆಷಾಢ ಶುಕ್ರವಾರ: ಚಾಮುಂಡಿ ವಿಶೇಷ ದರ್ಶನಕ್ಕೆ ₹2 ಸಾವಿರ!

ಮೈಸೂರು: ಚಾಮುಂಡಿ ಬೆಟ್ಟದಲ್ಲಿ ಜೂನ್ 27ರಿಂದ ಒಂದು ತಿಂಗಳು ಆಷಾಢ ಶುಕ್ರವಾರ ಆಚರಣೆ ನಡೆಯಲಿದ್ದು, ಆ ಅವಧಿಯಲ್ಲಿ ಬೆಟ್ಟದಲ್ಲಿ 'ವಿಶೇಷ ದರ್ಶನ' ಟಿಕೆಟ್ ದರವನ್ನು ₹300 ಹಾಗೂ ₹2 ಸಾವಿರಕ್ಕೆ ನಿಗದಿಪಡಿಸಲಾಗಿದೆ. ಇದಕ್ಕೆ ಭಕ್ತರಿಂದ ಆಕ್ಷೇಪವೂ ವ್ಯಕ್ತವಾಗಿದೆ.

ಈ ಮೊದಲು ವಿಶೇಷ ದರ್ಶನ ಟಿಕೆಟ್‌ಗೆ ₹300 ಮಾತ್ರ ಶುಲ್ಕವಿತ್ತು. ಈ ವರ್ಷದಿಂದ ₹ 2 ಸಾವಿರದ ಇನ್ನೊಂದು ವಿಶೇಷ ಟಿಕೆಟ್ ಸೌಲಭ್ಯವನ್ನೂ ಸೇರಿಸಲಾಗಿದೆ. ಅದನ್ನು ಪಡೆದರೆ ಪ್ರತ್ಯೇಕ ಸಾಲಿನಲ್ಲಿ ದರ್ಶನ, ಬೆಟ್ಟಕ್ಕೆ ಎ.ಸಿ. ಬಸ್ ವ್ಯವಸ್ಥೆ ಇರಲಿದೆ. ಜೊತೆಗೆ ಅರಿಶಿನ–ಕುಂಕುಮ, ಲಡ್ಡು, ನೀರಿನ ಬಾಟಲ್ ಹಾಗೂ ಪುಟ್ಟ ಸ್ಮರಣಿಕೆಯುಳ್ಳ ಬಟ್ಟೆ ಬ್ಯಾಗ್ ನೀಡಲಾಗುತ್ತದೆ.

'ನಾಲ್ಕೂ ವಾರ, ಶುಕ್ರವಾರದಿಂದ ಭಾನುವಾರದವರೆಗೆ ಬೆಟ್ಟಕ್ಕೆ ಖಾಸಗಿ ವಾಹನಗಳ ಸಂಚಾರಕ್ಕೆ ನಿರ್ಬಂಧವಿದೆ. ಲಲಿತಮಹಲ್ ಮೈದಾನದಿಂದ ಕೆಎಸ್‌ಆರ್‌ಟಿಸಿ ಬಸ್ ಸೌಲಭ್ಯ ಇರಲಿದೆ. ಭಕ್ತರಿಗೆಂದು ಈ ಬಾರಿ ವಿಶೇಷ ಸಾಲಿನ ವ್ಯವಸ್ಥೆ ಮಾಡಿದ್ದು, ಸಾಮಾನ್ಯ ದರ್ಶನಕ್ಕೆ ಶುಲ್ಕವಿರುವುದಿಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್‌.ಸಿ. ಮಹದೇವಪ್ಪ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಬೆಟ್ಟಕ್ಕೆ ಬರುವ ಸಾವಿರಾರು ವಿಐಪಿ–ವಿವಿಐಪಿಗಳಿಗೆ ಈ ವರ್ಷದಿಂದ ಪಾಸ್ ಮೂಲಕ ಉಚಿತ ಪ್ರವೇಶ ನೀಡುವುದಿಲ್ಲ. ಅವರು ₹ 2 ಸಾವಿರದ ಟಿಕೆಟ್ ಪಡೆದು ದರ್ಶನ ಪಡೆಯಬಹುದು. ಇದರಿಂದ ದೇಗುಲದ ಆದಾಯವೂ ಹೆಚ್ಚಲಿದೆ' ಎಂದು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದರು.

ಕಾಲ್ತುಳಿತ: ಆರ್‌ಸಿಬಿ–ಡಿಎನ್‌ಎ ಪದಾಧಿಕಾರಿಗಳ ಬಿಡುಗಡೆ ಕೋರಿಕೆ ಅರ್ಜಿ ವಿಚಾರಣೆ ಪೂರ್ಣ

ಮಧ್ಯಂತರ ಆದೇಶ ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಉಂಟಾದ ಕಾಲ್ತುಳಿತದಲ್ಲಿ 11 ಮಂದಿ ಸಾವು ಕಂಡ ಘಟನೆಗೆ ಸಂಬಂಧಿಸಿ ಬಂಧಿಸಲಾಗಿರುವ ನಮ್ಮನ್ನು ಬಿಡುಗಡೆ ಮಾಡಲು ನಿರ್ದೇಶಿಸಬೇಕು' ಎಂದು ಕೋರಿ ಆರ್‌ಸಿಬಿ ಮತ್ತು ಡಿಎನ್‌ಎ ಪದಾಧಿಕಾರಿಗಳು ಸಲ್ಲಿಸಿರುವ ಅರ್ಜಿಯ ಮೇಲಿನ ಮಧ್ಯಂತರ ಆದೇಶವನ್ನು ಹೈಕೋರ್ಟ್ ಕಾಯ್ದಿರಿಸಿದೆ.

ಆರ್‌ಸಿಬಿ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆ ಪರ ಅವರ ಪತ್ನಿ ಮಾಳವಿಕಾ ನಾಯಕ್, ಮೆಸರ್ಸ್ ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ನಿರ್ದೇಶಕ ಆರ್.ಸುನಿಲ್ ಮ್ಯಾಥ್ಯೂ ಪರವಾಗಿ ಅವರ ಪತ್ನಿ ರೋಶನಿ ಸುನಿಲ್, ಎಸ್.ಕಿರಣ್ ಕುಮಾರ್ ಪರವಾಗಿ ಅವರ ಪತ್ನಿ ಕೆ.ನಂದಿನಿ ಮತ್ತು ಎನ್.ಪಿ.ಶಮಂತ್ ಅವರ ತಾಯಿ ನಿರ್ಮಲಾ ಸಲ್ಲಿಸಿರುವ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, 'ಆರ್‌ಸಿಬಿ ಮತ್ತು ಡಿಎನ್‌ಎ ಅಂದು ಜನಸಂದಣಿಯನ್ನು ಸೂಕ್ತವಾಗಿ ನಿರ್ವಹಣೆ ಮಾಡಿಲ್ಲ. ತಮ್ಮ ಕಂಪನಿಗಳ ಪ್ರಚಾರಕ್ಕಾಗಿ, ಬ್ರ್ಯಾಂಡ್ ಮೌಲ್ಯ ಹೆಚ್ಚಿಸಲು ಇವರೆಲ್ಲಾ ಜನರ ಪ್ರಾಣಕ್ಕೆ ಕುತ್ತು ತಂದಿದ್ದಾರೆ' ಎಂದು ಆರೋಪಿಸಿದರು.

'ಎಫ್‌ಐಆರ್ ದಾಖಲಾಗುತ್ತಿದ್ದಂತೆಯೇ ನಿಖಿಲ್ ಸೋಸಲೆ ಪಲಾಯನ ಮಾಡಲು ಯತ್ನಿಸಿದಾಗ ಬಂಧಿಸಲಾಗಿದೆ. ನಿಖಿಲ್ ಸೋಸಲೆಯನ್ನು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ ಉಸ್ತುವಾರಿ ಇನ್‌ಸ್ಪೆಕ್ಟರ್ ರವಿ ಬಂಧಿಸಿದ್ದಾರೆಯೇ ಹೊರತು ಸಿಸಿಬಿ ಅಧಿಕಾರಿಗಳಲ್ಲ. 'ಆರೋಪಿಗಳ ಬಂಧನದಲ್ಲಿ ಯಾವುದೇ ರೀತಿಯ ಅಕ್ರಮ ನಡೆದಿಲ್ಲ. ಆದ್ದರಿಂದ, ಅರ್ಜಿದಾರರ ಬಿಡುಗಡೆಗೆ ಆದೇಶ ಮಾಡಬಾರದು' ಎಂದು ಮನವಿ ಮಾಡಿದರು.

ಅರ್ಜಿದಾರರ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ, 'ಸಿಎಂ ಸೂಚನೆ ಮೇರೆಗೆ ಅರ್ಜಿದಾರರನ್ನು ಬಂಧಿಸಲಾಗಿದೆ. ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ ಎಂಬುದನ್ನು ಅಡ್ವೊಕೇಟ್ ಜನರಲ್ ಎಲ್ಲೂ ನಿರಾಕರಿಸಿಲ್ಲ. ಬಂಧಿಸುವಾಗಲೇ ಬಂಧನದ ಕಾರಣ ನೀಡಬೇಕು. ಆದರೆ, ನೀಡಿಲ್ಲ. ಹೀಗಾಗಿ, ಬಂಧನ ಕಾನೂನುಬಾಹಿರ' ಎಂದು ಪ್ರತಿಪಾದಿಸಿದರು. ಸುದೀರ್ಘ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಮಧ್ಯಂತರ ಆದೇಶವನ್ನು ಗುರುವಾರ (ಜೂನ್ 12) ಪ್ರಕಟಿಸುವುದಾಗಿ ತಿಳಿಸಿತು.

ಆಹ್ವಾನ ನೀಡಿದ್ದು ಸಿಎಂ–ಡಿಸಿಎಂ ...

ಸಂದೇಶ್ ಜೆ.ಚೌಟ, 'ವಿಜಯೋತ್ಸವ ಆಚರಣೆ ಮಾಡುತ್ತೇವೆ ಬನ್ನಿ ಎಂದು ಸಿಎಂ ಹಾಗೂ ಡಿಸಿಎಂ ಜನರನ್ನು ಆಹ್ವಾನಿಸಿದ್ದಾರೆ. ಆದರೆ, ಪೊಲೀಸರು ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಆಕ್ಷೇಪಿಸಿದರು.

'ಈ ಪ್ರಕರಣದಲ್ಲಿ ಪೊಲೀಸ್ ಆಯುಕ್ತರು, ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಆದರೆ, ಸಿಎಂ ರಾಜಕೀಯ ಕಾರ್ಯದರ್ಶಿ, ಗುಪ್ತಚರ ವಿಭಾಗದ ಮುಖ್ಯಸ್ಥರನ್ನು ಕೈಬಿಡಲಾಗಿದೆ. ಇವರಲ್ಲಿ ಯಾರನ್ನೂ ಬಂಧಿಸಿಲ್ಲ' ಎಂದು ದೂರಿದರು.

ಇದನ್ನು ಬಲವಾಗಿ ಆಕ್ಷೇಪಿಸಿದ ಎಜಿ ಕೆ.ಶಶಿಕಿರಣ ಶೆಟ್ಟಿ, 'ವಿಧಾನಸೌಧದಿಂದ ಚಿನ್ನಸ್ವಾಮಿ ಕ್ರೀಡಾಂಗಣದವರೆಗೆ ವಿಜಯೋತ್ಸವ ಆಚರಿಸಲಾಗುವುದು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರಬೇಕು ಎಂದು ಆರ್‌ಸಿಬಿ ಟ್ವೀಟ್ ಮಾಡಿದೆ. ಆದರೆ, ಇದಕ್ಕೆ ಸಕ್ಷಮ ಪ್ರಾಧಿಕಾರದಿಂದ ಸೂಕ್ತ ಅನುಮತಿ ಪಡೆದಿರಲಿಲ್ಲ. ಅಂದು ಮಧ್ಯಾಹ್ನ ಕ್ರೀಡಾಂಗಣದ ಮುಂಭಾಗ ಅಂದಾಜು 4 ಲಕ್ಷ ಜನ ನೆರೆದಿದ್ದರೂ 21 ಗೇಟ್‌ಗಳ ಪೈಕಿ ಕೇವಲ 3 ಗೇಟ್‌ಗಳನ್ನು ಮಾತ್ರ ತೆರೆಯಲಾಗಿತ್ತು. ಆದ್ದರಿಂದ, ದುರ್ಘಟನೆಗೆ ಆರ್‌ಸಿಬಿ, ಡಿಎನ್‌ಎ ಮತ್ತು ಕೆಎಸ್‌ಸಿಎ ಕಾರಣ' ಎಂದು ಪ್ರತಿಯಾಗಿ ದೂರಿದರು.

ಹುಬ್ಬಳ್ಳಿ–ಧಾರವಾಡ ಪಾಲಿಕೆ: ಮೇಯರ್ ಮೀಸಲಾತಿಗೆ ತಡೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ 24ನೇ ಅವಧಿಯ ನೂತನ ಮೇಯರ್ ಸ್ಥಾನಕ್ಕೆ ನಿಗದಿಪಡಿಸಿದ ಮೀಸಲಾತಿಗೆ ಹೈಕೋರ್ಟ್‌ನ ಧಾರವಾಡ ಪೀಠ ತಡೆ ನೀಡಿದೆ.

ಪ್ರಸ್ತುತ ಮಹಾನಗರ ಪಾಲಿಕೆಯ ಐದು ವರ್ಷದ ಆಡಳಿತ ಅವಧಿಯಲ್ಲಿ, ಮೇಯರ್ ಸ್ಥಾನಕ್ಕೆ ಸಾಮಾನ್ಯ ವರ್ಗಗಳ ಮೀಸಲಾತಿ ಒಂದೇ ಬಾರಿ ನೀಡಿದ್ದನ್ನು ಪ್ರಶ್ನಿಸಿ ಶಿವು ಮೆಣಸಿನಕಾಯಿ ಅವರು ಕೋರ್ಟ್ ಮೊರೆ ಹೋಗಿದ್ದರು. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಈ ಕುರಿತು ಮಾಹಿತಿ ನೀಡಿದ ಶಿವು ಮೆಣಸಿನಕಾಯಿ, 'ಪ್ರಸ್ತುತ ಅವಧಿಯಲ್ಲಿ ಮೈಸೂರು, ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಮೇಯರ್ ಸ್ಥಾನವನ್ನು ಸಾಮಾನ್ಯ ಮೀಸಲಾತಿ ಅಭ್ಯರ್ಥಿಗೆ ಎರಡು ಬಾರಿ ನೀಡಲಾಗಿದೆ. ಆದರೆ, ನಮ್ಮ ಮಹಾನಗರ ಪಾಲಿಕೆಯಲ್ಲಿ ಒಂದೇ ಬಾರಿ ನೀಡಲಾಗಿದೆ. ಎಸ್‌ಸಿ ಮೀಸಲಾತಿ, ಮಹಿಳಾ ಮೀಸಲಾತಿ, ಒಬಿಸಿ ಹೀಗೆ ವಿವಿಧ ವರ್ಗದವರಿಗೆ ಮೇಯರ್ ಸ್ಥಾನ ಮೀಸಲಿಡಲಾಗಿದೆ. ಇದನ್ನು ಪ್ರಶ್ನಿಸಿ ಒಂದೂವರೆ ತಿಂಗಳ ಹಿಂದೆ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದೆ. ಇದೀಗ ತಡೆಯಾಜ್ಞೆ ಸಿಕ್ಕಿದೆ' ಎಂದರು.

'ಬೇರೆ ಮಹಾನಗರ ಪಾಲಿಕೆಯಲ್ಲಿ ಎರಡು–ಮೂರು ಅವಧಿಗೆ ಮೇಯರ್ ಸ್ಥಾನವನ್ನು ಸಾಮಾನ್ಯ ಅಭ್ಯರ್ಥಿಗೆ ಮೀಸಲಿಡಲಾಗಿದೆ. ಇಲ್ಲಿ ಒಂದು ಅವಧಿಗೆ ಮಾತ್ರ ಮೀಸಲಿಟ್ಟಿದ್ದನ್ನು ಪ್ರಶ್ನಿಸಿ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು' ಎಂದು ಅರ್ಜಿದಾರರ ಪರ ವಾದ ಮಂಡಿಸಿದ ವಕೀಲೆ ವಿದ್ಯಾವತಿ ಕೊಟ್ಟೂರ ಶೆಟ್ಟರ್ ಹೇಳಿದರು.

ಹಾಲಿ ಮೇಯರ್, ಉಪಮೇಯರ್ ಅವಧಿ ಇದೇ 28ರಂದು ಮುಗಿಯಲಿದೆ. ಮೇಯರ್ ಸ್ಥಾನ ಸಾಮಾನ್ಯ ಮಹಿಳೆ ಮತ್ತು ಉಪ ಮೇಯರ್ ಸ್ಥಾನ ಹಿಂದುಳಿದ ವರ್ಗ 'ಬಿ'ಗೆ ಮೀಸಲಾಗಿದೆ.

ವಿದೇಶ ಪ್ರವಾಸಕ್ಕೆ ನಿಂಬಾಳ್ಕರ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಾರ್ತಾ ಇಲಾಖೆಯ ಆಯುಕ್ತ ಹೇಮಂತ್ ನಿಂಬಾಳ್ಕರ್ ಅವರು ಜೂನ್ 12ರಿಂದ 16 ದಿನ ವಿದೇಶ ಪ್ರವಾಸಕ್ಕೆ ತೆರಳುತ್ತಿದ್ದಾರೆ.

ಡಿಪಿಎಆರ್ ಅವರಿಗೆ ಗಳಿಕೆ ರಜೆ ಮಂಜೂರು ಮಾಡಿದೆ. ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ನಿರ್ದೇಶಕ ಕೆ. ನಾಗೇಂದ್ರ ಪ್ರಸಾದ್ ಅವರಿಗೆ ಪ್ರಭಾರ ವಹಿಸಿದೆ.

ಐಪಿಎಸ್ ಅಧಿಕಾರಿ ನಿಂಬಾಳ್ಕರ್ ವಾರ್ತಾ ಇಲಾಖೆಯ ಆಯುಕ್ತ ಹುದ್ದೆಯ ಜತೆಗೆ ರಾಜ್ಯ ಗುಪ್ತಚರ ವಿಭಾಗದ ಎಡಿಜಿಪಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತ ಘಟನೆ ನಂತರ ನಗರ ಪೊಲೀಸ್ ಕಮಿಷನರ್ ಸೇರಿ ನಾಲ್ವರು ಐಪಿಎಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದ ಸರ್ಕಾರ, ನಿಂಬಾಳ್ಕರ್ ಅವರನ್ನು ಗುಪ್ತಚರ ವಿಭಾಗದಿಂದ ವರ್ಗಾವಣೆ ಮಾಡಿತ್ತು.

ಕಾಲ್ತುಳಿತದ ಘಟನೆಯಲ್ಲಿ ರಾಜ್ಯ ಗುಪ್ತಚರ ವಿಭಾಗದ ವೈಫಲ್ಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿಕೊಂಡಿದ್ದರೂ, ಅವರ ವಿರುದ್ಧ ಕಠಿಣ ಕ್ರಮ ಜರುಗಿಸಿರಲಿಲ್ಲ. ಈಗ ಗಳಿಕೆ ರಜೆಯ ನೆಪದಲ್ಲಿ ವಿದೇಶಕ್ಕೆ ಹೋಗಲು ಅವಕಾಶ ನೀಡಲಾಗಿದೆ ಎಂದು ಹೇಳಲಾಗಿದೆ.



ವಿಷನ್ ಕರ್ನಾಟಕ

ಬೆಳಗಾವಿಯಲ್ಲಿ ಬುಧವಾರ ಆರಂಭಗೊಂಡ ಮೂರು ದಿನಗಳ 'ವಿಷನ್ ಕರ್ನಾಟಕ-2025' ಪ್ರದರ್ಶನದಲ್ಲಿ ಯುದ್ಧಕ್ಕೆ ಬಳಕೆಯಾಗುವ ಡ್ರೋನ್‌ಗಳ ತಂತ್ರಜ್ಞಾನದ ಬಗ್ಗೆ ವಿದ್ಯಾರ್ಥಿನಿಯರು ಮಾಹಿತಿ ಪಡೆದರು ಪ್ರಜಾವಾಣಿ ಚಿತ್ರ

ಹೈಕಮಾಂಡ್ ನಿರ್ಧಾರ: ಸಿ.ಎಂ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಚಿಕ್ಕಬಳ್ಳಾಪುರ: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ಮರು ಗಣತಿ ನಡೆಸುವುದು ನನ್ನ ತೀರ್ಮಾನವಲ್ಲ. ಅದು ಪಕ್ಷದ ಹೈಕಮಾಂಡ್ ನಿರ್ಧಾರ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.


ಗೌರಿಬಿದನೂರು ತಾಲ್ಲೂಕಿನ ಅಲಕಪುರ ಹೆಲಿಪ್ಯಾಡ್‌ನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿ ಗಣತಿ ನಡೆದಿದ್ದು 2015ರಲ್ಲಿ. ಈಗ 10 ವರ್ಷಗಳಾಗಿವೆ. ಕೆಲವು ದೂರುಗಳು ಸಹ ಬಂದಿವೆ. ಆದ್ದರಿಂದ ಮರು ಸಮೀಕ್ಷೆ ನಡೆಸುವಂತೆ ಹೈಕಮಾಂಡ್ ನಿರ್ದೇಶನ ನೀಡಿದೆ ಎಂದು ಹೇಳಿದರು.

ಕಾಂತರಾಜು ವರದಿ ಸರ್ಕಾರಕ್ಕೆ ಸಲ್ಲಿಕೆ ಆಗಿದ್ದು ವರದಿಯನ್ನು ಪೂರ್ಣವಾಗಿ ಕಡೆಗಣಿಸಿಲ್ಲ. ಕೆಲವು ಬದಲಾವಣೆಗಳೊಂದಿಗೆ 60ರಿಂದ 70 ದಿನಗಳಲ್ಲಿ ಮರು ಸಮೀಕ್ಷೆ ನಡೆಸಲಾಗುತ್ತದೆ ಎಂದರು.

ವಿಧಾನ ಪರಿಷತ್ ಸದಸ್ಯರ ನಾಮನಿರ್ದೇಶನದ ವಿಚಾರದಲ್ಲಿ ಯಾವುದೇ ಗೊಂದಲ ಇಲ್ಲ. ಈ ಬಗ್ಗೆ ಚರ್ಚೆ ಮಾಡಬೇಕಿದೆ. ಆದ್ದರಿಂದ ಮುಂದೂಡಿದ್ದೇವೆ ಎಂದರು.

'ಮರು ಸಮೀಕ್ಷೆಗೆ ಬಿಜೆಪಿ ವಿರೋಧವೇಕೆ?'

ಪ್ರಜಾವಾಣಿ ವಾರ್ತೆ



ಶಿವಕುಮಾರ್

ಬೆಂಗಳೂರು: 'ಜಾತಿಗಣತಿ ವರದಿಯನ್ನು ವಿರೋಧಿಸಿದ ಬಿಜೆಪಿಯವರು, ಗೊಂದಲ ನಿವಾರಿಸಲು ಮರು ಸಮೀಕ್ಷೆ ನಡೆಸುವ ಸರ್ಕಾರದ ತೀರ್ಮಾನವನ್ನು ವಿರೋಧಿಸುತ್ತಿರುವುದೇಕೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ದೆಹಲಿಯಲ್ಲಿ ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಜಾತಿ ಗಣತಿ ವರದಿಯನ್ನು ಬಿಜೆಪಿಯವರು ತಮ್ಮ ಅವಧಿಯಲ್ಲಿ ಯಾಕೆ ಸ್ವೀಕರಿಸಲಿಲ್ಲ. ನಾವು ಈಗಾಗಲೇ ಸ್ವೀಕರಿಸಿರುವ ವರದಿಯನ್ನು ಬಳಸಿಕೊಂಡು, ಬಿಟ್ಟುಹೋಗಿರುವ ಅಂಕಿಅಂಶಗಳನ್ನು ಸೇರಿಸಲು ಅವಕಾಶ ನೀಡುತ್ತೇವೆ' ಎಂದರು.


'ನನ್ನನ್ನು ಭೇಟಿ ಮಾಡಿ ಜೈನ, ಲಂಬಾಣಿ, ಬೆಸ್ತ ಸೇರಿದಂತೆ ಅನೇಕ ಸಮುದಾಯದ ಜನರು ಈಗಾಗಲೇ ನಡೆದಿರುವ ಸಮೀಕ್ಷೆಯ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಪಕ್ಷದ ಶಾಸಕರೂ ತಮ್ಮ ಅಭಿಪ್ರಾಯ ತಿಳಿಸಿದ್ದರು. ವೈಜ್ಞಾನಿಕವಾಗಿ ಸಮೀಕ್ಷೆ ನಡೆದಿದ್ದರೂ ಅನೇಕರು ತಮ್ಮ ಸಮುದಾಯವನ್ನು ಹೇಳಿಕೊಳ್ಳಲು ಹಿಂದೇಟು ಹಾಕಿದ್ದರು. ಹೊಸದಾಗಿ ಸಮೀಕ್ಷೆ ನಡೆಸುವ ಕುರಿತಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಕೆಲವು ಮಾರ್ಗದರ್ಶನ ನೀಡಿದ್ದಾರೆ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸುತ್ತೇವೆ' ಎಂದು ಹೇಳಿದರು.

ಜಾತಿ ಗಣತಿ ವಿಚಾರದಲ್ಲಿ ಪ್ರಬಲ ಜಾತಿಗಳ ಒತ್ತಡಕ್ಕೆ ಪಕ್ಷ ಮಣಿಯಿತೇ ಎಂಬ ಪ್ರಶ್ನೆಗೆ, 'ನಾವು ಎಲ್ಲರ ಒತ್ತಡಕ್ಕೂ ಮಣಿದಿದ್ದೇವೆ. ಮಾಧ್ಯಮಗಳ ಒತ್ತಡಕ್ಕೂ ಮಣಿಯುತ್ತೇವೆ' ಎಂದರು.

'ವೀರಶೈವ, ಒಕ್ಕಲಿಗ ಸೇರಿದಂತೆ ವಿವಿಧ ಸಮುದಾಯಗಳ ಸ್ವಾಮೀಜಿಗಳು ಮರು ಸಮೀಕ್ಷೆ ನಡೆಸುವ ತೀರ್ಮಾನವನ್ನು ಸ್ವಾಗತಿಸಿದ್ದಾರೆ. ಎಲ್ಲ ಸಮಾಜಗಳ ಸ್ವಾಮೀಜಿಗಳು ತಮ್ಮ ಸಮುದಾಯದವರಿಗೆ ತಿಳಿವಳಿಕೆ ನೀಡಿ ಹೊಸ ಸಮೀಕ್ಷೆಯಲ್ಲಿ ಸರಿಯಾಗಿ ವಿವರ ನೀಡುವಂತೆ ಮನವಿ ಮಾಡಬೇಕು' ಎಂದರು. ಕೇಂದ್ರ ಸರ್ಕಾರ ಜನಗಣತಿ ಜತೆ ಜಾತಿಗಣತಿಯನ್ನೂ ಮಾಡಲು ಮುಂದಾಗಿರುವಾಗ ರಾಜ್ಯ ಸರ್ಕಾರ ಸಮೀಕ್ಷೆ ನಡೆಸುವ ಅಗತ್ಯ ಇದೆಯೇ ಎಂದು ಕೇಳಿದಾಗ, 'ಇದು ನಮ್ಮ ಪಕ್ಷದ ರಾಜಕೀಯ ಕಾರ್ಯಸೂಚಿ. ಇದನ್ನು ಬಿಜೆಪಿಯವರು ನಕಲು ಮಾಡಿದ್ದಾರೆ. ಜಾತಿಗಣತಿ ಮಾಡಿ ಹಿಂದುಳಿದ ವರ್ಗಗಳಿಗೆ ನ್ಯಾಯ ಕೊಡಬೇಕು ಎಂದು ರಾಹುಲ್ ಗಾಂಧಿ ಪ್ರತಿಪಾದಿಸಿದ್ದಾರೆ' ಎಂದು ಸಮರ್ಥನೆ ನೀಡಿದರು.

ಜಾತಿ ಗಣತಿ ವಿಚಾರದಲ್ಲಿ ಹೈಕಮಾಂಡ್ ಮಟ್ಟದಲ್ಲಿ ಶಿವಕುಮಾರ್ ಮೇಲುಗೈ ಸಾಧಿಸಿದರೇ ಎಂದು ಕೇಳಿದಾಗ, 'ಇದರಲ್ಲಿ ಯಾರ ಕೈ ಮೇಲಾಗುವ ವಿಚಾರವೂ ಇಲ್ಲ' ಎಂದರು.

'ಸಮುದಾಯಗಳ ಹಿತದೃಷ್ಟಿಯಿಂದ ಮರು ಸಮೀಕ್ಷೆ'



ಈಶ್ವರ ಖಂಡ್ರೆ

'ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಕೆಲವು ಸಮುದಾಯಗಳು ಅಪಸ್ವರ ಎತ್ತಿದ್ದವು. ಸಮುದಾಯಗಳ ಹಿತದೃಷ್ಟಿಯಿಂದ ಮರು ಸಮೀಕ್ಷೆ ನಡೆಸುವಂತೆ ವರಿಷ್ಠರು ಸೂಚನೆ ನೀಡಿದ್ದಾರೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮರು ಸಮೀಕ್ಷೆ ನಡೆಸಲು ತೀರ್ಮಾನ ತೆಗೆದುಕೊಳ್ಳುವ ಮೂಲಕ ನಾವು ಜನರ ಅಭಿಪ್ರಾಯಕ್ಕೆ ಮನ್ನಣೆ ನೀಡಿದ್ದೇವೆ' ಎಂದರು. 'ಜಾತಿ ಗಣತಿ ನಡೆಸುವ ವಿಚಾರ ನಮ್ಮ ಪಕ್ಷದ ಪ್ರಣಾಳಿಕೆಯಲ್ಲೇ ಹೇಳಿದ್ದೆವು. ಆ ಭರವಸೆಯನ್ನು ಈಡೇರಿಸುವುದು ನಮ್ಮ ಸರ್ಕಾರದ ಜವಾಬ್ದಾರಿ' ಎಂದೂ ಹೇಳಿದರು.

ಮರು ಸಮೀಕ್ಷೆ: ಸಂಪುಟ ಸಭೆಯಲ್ಲಿ ಚರ್ಚೆ- ತಂಗಡಗಿ



ಶಿವರಾಜ್ ತಂಗಡಗಿ

'ಗುರುವಾರ (ಜೂನ್ 12) ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಮರು ಸಮೀಕ್ಷೆಯ ಕುರಿತು ವಿಸ್ತೃತವಾದ ಚರ್ಚೆ ನಡೆಯಲಿದೆ' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಕಾಂತರಾಜು ನೇತೃತ್ವದ ಆಯೋಗ ನಡೆಸಿದ್ದ ಸಮೀಕ್ಷೆಯ ದತ್ತಾಂಶಗಳ ಬಗ್ಗೆಯೂ ಚರ್ಚೆಯಾಗಲಿದೆ. ಪಕ್ಷದ ವರಿಷ್ಠರು ಹಾಗೂ ಮುಖ್ಯಮಂತ್ರಿ ಹೇಳಿದ್ದನ್ನು ಪಾಲಿಸಬೇಕಿದೆ' ಎಂದರು.

'ಈಗಾಗಲೇ ನಡೆಸಿರುವ ಸಮೀಕ್ಷೆಯ ಬಗ್ಗೆ ಈ ಹಿಂದಿನ ಮೂರು ಸಚಿವ ಸಂಪುಟ ಸಭೆಗಳಲ್ಲಿ ಚರ್ಚೆ ನಡೆದಿದೆ. ಎಲ್ಲ ಸಚಿವರು ತಮ್ಮ ಸಲಹೆ ನೀಡಿದ್ದಾರೆ. ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಎಲ್ಲ ವಿಷಯಗಳನ್ನು ಕೂಲಂಕಷ ವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಹೇಳಿದರು. 'ಜಾತಿ ಗಣತಿ ಹಾಗೂ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಯ ಸಮೀಕ್ಷೆ ಎಂದು ಹೈಕಮಾಂಡ್ ಬಹಳ ಸ್ಪಷ್ಟವಾಗಿ ಹೇಳಿದೆ. ಈ ವಿಷಯದಲ್ಲಿ ಚರ್ಚೆ ನಡೆಸಲಾಗುವುದು' ಎಂದರು.

ಕಾಲ್ತುಳಿತ ದುರಂತ ಮುಚ್ಚಿಹಾಕಲು ಗಣತಿ: ಅಶೋಕ

'ಸಿದ್ದರಾಮಯ್ಯಗೆ ಕಪಾಳ ಮೋಕ್ಷ'

ಪ್ರಜಾವಾಣಿ ವಾರ್ತೆ



ಅಶೋಕ

ಬೆಂಗಳೂರು: 'ಮತ್ತೊಮ್ಮೆ ಜಾತಿ ಗಣತಿ ನಡೆಸುವಂತೆ ಸೂಚಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಕಪಾಳಮೋಕ್ಷ ಮಾಡಿದೆ. ಇದು ಸಿದ್ದರಾಮಯ್ಯ ಅವರ ಸೋಲು ಮತ್ತು ಡಿ.ಕೆ.ಶಿವಕುಮಾರ್ ಗೆಲುವು' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ನಾವೆಲ್ಲರೂ ವಿರೋಧಿಸಿದ್ದೆವು. ಜನರೂ ವಿರೋಧಿಸಿದ್ದರು. ಸಮೀಕ್ಷೆ ಸರಿ ಇಲ್ಲ ಎಂದು ಹೇಳಿ ಕಾಂಗ್ರೆಸ್ ಹೈಕಮಾಂಡ್ ತಿರಸ್ಕರಿಸಿದೆ. ಇದು ಸಿದ್ದರಾಮಯ್ಯ ಅವರಿಗೆ ಆಗಿರುವ ದೊಡ್ಡ ಹಿನ್ನಡೆ' ಎಂದು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

'ಈ ಹಿಂದೆ ಖರ್ಚು ಮಾಡಿದ್ದ ₹160 ಕೋಟಿ ವ್ಯರ್ಥವಾಗಿದೆ. ಮರು ಸಮೀಕ್ಷೆ ನಡೆಸಲು ಸರ್ಕಾರದ ಬಳಿ ಹಣ ಇಲ್ಲ. ಇದಕ್ಕೆ ಸರ್ಕಾರ ಉತ್ತರ ನೀಡಬೇಕು' ಎಂದು ಅಶೋಕ ಒತ್ತಾಯಿಸಿದರು.

'ಕಾಲ್ತುಳಿತದಲ್ಲಿ 11 ಜನ ಮೃತಪಟ್ಟ ಘಟನೆಯನ್ನು ಮುಚ್ಚಿಹಾಕುವ ಉದ್ದೇಶದಿಂದ ಹೊಸ ಜನಗಣತಿಯ ನಾಟಕ ಆರಂಭಿಸಿದ್ದಾರೆ' ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ಅವರಿಗೆ ಪ್ರಶ್ನೆಗಳು:

'ತಪ್ಪು ದತ್ತಾಂಶ ಆಧರಿಸಿ ವರ್ಗೀಕರಣ'



ಸುನಿಲ್ ಕುಮಾರ್

'ಕೇಂದ್ರ ಸರ್ಕಾರ ಈಗಾಗಲೇ ಜನಗಣತಿ ಜತೆ ಜಾತಿಗಣತಿ ನಡೆಸುವುದಾಗಿ ಪ್ರಕಟಿಸಿದೆ. ಕೇಂದ್ರವೇ ಜಾತಿಗಣತಿ ನಡೆಸುತ್ತಿರುವಾಗ ರಾಜ್ಯ ಸರ್ಕಾರ ಮತ್ತೊಂದು ಜಾತಿಗಣತಿ ನಡೆಸುವ ಅಗತ್ಯ ಇದೆಯೆ' ಎಂದು ಶಾಸಕ ವಿ.ಸುನಿಲ್‌ಕುಮಾರ್ ಪ್ರಶ್ನಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯ ಸರ್ಕಾರವು ಕೇಂದ್ರ ನಡೆಸುವ ಜಾತಿ ಗಣತಿ–ಜನಗಣತಿಗೆ ಸಹಕಾರ ನೀಡಬೇಕು. ಕಾಂಗ್ರೆಸ್ ಸರ್ಕಾರ ತನ್ನ ಅನುಕೂಲಕ್ಕೆ ತಕ್ಕಂತೆ ಒಬಿಸಿಯವರನ್ನು ಬಳಸಿಕೊಳ್ಳುವುದು ಮತ್ತು ಜನರ ದಿಕ್ಕು ತಪ್ಪಿಸುವುದನ್ನು ಕೈಬಿಡಬೇಕು' ಎಂದು ಆಗ್ರಹಿಸಿದರು.

ದುರಂತದ ಕುರಿತ ನೈಜ ಪ್ರಶ್ನೆಗಳಿಗೆ ಉತ್ತರ ನೀಡಲು ವಿಫಲವಾದ ಕಾಂಗ್ರೆಸ್ ಸರ್ಕಾರ ತನ್ನ ಆತ್ಮರಕ್ಷಣೆಗಾಗಿ ಜಾತಿ ಗಣತಿಯ ನಾಟಕ ಆರಂಭಿಸಿದೆ

ಛಲವಾದಿ ನಾರಾಯಣಸ್ವಾಮಿ,
ವಿರೋಧಪಕ್ಷದ ನಾಯಕ, ವಿಧಾನಪರಿಷತ್ತು

- 90 ದಿನಗಳ ಕಾಲಮಿತಿಯಲ್ಲಿ ಸಮೀಕ್ಷೆ ನಡೆಸುವುದಾಗಿ ಹೇಳಿದ್ದಾರೆ. ಶಾಲೆಗಳು ಈಗಾಗಲೇ ಆರಂಭ ಆಗಿವೆ. ಇಂತಹ ಸಮಯದಲ್ಲಿ ಸಮೀಕ್ಷೆಯಂತಹ ಬೃಹತ್ ಕಾರ್ಯಕ್ಕೆ ಶಿಕ್ಷಕರನ್ನು ಬಳಸಿದರೆ ಶೈಕ್ಷಣಿಕ ಚಟುವಟಿಕೆಗಳು ಸಂಪೂರ್ಣ ಬುಡಮೇಲಾಗುತ್ತವೆ. ಹೀಗಾಗಿ 90 ದಿನಗಳಲ್ಲಿ ಸಮೀಕ್ಷೆ ನಡೆಸಲು ಸರ್ಕಾರ ಯಾರನ್ನು ನಿಯೋಜಿಸಲಿದೆ?
- ಆನ್‌ಲೈನ್ ಮೂಲಕ ಸಮೀಕ್ಷೆ ನಡೆಸುವ ಚಿಂತನೆ ಅವಿವೇಕತನದ್ದು. ಸಾಕಷ್ಟು ಜನ ಆನ್‌ಲೈನ್ ವ್ಯವಸ್ಥೆಯಿಂದ ದೂರ ಉಳಿದಿದ್ದಾರೆ. ಹೀಗಿರುವಾಗ ಆನ್‌ಲೈನ್ ಸಮೀಕ್ಷೆ ಹೇಗೆ ಸಾಧ್ಯ? ಇದರಿಂದ ಮಾಹಿತಿಯ ನಿಖರತೆ ಮತ್ತು ಗುರುತು ಪತ್ತೆ ಹೇಗೆ ಸಾಧ್ಯವಾಗುತ್ತದೆ? ತಪ್ಪು ದಾಖಲಾತಿಗಳನ್ನು ತಡೆಯಲು ಏನು ಕ್ರಮ ತೆಗೆದುಕೊಳ್ಳಲಿದೆ?
- ಈ ಹಿಂದೆ ನಡೆದ ಕಾಂತರಾಜು–ಜಯಪ್ರಕಾಶ್ ಹೆಗ್ಡೆ ಅವರ ಚೌಚೌ ವರದಿಗೆ ಈಗ ಎಳ್ಳು–ನೀರು ಬಿಟ್ಟಂತಾಗಿದೆ. ಆ ವರದಿಗೆ ತೆರಿಗೆದಾರರ ₹167 ಕೋಟಿ ವೆಚ್ಚವಾಗಿದೆ. ವ್ಯರ್ಥವಾದ ಹಣವನ್ನು ಯಾರಿಂದ ವಸೂಲಿ ಮಾಡುತ್ತಾರೆ?

ಯುವಕನಿಗೆ ಕೋಳ ಭಾರತದ ಆಕ್ಷೇಪ

ನವದೆಹಲಿ (ಪಿಟಿಐ): ನ್ಯೂಯಾರ್ಕ್ ವಿಮಾನ ನಿಲ್ದಾಣದಲ್ಲಿ ಭಾರತೀಯ ಯುವಕನೊಬ್ಬನಿಗೆ ಕೋಳ ತೊಡಿಸಿ, ಅಪರಾಧಿಯಂತೆ ನಡೆಸಿಕೊಂಡ ಘಟನೆಗೆ ಸಂಬಂಧಿಸಿ ಭಾರತವು ಅಮೆರಿಕಕ್ಕೆ ತನ್ನ ಆಕ್ಷೇಪವನ್ನು ದಾಖಲಿಸಿದೆ.

'ಯುವಕ ಹರಿಯಾಣದವರು. ವೀಸಾ ಇದ್ದರೂ ಅಕ್ರಮವಾಗಿ ಅಮೆರಿಕ ಪ್ರವೇಶ ಮಾಡಿದ ಆರೋಪದಲ್ಲಿ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ನ್ಯಾಯಾಲಯದ ಆದೇಶದಂತೆಯೇ ಅತನನ್ನು ಭಾರತಕ್ಕೆ ವಾಪಸ್ ಕಳುಹಿಸಲಾಗುತ್ತಿದೆ' ಎನ್ನುವ ಮಾಹಿತಿಯನ್ನು ನ್ಯೂಯಾರ್ಕ್‌ನಲ್ಲಿರುವ ಭಾರತದ ಕಾನ್ಸುಲೇಟ್ ಅಧಿಕಾರಿಗಳು ಖಚಿತಪಡಿಸಿದ್ದಾರೆ.

'ಇದೇ ವಿಚಾರವಾಗಿ ನವದೆಹಲಿಯಲ್ಲಿರುವ ಅಮೆರಿಕ ರಾಯಭಾರ ಕಚೇರಿಗೆ ವಿದೇಶಾಂಗ ಸಚಿವಾಲಯವು ತನ್ನ ಆಕ್ಷೇಪವನ್ನು ವ್ಯಕ್ತಪಡಿಸಿದೆ. ಯುವಕನನ್ನು ನೆಲದ ಮೇಲೆ ಮಲಗಿಸಿ ಕೋಳ ತೊಡಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಅನಾರೋಗ್ಯ: 'ಭಾರತಕ್ಕೆ ವಾಪಸು ಕಳುಹಿಸುತ್ತಿದ್ದ ವೇಳೆ ಯುವಕನಿಗೆ ಆರೋಗ್ಯ ಸರಿ ಇಲ್ಲ ಎಂಬುದು ಕಂಡುಬಂದ ಕಾರಣ, ಅತನನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಬಳ್ಳಾರಿ – ಚಿಕ್ಕಜಾಜೂರು: 186 ಕಿ.ಮೀ ಉದ್ದದ ರೈಲು ಮಾರ್ಗ

ಜೋಡಿಹಳಿ ಮಾರ್ಗಕ್ಕೆ ಒಪ್ಪಿಗೆ

₹6,405 ಕೋಟಿ ಯೋಜನೆಗೆ ವೆಚ್ಚ

- ಜಾರ್ಖಂಡ್, ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಏಳು ಜಿಲ್ಲೆಗಳ 1,408 ಗ್ರಾಮಗಳಿಗೆ ಸಂಪರ್ಕ
- ದೇಶದಲ್ಲಿರುವ ರೈಲು ಮಾರ್ಗದ ಒಟ್ಟು ಜಾಲ 318 ಕಿ.ಮೀನಷ್ಟು ವಿಸ್ತರಣೆ
- ವಾರ್ಷಿಕವಾಗಿ 4.9 ಕೋಟಿ ಟನ್ ಸರಕು ಸಾಗಣೆ ಸಾಧ್ಯ. ಕಲ್ಲಿದ್ದಲು, ಕಬ್ಬಿಣದ ಅದಿರು, ಉಕ್ಕು, ಸಿಮೆಂಟ್, ರಸಗೊಬ್ಬರಗಳು, ಕೃಷಿ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಸಾಗಾಟಕ್ಕೆ ಅನುಕೂಲ

ನವದೆಹಲಿ (ಪಿಟಿಐ): ಕರ್ನಾಟಕದ ಬಳ್ಳಾರಿ–ಚಿಕ್ಕಜಾಜೂರು ರೈಲು ಮಾರ್ಗದ ಸುಮಾರು 186 ಕಿ.ಮೀ ಉದ್ದಕ್ಕೆ ರೈಲ್ವೆ ಜೋಡಿಹಳಿ ಮಾರ್ಗ ನಿರ್ಮಾಣ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಬುಧವಾರ ಒಪ್ಪಿಗೆ ನೀಡಿದೆ.

ಜೊತೆಗೆ, ಕೊಡರಮಾ–ಬಡಕಾಕಾನ ರೈಲು ಮಾರ್ಗದ 133 ಕಿ.ಮೀ ಉದ್ದಕ್ಕೂ ಜೋಡಿಹಳಿ ನಿರ್ಮಾಣಕ್ಕೆ ಸಮಿತಿ ಒಪ್ಪಿಗೆ ನೀಡಿದೆ. ಕಲ್ಲಿದ್ದಲು ಉತ್ಪಾದನೆಯ ಪ್ರಮುಖ ಪ್ರದೇಶವಾದ ಕೊಡರಮಾದಿಂದ ಬಡಕಾಕಾನವರೆಗಿನ ರೈಲು ಮಾರ್ಗವು ಬಿಹಾರದ ಪಟ್ನಾ ಮತ್ತು ಜಾರ್ಖಂಡ್‌ನ ರಾಂಚಿ ನಗರಗಳಿಗೆ ಇರುವ ಹತ್ತಿರ ರೈಲು ಮಾರ್ಗವಾಗಿದೆ. ಬಳ್ಳಾರಿ–ಚಿಕ್ಕಜಾಜೂರು ರೈಲು ಮಾರ್ಗವು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯನ್ನೂ ಹಾದು ಹೋಗುತ್ತದೆ.



ಪರಿಸರ ಪ್ರಯೋಜನ: **52** ಕೋಟಿ ಲೀಟರ್ ತೈಲ ಆಮದು ಕಡಿತ | **264** ಕೋಟಿ ಕೆ.ಜಿ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆ ಕಡಿತ

'ಆತ್ಮನಿರ್ಭರ' ಅಭಿವೃದ್ಧಿ

ಪ್ರಧಾನಮಂತ್ರಿ ಗತಿ ಶಕ್ತಿ ರಾಷ್ಟ್ರೀಯ ಯೋಜನೆಯ ಫಲವಾಗಿ ಈ ಯೋಜನೆಗಳಿಗೆ ಒಪ್ಪಿಗೆ ನೀಡಲಾಗಿದೆ. ಹಲವು ಸ್ತರದ ಸಾರಿಗೆಗಾಗಿ ಸಂಪರ್ಕ ಸಾಧಿಸುವುದು ಇದರ ಉದ್ದೇಶ. ಜನರು ಹಾಗೂ ಸರಕು ಸಾಗಣೆಗೆ ಈ ಯೋಜನೆಗಳಿಂದ ತಡೆರಹಿತ ಸಂಚಾರ ಸಾಧ್ಯವಾಗಲಿದೆ. ರೈಲು ಮಾರ್ಗವು ಹಾದು ಹೋಗುವ ಪ್ರದೇಶಗಳು 'ಆತ್ಮನಿರ್ಭರ'ವಾಗಿ ಅಭಿವೃದ್ಧಿ ಕಾಣಲಿದೆ. ಇದರಿಂದ ಉದ್ಯೋಗ ಮತ್ತು ಸ್ವ ಉದ್ಯೋಗ ಅವಕಾಶಗಳು ವೃದ್ಧಿಯಾಗಲಿವೆ

ರೈಲ್ವೆ ಸಚಿವಾಲಯ

ಭದ್ರತಾ ಸಿಬ್ಬಂದಿ ಮೇಲೆ ಗುಂಡು ಹಾರಿಸಿದ್ದ ಘಟನೆ

ಟೆಂಗೋಲ್ ಸಂಘಟನೆ ಸದಸ್ಯನ ಬಂಧನ

ಇಂಫಾಲ್ (ಪಿಟಿಐ): ಮೈತೇಯಿ ಸಂಘಟನೆಯ ನಾಯಕರ ಬಂಧನ ವಿರೋಧಿಸಿ ನಡೆದಿದ್ದ ಪ್ರತಿಭಟನೆ ಸಂದರ್ಭದಲ್ಲಿ ಭದ್ರತಾ ಸಿಬ್ಬಂದಿ ಮೇಲೆ ಗುಂಡು ಹಾರಿಸಿದ್ದ ಆರಂಬಾಯ್ ಟೆಂಗೋಲ್ ಸಂಘಟನೆ ಸದಸ್ಯರೊಬ್ಬನನ್ನು ಬಂಧಿಸಿರುವ ಮಣಿಪುರ ಪೊಲೀಸರು, 19 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಇಂಫಾಲ್ ಸೇರಿ ಹಲವು ಜಿಲ್ಲೆಗಳಲ್ಲಿ ನಡೆದ ಹಿಂಸಾಚಾರದಲ್ಲಿ ಭಾಗಿಯಾದ ಆರೋಪದ ಮೇಲೆ 19 ಮಂದಿಯನ್ನು ವಿಚಾರಣೆ ನಡೆಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಜೂನ್ 9ರಂದು ಪಶ್ಚಿಮ ಇಂಫಾಲ್‌ನ ಟೆರಾ ಸಪರ್ಮ ಪ್ರದೇಶದಲ್ಲಿ ರಸ್ತೆ ತಡೆ ತೆರವು ಮಾಡುತ್ತಿದ್ದ ಪೊಲೀಸರ ಮೇಲೆ ಸಂಘಟನೆಯ ರಾಜ್ ಅಲಿಯಾಸ್ ಚೋಯ್ಬಾ ಪಾಂಗೈಜಮ್ ಎಂಬುವರು ಪಿಸ್ತೂಲಿನಿಂದ ದಾಳಿ ನಡೆಸಿದ್ದರು ಎಂದು ಆರೋಪಿಸಲಾಗಿದೆ. ನ್ಯಾಯಾಲಯವು ಆರೋಪಿಯನ್ನು ಎಂಟು ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಕನನ್ ಸಿಂಗ್ ಸೇರಿ ಐವರ ಬಂಧನ ವಿರೋಧಿಸಿ ಮಣಿಪುರದಲ್ಲಿ ಶನಿವಾರದಿಂದ ಭಾರಿ ಹಿಂಸಾಚಾರ ನಡೆದಿತ್ತು.

'ಮಣಿಪುರದಲ್ಲಿ ಸರ್ಕಾರ; ಕೇಂದ್ರದ ಒಲವು'

ನವದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿದ್ದ ಮಣಿಪುರದ ಮಾಜಿ ಮುಖ್ಯಮಂತ್ರಿ ಬಿರೇನ್ ಸಿಂಗ್, 'ಜನರ ಆಶಯದಂತೆಯೇ ಮಣಿಪುರದಲ್ಲಿ ಚುನಾಯಿತ ಸರ್ಕಾರ ಸ್ಥಾಪನೆಯನ್ನು ಕೇಂದ್ರ ಸರ್ಕಾರ ಬಯಸುತ್ತಿದೆ' ಎಂದಿದ್ದಾರೆ.

ರಾಜ್ಯಸಭೆ ಸದಸ್ಯ ಲೈಶೆಂಬಾ ಸನಾಜಾವೊಬಾ ಅವರೊಂದಿಗೆ ಬಿಜೆಪಿಯ ಕೇಂದ್ರ ನಾಯಕರನ್ನು ಬಿರೇನ್ ಸಿಂಗ್ ಸೋಮವಾರ ಮತ್ತು ಮಂಗಳವಾರ ಭೇಟಿಯಾಗಿ ಮಣಿಪುರದ ಸದ್ಯದ ಪರಿಸ್ಥಿತಿ ಬಗ್ಗೆ ವಿವರಿಸಿದ್ದರು.

'ಜೂನ್ 9ರಂದು ರಾತ್ರಿ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದೆವು. ಮರು ದಿನ ಒಂದು ಗಂಟೆಗೂ ಹೆಚ್ಚು ಕಾಲ ಮತ್ತೊಮ್ಮೆ ಮಾತುಕತೆ ನಡೆಸಿದೆ. ಬಂದ್ ಪರಿಸ್ಥಿತಿ, ಜನರ ಸ್ಥಳಾಂತರ ಹೆದ್ದಾರಿಗಳಲ್ಲಿ ಸುಲಭ ಸಂಚಾರಕ್ಕೆ ಇರುವ ನಿರ್ಬಂಧಗಳ ಬಗ್ಗೆ ವಿವರಿಸಿದ್ದೇನೆ' ಎಂದು ಸಿಂಗ್ ತಿಳಿಸಿದರು. ದೆಹಲಿಯಿಂದ ಬುಧವಾರ ವಾಪಸಾದ ಅವರು ಇಂಫಾಲ್ ವಿಮಾನ ನಿಲ್ದಾಣದಲ್ಲಿ ಮಾತನಾಡಿದರು. 'ಮಣಿಪುರದ ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದೇವೆ. ಕೇಂದ್ರವು ಸರ್ಕಾರ ಪುನರ್ ಸ್ಥಾಪನೆ ನಿಟ್ಟಿನಲ್ಲಿ ಆಲೋಚಿಸುತ್ತಿದೆ ಎಂದು ಭರವಸೆ ಅಮಿತ್ ಶಾ ಅವರಿಂದ ಸಿಕ್ಕಿದೆ. ವಿವಿಧ ಸಮುದಾಯಗಳ ಪ್ರತಿನಿಧಿಗಳ ಜತೆ ಸಭೆ ನಡೆಸುವ ಪ್ರಕ್ರಿಯೆ ನಡೆದಿದೆ' ಎಂದು ಸಿಂಗ್ ತಿಳಿಸಿದರು.

2025ರ ಫೆಬ್ರುವರಿ 9ರಂದು ಬಿರೇನ್ ಸಿಂಗ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. 13ರಂದು ರಾಷ್ಟ್ರಪತಿ ಆಳ್ವಿಕೆ ಹೇರಲಾಗಿತ್ತು.

ರೈಲ್ವೆ: 24 ಗಂಟೆ ಮುನ್ನವೇ ಸೀಟು ಖಾತರಿ

ಒಂದನೇ ಪುಟದಿಂದ...

'ಟಿಕೆಟ್ ಪಡೆದಿದ್ದರೂ, ಆಸನ ಹಂಚಿಕೆ ಖಾತರಿಯಾಗದೇ ಇರುವುದರಿಂದ ತಮ್ಮ ಪ್ರಯಾಣದ ಬಗ್ಗೆ ಅನಿಶ್ಚಿತತೆ ಹೊಂದಿದ ಪ್ರಯಾಣಿಕರನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಇದರಿಂದ ಅವರಿಗೆ ಅನುಕೂಲವಾಗಲಿದೆ' ಎಂದು ಅವರು ಹೇಳಿದ್ದಾರೆ.

ಪ್ರಯಾಣದ ಟಿಕೆಟ್ ಖಚಿತಗೊಂಡ ನಂತರ ಪ್ರಯಾಣಿಕರು ಅದನ್ನು ರದ್ದುಗೊಳಿಸಿದರೆ, ಪಾವತಿಸಿದ ಮೊತ್ತದಲ್ಲಿ ಹೆಚ್ಚಿನ ಭಾಗವನ್ನು ಕಳೆದುಕೊಳ್ಳಲಿದ್ದಾರೆ.

ರದ್ದತಿ ನೀತಿಯ ಪ್ರಕಾರ ರೈಲು ಹೊರಡುವ 12ರಿಂದ 48 ಗಂಟೆಗೂ ಮುನ್ನ ಟಿಕೆಟ್ ರದ್ದುಗೊಳಿಸಿದರೆ ಶೇಕಡ 50ರಷ್ಟು ಹಣವನ್ನಷ್ಟೆ ಪ್ರಯಾಣಿಕರು ಪಡೆಯಲಿದ್ದಾರೆ. ನಾಲ್ಕರಿಂದ 12 ಗಂಟೆ ಮುಂಚೆ ರದ್ದುಗೊಳಿಸಿದರೆ ಶೇ 25ರಷ್ಟನ್ನು ಮಾತ್ರ ಪಡೆಯಲಿದ್ದಾರೆ. ರದ್ದತಿಯಿಂದ ಖಾಲಿಯಾಗುವ ಆಸನಗಳನ್ನು ಬುಕಿಂಗ್ ವ್ಯವಸ್ಥೆಯ ಮೂಲಕ ಭರ್ತಿ ಮಾಡಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತತ್ಕಾಲ್: 'ಆಧಾರ್' ಕಡ್ಡಾಯ

ಒಂದನೇ ಪುಟದಿಂದ...

ಇಂಡಿಯನ್ ರೈಲ್ವೆ ಕೇಟರಿಂಗ್ ಆ್ಯಂಡ್ ಟೂರಿಸಂ ಕಾರ್ಪೊರೇಷನ್ (ಐಆರ್‌ಸಿಟಿಸಿ) ವೆಬ್‌ಸೈಟ್ ಮತ್ತು ಅದರ ಆ್ಯಪ್‌ಗಳ ಮೂಲಕ ಆಧಾರ್ ದೃಢೀಕರಿಸಿದ ಬಳಕೆದಾರರು ಮಾತ್ರ ಜುಲೈ 1ರಿಂದ ಟಿಕೆಟ್ ಬುಕ್ ಮಾಡಿಕೊಳ್ಳಬಹುದು ಎಂದು ಸಚಿವಾಲಯವು ತಿಳಿಸಿದೆ.

ತತ್ಕಾಲ್ ಟಿಕೆಟ್ ಬುಕ್ಕಿಂಗ್‌ಗೆ ಆಧಾರ್ ಆಧಾರಿತ ಒಟಿಪಿಯ ದೃಢೀಕರಣವನ್ನು ಜುಲೈ 15ರಿಂದ ಕಡ್ಡಾಯಗೊಳಿಸಲಾಗುವುದು ಎಂದಿದೆ. ತತ್ಕಾಲ್ ಟಿಕೆಟ್ ಬುಕ್ಕಿಂಗ್‌ನ ವಿಂಡೋ ತೆರೆದ ಮೊದಲ 30 ನಿಮಿಷಗಳಲ್ಲಿ ಭಾರತೀಯ ರೈಲ್ವೆಯ ಅಧಿಕೃತ ಟಿಕೆಟಿಂಗ್ ಏಜೆಂಟರು ಟಿಕೆಟ್ ಬುಕ್ ಮಾಡಲು ಅವಕಾಶವಿರುವುದಿಲ್ಲ ಎಂದು ಸುತ್ತೋಲೆ ತಿಳಿಸಿದೆ.

ದೇಶದ ಭದ್ರತೆ, ವಿದೇಶಾಂಗ ನೀತಿ ಸವಾಲುಗಳ ಚರ್ಚೆಗೆ ಕಾಂಗ್ರೆಸ್ ಆಗ್ರಹ

ಪೂರ್ಣ ಚರ್ಚೆಗೆ ಮೋದಿ ಒಪ್ಪುವರೇ..?

ನವದೆಹಲಿ (ಪಿಟಿಐ): ವಿದೇಶಗಳಿಗೆ ಭೇಟಿ ನೀಡಿದ್ದ ಸಂಸದರ ನಿಯೋಗದೊಂದಿಗೆ ಚರ್ಚೆ ನಡೆಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಪಹಲ್ಗಾಮ್ ದಾಳಿ ನಂತರ ದೇಶದ ಭದ್ರತೆ ಮತ್ತು ವಿದೇಶಾಂಗ ನೀತಿಗೆ ಎದುರಾಗಿರುವ ಸವಾಲುಗಳ ಬಗ್ಗೆ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಪೂರ್ಣ ಪ್ರಮಾಣದ ಚರ್ಚೆಗೆ ಒಪ್ಪಿಕೊಳ್ಳುವರೇ ಎಂದು ಕಾಂಗ್ರೆಸ್ ಬುಧವಾರ ಪ್ರಶ್ನಿಸಿದೆ.



ಜೈರಾಮ್ ರಮೇಶ್

ಚೀನಾ ಮತ್ತು ಪಾಕಿಸ್ತಾನ ರಾಷ್ಟ್ರಗಳಿಗೆ ಎದುರು–ಬದುರಾಗಿ ಭಾರತ ಕೈಗೊಳ್ಳಬಹುದಾದ ಭವಿಷ್ಯದ ರಣತಂತ್ರಗಳ ಬಗ್ಗೆ ಸರ್ವ ಪಕ್ಷಗಳ ಸಭೆಯಲ್ಲಿ ಚರ್ಚಿಸಿ ಎಲ್ಲರನ್ನೂ ವಿಶ್ವಾಸಕ್ಕೆ ತಗೆದುಕೊಳ್ಳಲಿದ್ದಾರೆಯೇ ಎಂದು ವಿರೋಧ ಪಕ್ಷ ಕಾಂಗ್ರೆಸ್ ಕೇಳಿದೆ.

ಭಯೋತ್ಪಾದನೆ ಬಗೆಗಿನ ಭಾರತದ ಶೂನ್ಯ ಸಹಿಷ್ಣು ನೀತಿ ಮತ್ತು ಪಾಕಿಸ್ತಾನದ ಪ್ರಚೋದನೆ ಬಗ್ಗೆ ಜಗತ್ತಿನ ವಿವಿಧ ರಾಷ್ಟ್ರಗಳಿಗೆ ಮನವರಿಕೆ ಮಾಡಿಕೊಟ್ಟು ವಾಪಸ್ ಆಗಿರುವ ಸರ್ವಪಕ್ಷಗಳ ಸಂಸದರು, ವಿದೇಶಾಂಗ ಇಲಾಖೆಯ ಮಾಜಿ ಅಧಿಕಾರಿಗಳ ಜತೆ ಮಂಗಳವಾರ ಪ್ರಧಾನಿ ಮೋದಿ ಸಮಾಲೋಚಿಸಿದ್ದರು.

ಈ ಬಗ್ಗೆ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, 'ಸಂಸದರ ನಿಯೋಗಗಳ ಜತೆ ಪ್ರಧಾನಿ ಖುದ್ದು ಚರ್ಚಿಸಿದ್ದಾರೆ. ಈಗಲಾದರೂ ಸರ್ವಪಕ್ಷಗಳ ನಾಯಕರ ಸಭೆ ಕರೆದು ಪಾಕಿಸ್ತಾನ ಮತ್ತು ಚೀನಾ ಎದುರು ಭವಿಷ್ಯದ ರಣತಂತ್ರ, ಅವುಗಳ ಪರಿಣಾಮ, ಆಪರೇಷನ್ ಸಿಂಧೂರ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಸೇನಾಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಅವರು ಸಿಂಗಪುರದಲ್ಲಿ ಬಹಿರಂಗಪಡಿಸಿದ್ದ ಸಂಗತಿಗಳ ಕುರಿತು ಚರ್ಚಿಸುವರೇ' ಎಂದು ಪ್ರಶ್ನಿಸಿದ್ದಾರೆ.

'ಪಾಕಿಸ್ತಾನದ ಜೊತೆಗಿನ ಸಂಘರ್ಷ ಸಂದರ್ಭದಲ್ಲಿ ಯುದ್ಧ ವಿಮಾನಗಳನ್ನು ಕಳೆದುಕೊಂಡ ನಂತರ ನಮ್ಮ ತಂತ್ರಗಾರಿಕೆಯನ್ನು ಸರಿಪಡಿಸಿಕೊಂಡು ಆ ದೇಶದ ಒಳನುಗ್ಗಿ ದಾಳಿ ಮಾಡಿದೆವು' ಎಂದು ಅನಿಲ್ ಚೌಹಾಣ್ ಸಿಂಗಪುರದಲ್ಲಿ ಹೇಳಿದ್ದರು.

ಪ್ರಧಾನಿಗೆ ಕಾಂಗ್ರೆಸ್ ಪ್ರಶ್ನೆಗಳು

- ಪಹಲ್ಗಾಮ್ ದಾಳಿಯ ಉಗ್ರರನ್ನು ಹಿಡಿದು ತರುತ್ತೀರಾ?
- ಕಾರ್ಗಿಲ್ ಪರಿಶೀಲನಾ ಸಮಿತಿಯಂತೆ 'ಆಪರೇಷನ್ ಸಿಂಧೂರ' ಸಮಿತಿ ರಚಿಸುವಿರಾ?
- ಭವಿಷ್ಯದ ಯುದ್ಧ ಕಾರ್ಯತಂತ್ರಗಳ ಬಗ್ಗೆ ಸಮಿತಿಯ ಶಿಫಾರಸು ಪಡೆಯುವಿರಾ?
- ಸಂಘರ್ಷ ನಿಲ್ಲಿಸಿದೆ ಎನ್ನುವ ಡೊನಾಲ್ಡ್ ಟ್ರಂಪ್ ಹೇಳಿಕೆಯನ್ನು ಒಪ್ಪಿಕೊಳ್ಳುವಿರಾ?

ಆಸ್ತಿ ವಿವರ: ಪ್ರಿಯಾಂಕಾಗೆ ನೋಟಿಸ್

ಕೊಚ್ಚಿ (ಪಿಟಿಐ): ನಾಮಪತ್ರದಲ್ಲಿ ತಮ್ಮ ಆಸ್ತಿ ವಿವರಗಳನ್ನು ತಪ್ಪಾಗಿ ನಮೂದಿಸಿದ್ದಾರೆ ಎಂದು ಆರೋಪಿಸಿ ಸಲ್ಲಿಕೆಯಾಗಿರುವ ಅರ್ಜಿಗೆ ಸಂಬಂಧಿಸಿ ಪ್ರತಿಕ್ರಿಯೆ ನೀಡುವಂತೆ ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ಕೇರಳ ಹೈಕೋರ್ಟ್ ನಿರ್ದೇಶನ ನೀಡಿದೆ.

ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ಕಳೆದ ವರ್ಷ ನಡೆದ ಉಪ ಚುನಾವಣೆಯಲ್ಲಿ ಪ್ರಿಯಾಂಕಾ ಅವರ ವಿರುದ್ಧ ಬಿಜೆಪಿಯಿಂದ ನವ್ಯಾ ಹರಿದಾಸ್ ಸ್ಪರ್ಧಿಸಿದ್ದರು. ಪ್ರಿಯಾಂಕಾ ಅವರು ಆಸ್ತಿ ವಿವರಗಳನ್ನು ತಪ್ಪಾಗಿ ನಮೂದಿಸಿದ್ದಾರೆ ಎಂದು ಆರೋಪಿಸಿ ನವ್ಯಾ ಅವರೇ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ.

ಆಗಸ್ಟ್‌ನಲ್ಲಿ ಈ ಅರ್ಜಿಯ ಮುಂದಿನ ವಿಚಾರಣೆ ನಡೆಯಲಿದೆ.



ದಾಲ್ ಸರೋವರದಲ್ಲಿ ನಡೆದ ಶಿಕಾರ ರೇಸ್‌ನಲ್ಲಿ ಪಾಲ್ಗೊಂಡಿದ್ದ ನಾವಿಕರು

ಕಾಶ್ಮೀರ ಪ್ರವಾಸೋದ್ಯಮ ಪುನಶ್ಚೇತನಕ್ಕೆ ಶಿಕಾರ ರೇಸ್

ಶ್ರೀನಗರ (ಪಿಟಿಐ): ಪಹಲ್ಗಾಮ್ ದಾಳಿ ಬಳಿಕ ಕುಸಿತಗೊಂಡಿರುವ ಜಮ್ಮು–ಕಾಶ್ಮೀರದ ಪ್ರವಾಸೋದ್ಯಮವನ್ನು ಪುನಶ್ಚೇತನಗೊಳಿಸುವ ಭಾಗವಾಗಿ ಬುಧವಾರ ಸುಪ್ರಸಿದ್ಧ ದಾಲ್ ಸರೋವರದಲ್ಲಿ ಶಿಕಾರ ರೇಸ್ ಆಯೋಜಿಸಲಾಗಿತ್ತು.

ಚಂಡೀಗಢ ಮೂಲದ ಖಾಸಗಿ ಕಾಲೇಜುಗಳ ಕೆಲವು ಗುಂಪುಗಳು ಸೇರಿ ಈ ಕಾರ್ಯಕ್ರಮ ಆಯೋಜಿಸಿದ್ದವು. ಜಮ್ಮು–ಕಾಶ್ಮೀರ ಶಿಕ್ಷಣ ಸಚಿವೆ ಸಕೀನಾ ಇಟೂ ಅವರು ರೇಸ್‌ಗೆ ಚಾಲನೆ ನೀಡಿದರು.

ಕಾರ್ಯಕ್ರಮ ಆಯೋಜಿಸಿದ ವಿದ್ಯಾರ್ಥಿಗಳು ಹಾಗೂ ಶಿಕ್ಷಣ ಸಂಸ್ಥೆಗಳ ಆಡಳಿತ ಸಿಬ್ಬಂದಿಯನ್ನು ಶ್ಲಾಘಿಸಿದ ಸಕೀನಾ,' ಇದು ಬರೀ ರೇಸ್ ಅಲ್ಲ. ಶಾಂತಿ, ಏಕತೆ ಹಾಗೂ ಜಮ್ಮು–ಕಾಶ್ಮೀರದ ಅವರ್ಣೀಯ ಚೆಲುವಿನ ಸಂಭ್ರಮ' ಎಂದು ಬಣ್ಣಿಸಿದರು.

ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ನಡೆದಿದ್ದ ಭಯೋತ್ಪಾದಕ ದಾಳಿಯಲ್ಲಿ 26 ಮಂದಿ ಮೃತಪಟ್ಟಿದ್ದರು. ಇದು ಪ್ರವಾಸಿಗರಲ್ಲಿ ಭೀತಿ ಹುಟ್ಟಿಸಿದ್ದು, ಪರಿಣಾಮ ಕಣಿವೆ ರಾಜ್ಯದ ಪ್ರವಾಸೋದ್ಯಮಕ್ಕೂ ಪೆಟ್ಟು ಬಿದ್ದಿತ್ತು. ಪ್ರವಾಸೋದ್ಯಮ ಪುನಶ್ಚೇತನಕ್ಕೆ ಸರ್ಕಾರ ವಿವಿಧ ಕ್ರಮ ಕೈಗೊಂಡಿರುವಂತೆಯೇ ಶಿಕಾರ ರೇಸ್ ಆಯೋಜನೆಗೊಂಡಿರುವುದು ಗಮನಾರ್ಹ.

ವಿದ್ಯಾರ್ಥಿ ವೇತನ ಬಿಡುಗಡೆಗೆ ಆಗ್ರಹಿಸಿ ರಾಹುಲ್ ಪತ್ರ

ನವದೆಹಲಿ (ಪಿಟಿಐ): 'ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಇರುವ ವಸತಿ ನಿಲಯಗಳು 'ಶೋಚನೀಯ' ಸ್ಥಿತಿಯಲ್ಲಿವೆ. ಜೊತೆಗೆ, ಈ ಸಮುದಾಯಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ತಡವಾಗಿ ನೀಡಲಾಗುತ್ತಿದೆ' ಎಂಬುದಾಗಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

'ಈ ಎರಡು ಬಹಳ ಮುಖ್ಯವಾದ ಸಮಸ್ಯೆಗಳನ್ನು ಬಗೆಹರಿಸಿ. ದೇಶದಲ್ಲಿ ಇರುವ ಶೇಕಡ 90ರಷ್ಟು ತಳ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ಅವಕಾಶಗಳಿಗೆ ಈ ಸಮಸ್ಯೆಗಳು ಹಿನ್ನಡೆ ಮಾಡುತ್ತಿವೆ' ಎಂದು ಪತ್ರದಲ್ಲಿ ಕೋರಿದ್ದಾರೆ.

'ಇತ್ತೀಚೆಗೆ ನಾನು ಬಿಹಾರದ ದರ್ಭಾಂಗ್‌ನಲ್ಲಿರುವ ಅಂಬೇಡ್ಕರ್ ವಸತಿ ನಿಲಯಕ್ಕೆ ಭೇಟಿ ನೀಡಿದ್ದೆ. ಒಂದೇ ಕೊಠಡಿಯಲ್ಲಿ 6–7 ವಿದ್ಯಾರ್ಥಿಗಳನ್ನು ತುಂಬಲಾಗುತ್ತಿದೆ. ಶೌಚಾಲಯಗಳಲ್ಲಿ ಶುಚಿತ್ವವಿಲ್ಲ. ಕುಡಿಯುವ ನೀರು ಶುದ್ಧವಾಗಿಲ್ಲ. ಊಟದ ವ್ಯವಸ್ಥೆಯಂತೂ ಅವ್ಯವಸ್ಥೆಯಿಂದ ಕೂಡಿದೆ. ಗ್ರಂಥಾಲಯ ಮತ್ತು 'ಇಂಟರ್‌ನೆಟ್ ಸೌಲಭ್ಯವಿಲ್ಲ' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

> **ನಾನು ಬಿಹಾರದ ಉದಾಹರಣೆ ನೀಡಿದ್ದೇನೆ. ಆದರೆ, ಇದೇ ಸಮಸ್ಯೆಗಳು ದೇಶದಾದ್ಯಂತ ಇವೆ. ಈ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು**
> **ರಾಹುಲ್ ಗಾಂಧಿ**
> ಲೋಕಸಭೆ ವಿರೋಧ ಪಕ್ಷದ ನಾಯಕ

ಕಾಂಗ್ರೆಸ್ ನಾಯಕರಿಗೆ ಇ.ಡಿ ಬಿಸಿ

ಒಂದನೇ ಪುಟದಿಂದ...

'ವಿಜಯ್ ಕುಮಾರ್ ಅವರ ಡೈರಿಯಲ್ಲಿದ್ದ ವಿವರಗಳನ್ನು ಆಧಾರವಾಗಿ ಇರಿಸಿಕೊಂಡು ಶಾಸಕರು ಮತ್ತು ಆಪ್ತರನ್ನು ಪ್ರಶ್ನಿಸಲಾಗಿದೆ. ಮಾದರಿ ನೀತಿ ಸಂಹಿತೆ ಮಧ್ಯೆಯೇ ಹಣವನ್ನು ಹೇಗೆ ತಲುಪಿಸಲಾಗಿತ್ತು? ಹಣ ಮತ್ತು ಚಿನ್ನ ತಲುಪಿಸಿದ್ದ ಹವಾಲಾ ಮಂದಿಯೊಂದಿಗಿನ ನಿಮ್ಮ ಸಂಬಂಧ ಏನು? ಯಾರ ಮೂಲಕ ಮತದಾರರಿಗೆ ಹಣ ತಲುಪಿಸಿದ್ದೀರಿ ಎಂಬ ವಿವರ ಕೇಳಲಾಗಿದೆ' ಎಂದು ಮೂಲಗಳು ಮಾಹಿತಿ ನೀಡಿವೆ.

'ವಿಚಾರಣೆ ವೇಳೆ ನೀಡಿದ ವಿವರಗಳನ್ನು ಆಧರಿಸಿ, ಇನ್ನಷ್ಟು ಸ್ಥಳಗಳಿಗೆ ಇ.ಡಿ ಅಧಿಕಾರಿಗಳು ಭೇಟಿ ನೀಡಿದರು. ಬಳ್ಳಾರಿಯ ರಿಯಲ್ ಎಸ್ಟೇಟ್ ಕಚೇರಿ, ಚಿನ್ನಾಭರಣಗಳ ಅಂಗಡಿಯೊಂದಕ್ಕೂ ಇ.ಡಿ ಅಧಿಕಾರಿಗಳ ಒಂದು ತಂಡ ಭೇಟಿ ನೀಡಿ ವಿಚಾರಣೆ ನಡೆಸಿದೆ. ಹಣ ಯಾರಿಂದ ಯಾರಿಗೆ ತಲುಪಿತು ಎಂಬುದರ ನಿಖರ ಮಾಹಿತಿ ಕಲೆ ಹಾಕಲಾಗುತ್ತಿದೆ. ಇದಕ್ಕೆ ಸಂಬಂಧಿಸಿದ ಮಹತ್ವದ ದಾಖಲೆಗಳು ಪರಿಶೀಲನೆ ದೊರೆತಿವೆ' ಎಂದು ತಿಳಿಸಿವೆ.

'ಇ.ಡಿ ಅಧಿಕಾರಿಗಳು ಕೇಳಿದ ಪ್ರಶ್ನೆಗೆ ಉತ್ತರ ನೀಡಿದ್ದೇನೆ' ಎಂದು ತುಕಾರಾಂ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ್ದಾರೆ.

ಆರೋಪ ಪಟ್ಟಿಯಲ್ಲೇನಿತ್ತು?

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿ, ದುರ್ಬಳಕೆ ಮಾಡಿಕೊಂಡ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು 2024ರ ಅಕ್ಟೋಬರ್‌ನಲ್ಲಿ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿತ್ತು. ಹಣವನ್ನು ಹೇಗೆ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂಬುದನ್ನು ವಿವರಿಸಿತ್ತು.

ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ, ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರ ಅವರ ಆಣತಿಯಂತೆ ಕಾಂಗ್ರೆಸ್‌ನವರಾದ ಬಳ್ಳಾರಿ ನಗರ ಕ್ಷೇತ್ರದ ಶಾಸಕ ನಾರಾ ಭರತ್ ರೆಡ್ಡಿ, ಕಂಪ್ಲಿಯ ಶಾಸಕ ಗಣೇಶ್ ಮತ್ತು ಕೂಡ್ಲಿಗಿಯ ಶಾಸಕ ಎನ್‌.ಟಿ.ಶ್ರೀನಿವಾಸಗೆ ಹಣ ನೀಡಲಾಗಿತ್ತು

- ನಿಗಮದ ಖಾತೆಗಳಿಂದ ಅಕ್ರಮವಾಗಿ ವರ್ಗಾವಣೆ ಮಾಡಲಾಗಿದ್ದ ಹಣದಲ್ಲಿ ಬಳ್ಳಾರಿ ಲೋಕಸಭಾ ಕ್ಷೇತ್ರದ 7 ಲಕ್ಷಕ್ಕೂ ಹೆಚ್ಚು ಮತದಾರರಿಗೆ ಕಾಂಗ್ರೆಸ್‌ನ ಮೂವರು ಶಾಸಕರ ಮೂಲಕ ₹14.80 ಕೋಟಿ ಹಂಚಲಾಗಿದೆ
- ಬಳ್ಳಾರಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಇ.ತುಕಾರಾಂ ಅವರ ಪರವಾಗಿ ಮತ ಚಲಾಯಿಸುವಂತೆ ಓಲೈಸಲು 7.26 ಲಕ್ಷ ಮತದಾರರಿಗೆ ತಲಾ ₹200 ಹಂಚಲಾಗಿದೆ
- ಬಳ್ಳಾರಿ ಲೋಕಸಭಾ ಕ್ಷೇತ್ರದ ಮತಗಟ್ಟೆಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಒಟ್ಟು ₹72 ಲಕ್ಷ ಹಂಚಲಾಗಿದೆ. ಮತದಾನದ ವೇಳೆ ಮತಗಟ್ಟೆಯಲ್ಲಿ ಕೆಲಸ ನಿರ್ವಹಿಸಿದ ಕಾರ್ಯಕರ್ತರಿಗೆ ತಲಾ ₹10,000 ವೆಚ್ಚ ಮಾಡಲಾಗಿದೆ
- ಚುನಾವಣೆ ವೇಳೆ ಮದ್ಯ ಖರೀದಿಗೆ ₹4 ಕೋಟಿ ಮತ್ತು ಓಡಾಟಕ್ಕೆ ಸುಮಾರು ₹50 ಲಕ್ಷ ವೆಚ್ಚ ಮಾಡಲಾಗಿದೆ

ಸಂಕ್ಷಿಪ್ತ ಸುದ್ದಿ

ದೆಹಲಿಯಲ್ಲಿ ಬಿಸಿಗಾಳಿ: 'ರೆಡ್ ಅಲರ್ಟ್'

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಬಿಸಿಗಾಳಿ ಬೀಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) 'ರೆಡ್ ಅಲರ್ಟ್' ಘೋಷಿಸಿದೆ. ರಾಜಧಾನಿಯ ಹಲವು ಪ್ರದೇಶಗಳಲ್ಲಿ 45.5 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾದ ಬೆನ್ನಲ್ಲೇ ಈ ಎಚ್ಚರಿಕೆ ನೀಡಿದೆ.

ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮುಂದಿನ ಎರಡು ದಿನ ಬಿಸಿ ಗಾಳಿ ಬೀಸಲಿದೆ. ಬುಧವಾರ ಸಫ್ದರ್‌ಜಂಗ್‌ನಲ್ಲಿ 43.8 ಡಿಗ್ರಿ ಸೆ. ಉಷ್ಣಾಂಶ ಮತ್ತು ಅಯಾನಗರದಲ್ಲಿ 45.5 ಡಿಗ್ರಿ ಸೆ. ಉಷ್ಣಾಂಶ ದಾಖಲಾಗಿದೆ ಎಂದು ತಿಳಿಸಿದೆ. ಜೂನ್ 13ರಂದು ಗುಡುಗು ಸಹಿತ ಸಾಧಾರಣ ಮಳೆಯಾಗಲಿದ್ದು, ನಂತರ ಪರಿಸ್ಥಿತಿ ಅಲ್ಪ ಮಟ್ಟಿಗೆ ಸುಧಾರಿಸಲಿದೆ ಎಂದು ತಿಳಿಸಿದೆ.

ಜಮ್ಮು–ಕಾಶ್ಮೀರ: ವಿಧಾನಸಭೆಯಲ್ಲಿ ಅಗ್ನಿ ಅವಘಡ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯ ಮೊಗಸಾಲೆಯಲ್ಲಿ ಬುಧವಾರ ಅಗ್ನಿ ಅವಘಡ ಸಂಭವಿಸಿದ್ದು, ಕೆಲವು ಹಳೆಯ ಛಾಯಾಚಿತ್ರಗಳು ಮತ್ತು ಪೀಠೋಪಕರಣಗಳು ಸುಟ್ಟುಹೋಗಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೆಳಿಗ್ಗೆ 9.34ಕ್ಕೆ ಬೆಂಕಿ ಕಾಣಿಸಿಕೊಂಡಿದ್ದು, ಕೆಲವೇ ನಿಮಿಷಗಳಲ್ಲಿ ಅದನ್ನು ನಂದಿಸಲಾಯಿತು. ಎರಡು ಅಂತಸ್ತಿನ ವಿಧಾನಸಭೆಯ ಮೊಗಸಾಲೆಯಲ್ಲಿ ಶಾರ್ಟ್ ಸರ್ಕೀಟ್‌ನಿಂದಾಗಿ ಬೆಂಕಿ ಕಾಣಿಸಿಕೊಂಡಿದೆ ಎಂಬುದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ ಎಂದು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆಯೋಗದ ಮುಂದೆ ಕೆಸಿಆರ್ ಹಾಜರು

ಹೈದರಾಬಾದ್ (ಪಿಟಿಐ): ಕಾಳೇಶ್ವರಂ ನೀರಾವರಿ ಯೋಜನೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು ವಿಚಾರಣೆ ನಡೆಸುತ್ತಿರುವ ನ್ಯಾಯಾಂಗದ ಆಯೋಗದ ಮುಂದೆ ಬುಧವಾರ ಹಾಜರಾದ ಬಿಆರ್‌ಎಸ್ ಅಧ್ಯಕ್ಷ, ತೆಲಂಗಾಣದ ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರು ವಿಚಾರಣೆ ಎದುರಿಸಿದರು.

ಕಾಳೇಶ್ವರಂ ನೀರಾವರಿ ಯೋಜನೆಯ ಅವ್ಯವಹಾರಗಳ ತನಿಖೆಗೆ ಸುಪ್ರೀಂಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಪಿ.ಸಿ. ಘೋಷ್ ನೇತೃತ್ವದಲ್ಲಿ ಏಕಸದಸ್ಯ ಆಯೋಗ ರಚಿಸಲಾಗಿದೆ. ಆಯೋಗವು ಈಗಾಗಲೇ ಈ ಯೋಜನೆಗೆ ಸಂಬಂಧಿಸಿದಂತೆ ಕೆಲವು ಅಧಿಕಾರಿಗಳು, ಎಂಜಿನಿಯರ್‌ಗಳನ್ನು ವಿಚಾರಣೆಗೆ ಒಳಪಡಿಸಿದೆ.

ಹಿಂದಿನ ಬಿಆರ್‌ಎಸ್ ಸರ್ಕಾರದಲ್ಲಿ ನೀರಾವರಿ ಸಚಿವರಾಗಿದ್ದ ಕೆಸಿಆರ್ ಸಂಬಂಧಿ, ಟಿ.ಹರೀಶ್ ರಾವ್ ಹಾಗೂ ಹಣಕಾಸು ಸಚಿವರಾಗಿದ್ದ ಇ. ರಾಜೇಂದರ್ ಕಳೆದ ವಾರ ಆಯೋಗದ ಮುಂದೆ ವಿಚಾರಣೆಗೆ ಹಾಜರಾಗಿದ್ದರು.

ಪಟಾಕಿ ಘಟಕ ಸ್ಫೋಟ: ಇಬ್ಬರು ಸಾವು

ಚೆನ್ನೈ (ಪಿಟಿಐ): ತಮಿಳುನಾಡಿನ ದಕ್ಷಿಣ ವಿರುಧುನಗರ ಜಿಲ್ಲೆಯಲ್ಲಿ ಪಟಾಕಿ ತಯಾರಿಕಾ ಘಟಕ ಸ್ಫೋಟಗೊಂಡು ಇಬ್ಬರು ಕಾರ್ಮಿಕರು ಮೃತಪಟ್ಟಿದ್ದು, ಇತರ ನಾಲ್ವರಿಗೆ ಗಾಯಗಳಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳದಲ್ಲೇ 54 ವರ್ಷದ ಮಹಿಳೆ ಮತ್ತು 37 ವರ್ಷದ ಪುರುಷ ಮೃತಪಟ್ಟಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ಗಾಯಗೊಂಡವರು ವಿರುಧುನಗರ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು, ಮೃತರ ಕುಟುಂಬಕ್ಕೆ ತಲಾ ₹4 ಲಕ್ಷ ಪರಿಹಾರ ಘೋಷಿಸಿದ್ದು, ಗಂಭೀರ ಗಾಯಗೊಂಡವರಿಗೆ ತಲಾ ₹1 ಲಕ್ಷ ಮತ್ತು ಸಣ್ಣಪುಟ್ಟ ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರ ನೀಡುವುದಾಗಿ ತಿಳಿಸಿದ್ದಾರೆ.

> ಕಾಂಗ್ರೆಸ್ ಶಾಸಕರ ಒಗ್ಗಟ್ಟು ಒಡೆಯಲು ನಮ್ಮ ಶಾಸಕರನ್ನೇ ಗುರಿಯಾಗಿಸಿಕೊಂಡು ಇ.ಡಿ ದಾಳಿ ಮಾಡುತ್ತಿದೆ. ಒಂದು ವರ್ಷದ ಹಿಂದಿನ ಚುನಾವಣೆಯಲ್ಲಿ ನಡೆದಿದ್ದನ್ನು ಈಗ ಕೈಗೆತ್ತಿಕೊಂಡ ಇ.ಡಿ., ದಾಳಿಯ ನೆಪದಲ್ಲಿ ಕಾಂಗ್ರೆಸ್ ಶಾಸಕರಿಗೆ ತೊಂದರೆ ಕೊಡುತ್ತಿದೆ. ಒಂದೇ ಪಕ್ಷದವರನ್ನು ಗುರಿ ಮಾಡಿದರೆ ಶಾಸಕರಲ್ಲಿ ಒಡಕು ಮೂಡಿ, ಎದುರಿನವರಿಗೆ ಅನುಕೂಲ ಆಗುತ್ತದೆ ಎಂಬುದು ಬಿಜೆಪಿ ಲೆಕ್ಕಾಚಾರ.
> **ಮಲ್ಲಿಕಾರ್ಜುನ ಖರ್ಗೆ**
> ಎಐಸಿಸಿ ಅಧ್ಯಕ್ಷ

ಇ.ಡಿ ದಾಳಿ ಸಮರ್ಥಿಸಿದ ಶ್ರೀರಾಮುಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಅಕ್ರಮವಾಗಿ ಚುನಾವಣೆಗೆ ಬಳಸಿಕೊಂಡವರಿಗೆ ಮುಂದಿನ ದಿನಗಳಲ್ಲಿ ಜನರೇ ತಕ್ಕ ಪಾಠ ಕಲಿಸುತ್ತಾರೆ' ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸಂಸದ ಮತ್ತು ಶಾಸಕರ ಮನೆಗಳ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿರುವುದನ್ನು ಸಮರ್ಥಿಸಿಕೊಂಡರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಬಳಸಿಕೊಂಡು ಲೋಕಸಭೆಮತ್ತು ವಿಧಾನಸಭೆಗೆ ಆಯ್ಕೆ ಆಗಿರಬಹುದು. ಆದರೆ, ನಾಡಿನ ಜನ ಎಲ್ಲವನ್ನು ನೋಡುತ್ತಿದ್ದಾರೆ. ಅವರಿಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಹೇಳಿದರು.

'ಸಂಸದ ತುಕಾರಾಂ, ಶಾಸಕರಾದ ನಾರಾ ಭರತ್ ರೆಡ್ಡಿ, ಡಾ.ಶ್ರೀನಿವಾಸ್ ಮತ್ತು ಕಂಪ್ಲಿ ಗಣೇಶ್ ಅವರ ಮನೆ ಮೇಲೆ ಜಾರಿ ನಿರ್ದೇಶನಾಲಯದ ದಾಳಿ ಆಗಿದೆ. ಈ ನಾಯಕರು ತಾವು ಸಾಚಾ ಎಂದು ಬಿಂಬಿಸಿಕೊಳ್ಳುತ್ತಿದ್ದರು. ಈಗ ಇವರು ನಡೆಸಿದ ಅಕ್ರಮ ಬಯಲಿಗೆ ಬಂದಿದೆ' ಎಂದು ಹೇಳಿದರು.



ಸುಭಾಷಿತ

ಕೀರ್ತಿ ನೀರಿನ ಅಲೆಯಂತೆ ದೊಡ್ಡದಾಗುತ್ತಲೇ ಇರುತ್ತದೆ; ಕೊನೆಗೆ ಕಣ್ಮರೆಯಾಗುತ್ತದೆ.

–ವಿಲಿಯಂ ಷೇಕ್ಸ್‌ಪಿಯರ್

ಪರಿಸರಸ್ನೇಹಿ ಹಾಲಿನ ಕವರ್ ಬಳಕೆ ಪ್ಲಾಸ್ಟಿಕ್ ವಿರೋಧಿ ಹೋರಾಟಕ್ಕೆ ಬಲ

ಮಣ್ಣಿನಲ್ಲಿ ಕರಗುವ ಪ್ಲಾಸ್ಟಿಕ್ ಕವರ್‌ಗಳಲ್ಲಿ ಹಾಲು ಪೂರೈಸುವ ದಿಸೆಯಲ್ಲಿ ಮಹತ್ವದ ಹೆಜ್ಜೆ ಇರಿಸಿರುವ ಬೆಂಗಳೂರು ಹಾಲು ಒಕ್ಕೂಟ (ಬಮೂಲ್), ಹಾಲಿನ ವಿತರಣೆಯನ್ನು ಪಾಲಿಥೀನ್ ತ್ಯಜಿಸಿದ ಹೊರತಾದ ಭರವಸೆ ಹುಟ್ಟಿಸಿದೆ. ವಿದೇಶಿ ತಂತ್ರಜ್ಞಾನದ ನೆರವಿನೊಂದಿಗೆ ತಯಾರಾಗುತ್ತಿರುವ, ಜೈವಿಕವಾಗಿ ವಿಘಟನೆ ಹೊಂದುವ ಪ್ಲಾಸ್ಟಿಕ್ ಕವರ್‌ಗಳನ್ನು ಬಳಸುವ ದಿಸೆಯಲ್ಲಿ ಬಮೂಲ್ ಕಾರ್ಯಪ್ರವೃತ್ತವಾಗಿದೆ. ಪ್ರಸ್ತುತ ಹಾಲು ಪೂರೈಕೆಗೆ ಬಳಸಲಾಗುತ್ತಿರುವ ಪಾಲಿಥೀನ್ ಕವರ್‌ಗಳು ಮಣ್ಣಿನಲ್ಲಿ ಕರಗಲು ಐದುನೂರು ವರ್ಷಗಳು ಬೇಕು. ಆದರೆ, ಈಗ ಬಮೂಲ್ ಬಳಸುತ್ತಿರುವ, ಜೋಳದ ಗಂಜಿಯಿಂದ ತಯಾರಾಗುವ ಕವರ್‌ಗಳು ಮಣ್ಣು ಸೇರಿದ ಆರು ತಿಂಗಳಲ್ಲಿಯೇ ಜೈವಿಕ ಗೊಬ್ಬರವಾಗಿ ರೂಪಾಂತರ ಹೊಂದಲಿವೆ; ಆ ಮೂಲಕ ಮಣ್ಣಿನ ಫಲವತ್ತತೆಯೂ ಹೆಚ್ಚಲಿದೆ ಎಂದು ಹೇಳಲಾಗಿದೆ. ಕನಕಪುರ ತಾಲ್ಲೂಕಿನ ಶಿವನಹಳ್ಳಿಯಲ್ಲಿರುವ ಮೆಗಾ ಡೇರಿ ಘಟಕದಲ್ಲಿ ಬಮೂಲ್‌ನ ಪರಿಸರಸ್ನೇಹಿ ಪ್ರಯೋಗ ಆರಂಭಗೊಂಡಿದೆ. ದೇಶದಲ್ಲೇ ಮೊದಲು ಎನ್ನಲಾದ ಈ ಪ್ರಯೋಗ ಯಶಸ್ವಿಗೊಂಡಲ್ಲಿ ಮುಂದಿನ ದಿನಗಳಲ್ಲಿ ರಾಜ್ಯದೆಲ್ಲೆಡೆ ಪರಿಸರಸ್ನೇಹಿ ಕವರ್‌ಗಳನ್ನು ಹಾಲಿನ ವಿತರಣೆಗೆ ಬಳಸಬಹುದಾಗಿದೆ. ಹೈನೋದ್ಯಮದಲ್ಲಿ ಪ್ಲಾಸ್ಟಿಕ್‌ಗೆ ಪರ್ಯಾಯ ಕಂಡುಕೊಳ್ಳುವ ದಿಸೆಯಲ್ಲಿ ದೇಶದ ವಿವಿಧ ಭಾಗಗಳಲ್ಲಿ ಹಲವು ಪ್ರಯತ್ನಗಳು ನಡೆದಿವೆ. ಪ್ಲಾಸ್ಟಿಕ್ ಬಳಕೆಯನ್ನು ಕೈಬಿಡುವ ಉದ್ದೇಶದಿಂದ ಕೇರಳದಲ್ಲಿ ಹಾಲನ್ನು ಎಟಿಎಂ ಯಂತ್ರದ ಮೂಲಕ ಪೂರೈಸುವ ಪ್ರಯತ್ನಕ್ಕೆ ಬಳಕೆದಾರರ ಸ್ಪಂದನ ದೊರೆತಿರಲಿಲ್ಲ. ಪಾಲಿಥೀನ್‌ಗೆ ಪರ್ಯಾಯವಾಗಿ ಪರಿಸರಸ್ನೇಹಿ ಪ್ಲಾಸ್ಟಿಕ್ ಇಲ್ಲವೇ ಗಾಜಿನ ಸೀಸೆಗಳನ್ನು ಬಳಸುವ ಚಿಂತನೆ ತಮಿಳುನಾಡಿನಲ್ಲಿ ನಡೆದಿತ್ತು. ಆದರೆ, ಆರ್ಥಿಕ ಹೊರೆ ಹಾಗೂ ತಾಂತ್ರಿಕ ಸಮಸ್ಯೆಗಳಿಂದಾಗಿ ಪ್ಲಾಸ್ಟಿಕ್‌ಗೆ ಪರ್ಯಾಯ ಕಂಡುಕೊಳ್ಳುವ ಪ್ರಯತ್ನಗಳು ಯಶಸ್ವಿಯಾಗಿಲ್ಲ. ಪ್ರಸ್ತುತ, ಬಮೂಲ್ ಪ್ರತಿಪಾದಿಸುತ್ತಿರುವ ಜೈವಿಕ ವಿಘಟನೆ ಹೊಂದಬಲ್ಲ ಪ್ಲಾಸ್ಟಿಕ್ ಕವರ್‌ಗಳ ಉತ್ಪಾದನೆಗೆ ಶೇ 50ರಷ್ಟು ಮಾತ್ರವೇ ಹೆಚ್ಚು ವೆಚ್ಚ ತಗಲುತ್ತದೆ ಎನ್ನುವ ಸಂಗತಿ, ಹಾಲು ಉದ್ಯಮದಲ್ಲಿ ಪಾಲಿಥೀನ್‌ಗೆ ಪರ್ಯಾಯ ಕಂಡುಕೊಳ್ಳುವ ದಿಸೆಯಲ್ಲಿ ಹೊಸ ಭರವಸೆ ಹುಟ್ಟಿಸುವಂತಿದೆ.



ಪ್ಲಾಸ್ಟಿಕ್ ನಿಷೇಧವು ಮದುವೆ ಸೇರಿದಂತೆ ನೂರಾರು ಜನ ಭಾಗವಹಿಸುವ ಕಾರ್ಯಕ್ರಮಗಳಿಗೂ ಅನ್ವಯವಾಗಬೇಕು

ಮಣ್ಣು ಸೇರುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯದಿಂದ ಉಂಟಾಗುತ್ತಿರುವ ಅಪಾಯಗಳ ಹಿನ್ನೆಲೆಯಲ್ಲಿ ಪಾಲಿಥೀನ್‌ಗೆ ಪರ್ಯಾಯ ಕಂಡುಕೊಳ್ಳುವ ಬಮೂಲ್ ಪ್ರಯತ್ನಕ್ಕೆ ವಿಶೇಷ ಮಹತ್ವವಿದೆ. ಪ್ಲಾಸ್ಟಿಕ್ ತ್ಯಾಜ್ಯಗಳ ಸಂಸ್ಕರಣೆ ಕಷ್ಟಕರವಾದುದರಿಂದ, ಪಾಲಿಥೀನ್ ಕವರ್‌ಗಳಿಗೆ ಪರ್ಯಾಯ ಕಂಡುಕೊಳ್ಳುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 2018ರಲ್ಲಿ ಕೆಎಂಎಫ್‌ಗೆ ಸೂಚಿಸಿತ್ತು. ಬೆಂಗಳೂರಿನಂತಹ ಮಹಾನಗರಗಳ ಕೆಲವು ಬಡಾವಣೆಗಳಲ್ಲಿ ಮಳೆಗಾಲದಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರುವುದರಲ್ಲಿ ಪ್ಲಾಸ್ಟಿಕ್ ಕವರ್‌ಗಳ ಪಾತ್ರವೂ ಇದೆ. ಚರಂಡಿಗಳಲ್ಲಿ ಹಾಗೂ ರಾಜಕಾಲುವೆಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಸೇರಿಕೊಂಡು, ನೀರು ಸರಾಗವಾಗಿ ಹರಿಯಲು ತೊಡಕುಂಟಾಗುತ್ತದೆ. ಮಳೆನೀರಿನ ಹರಿವಿಗೆ ಅಡ್ಡಿ ಉಂಟಾದಾಗ ಅದರ ದುಷ್ಪರಿಣಾಮ ವಸತಿ ಪ್ರದೇಶಗಳ ಮೇಲಾಗುತ್ತದೆ. ಪ್ಲಾಸ್ಟಿಕ್ ತ್ಯಾಜ್ಯ ಸೇವನೆಯ ಪರಿಣಾಮ ಬೀಡಾಡಿ ಜಾನುವಾರುಗಳ ಆರೋಗ್ಯದ ಮೇಲೂ ಆಗುತ್ತದೆ ಹಾಗೂ ಅವುಗಳಿಂದ ಉತ್ಪಾದನೆಯಾಗುವ ಹಾಲಿನ ಗುಣಮಟ್ಟವನ್ನೂ ಪ್ರಭಾವಿಸುತ್ತದೆ. ಪ್ಲಾಸ್ಟಿಕ್ ತ್ಯಾಜ್ಯದಿಂದ ಉಂಟಾಗುತ್ತಿರುವ ಸಮಸ್ಯೆಗಳ ನಿಯಂತ್ರಣಕ್ಕೆ ಮುಂದಾಗಿರುವ ಬಮೂಲ್ ಜೊತೆ ಸಾರ್ವಜನಿಕರೂ ಕೈಜೋಡಿಸುವುದು ಅಗತ್ಯ. ದೈನಂದಿನ ಜೀವನದಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ಲಾಸ್ಟಿಕ್ ಬಳಕೆ ಆಗುತ್ತಿರುವ ಸ್ಥಳಗಳಲ್ಲಿ, ಪರ್ಯಾಯ ಕಂಡುಕೊಳ್ಳುವ ಪ್ರಯತ್ನಗಳು ವ್ಯಾಪಕವಾಗಿ ನಡೆಯಬೇಕಾಗಿದೆ. ಈ ದಿಸೆಯಲ್ಲಿ, ರಾಜ್ಯದ ದೇವಸ್ಥಾನಗಳಲ್ಲಿ ಆಗಸ್ಟ್ 15ರಿಂದ ನೀರಿನ ಬಾಟಲ್ ಸೇರಿದಂತೆ ಎಲ್ಲ ರೀತಿಯ ಪ್ಲಾಸ್ಟಿಕ್ ಬಳಕೆ ನಿಷೇಧಿಸಲು ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ. ಈ ನಿಷೇಧವು ಮದುವೆ ಸೇರಿದಂತೆ ನೂರಾರು ಜನ ಭಾಗವಹಿಸುವ ಕಾರ್ಯಕ್ರಮಗಳಿಗೂ ಅನ್ವಯವಾಗಬೇಕು. ಆಹಾರ ಪದಾರ್ಥಗಳ ತಯಾರಿಕೆ, ಸಂಗ್ರಹ ಹಾಗೂ ವಿತರಣೆಯ ವಿವಿಧ ಹಂತಗಳಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧಿಸುವ ಪ್ರಯತ್ನಗಳೂ ನಡೆದಿವೆ. ಆದರೆ, ಪ್ಲಾಸ್ಟಿಕ್ ನಿಷೇಧದಂಥ ಹೋರಾಟವು ಕಾನೂನು ನಿರ್ಬಂಧಗಳಿಂದಷ್ಟೇ ಯಶಸ್ವಿಯಾಗುವುದು ಸಾಧ್ಯವಿಲ್ಲ. ಸಾರ್ವಜನಿಕರ ಸಹಕಾರ ದೊರೆಯದೇ ಹೋದರೆ ಪ್ಲಾಸ್ಟಿಕ್ ಬಳಕೆ ನಿಯಂತ್ರಣದ ಪ್ರಯತ್ನಗಳು ಮಾತು–ಬರಹದಲ್ಲಷ್ಟೇ ಉಳಿಯುತ್ತವೆ.

ಆ ಎತ್ತರದಲ್ಲಿ ಯೋಗಾಸನವೂ ವಿಶಿಷ್ಟ, ಅಲ್ಲಿ ದಕ್ಕುವ ವಿಷಾದಯೋಗವೂ ಅಪೂರ್ವ

ಶೂನ್ಯ ಗುರುತ್ವದ ಮೋಜು ಮಸ್ತಿ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

146 ಕೋಟಿ ಜನರ ಶುಭ ಹಾರೈಕೆಗಳ ಜೊತೆಗೆ ಶುಭಾಂಶು ಶುಕ್ಲಾ (ಶುಕ್ಸ್) ಕಕ್ಷೆಗೆ ಹೊರಟಿದ್ದಿದ್ದರೆ ಇಷ್ಟು ಹೊತ್ತಿಗೆ ಭೂಮಿಯ ಗುರುತ್ವ ವಲಯವನ್ನು ದಾಟಿ, ನಾಳೆ ಬಾಹ್ಯಾಕಾಶ ನಿಲ್ದಾಣವನ್ನು (ಇಂಟರ್‌ನ್ಯಾಶನಲ್ ಸ್ಪೇಸ್ ಸ್ಟೇಶನ್–ISS) ತಲುಪಿರುತ್ತಿದ್ದರು. ಆದರೆ ಪಯಣ ಮುಂದಕ್ಕೆ ಹೋಗಿದೆ. ಮುಂದಿನ ಮುಹೂರ್ತ ಎಂದೇ ಬರಲಿ, ಖಾಸಗಿ ನೌಕೆಯ ಮೇಲೆ ಪಯಣಿಸಲಿರುವ ಮೊದಲ ಭಾರತೀಯ ಬಾಹ್ಯಾಕಾಶ ಯಾತ್ರಿ ಇವರಾಗುತ್ತಾರೆ. ನಮ್ಮ ಸರ್ಕಾರ ಇವರಿಗೆಂದು ₹550 ಕೋಟಿ ಶುಲ್ಕವನ್ನು ಕಟ್ಟಿದೆ. ಅದೇನೂ ದೊಡ್ಡ ಮೊತ್ತವಲ್ಲ. ಏಕೆಂದರೆ ಇನ್ನೆರಡು ವರ್ಷಗಳ ನಂತರ ನಮ್ಮದೇ 'ಗಗನಯಾನ್' ನೌಕೆಯಲ್ಲಿ ಮೇಲೇರಲೆಂದು ಆಯ್ಕೆಯಾದ ನಾಲ್ವರಲ್ಲಿ ಇವರೇ ಮೊದಲ 'ಅನುಭವಿ' ಪಯಣಿಗರಾಗಲಿದ್ದಾರೆ.

ಭಾರತದ ಮಟ್ಟಿಗೆ ರಾಕೇಶ್ ಶರ್ಮಾ ನಂತರ ಇವರು ಎರಡನೆಯ ಗಗನಯಾತ್ರಿಯಾದರೂ, ಇಂದು ಬಾಹ್ಯಾಕಾಶ ತಲುಪಿದ್ದಿದ್ದರೆ ಜಾಗತಿಕ ಲೆಕ್ಕದಲ್ಲಿ ಕ್ಯಾಪ್ಟನ್ ಶುಕ್ಲಾ 725ನೆಯವರಾಗುತ್ತಿದ್ದರು. ಇದು ನಿಖರ ಸಂಖ್ಯೆಯಲ್ಲ; ಅಮೆರಿಕದ ಲೆಕ್ಕದಲ್ಲಿ ನೆಲದಿಂದ 80 ಕಿ.ಮೀ. (50 ಮೈಲ್) ಆಚಿನದು ಬಾಹ್ಯಾಕಾಶ ಎನಿಸುವುದರಿಂದ, ಅಲ್ಲಿಗೆ ಇದುವರೆಗೆ 721 ಜನರು ಹೋಗಿ ಬಂದಿದ್ದಾರೆ.

ಎಂಥ ವಿಸ್ಮಯ ನೋಡಿ: ಬೆಂಗಳೂರಿನಿಂದ ತುಮಕೂರಿಗೆ ಹೋದಷ್ಟೇ ದೂರವನ್ನು ಲಂಬವಾಗಿ ಮೇಲಕ್ಕೆ ಕ್ರಮಿಸಿದರೆ ಅದು ಬಾಹ್ಯಾಕಾಶ! ಹಾಗಿದ್ದರೆ, ಮುಂದೊಂದು ದಿನ ಬೆಂಗಳೂರಿನ ಒಂದು ಮೆಟ್ರೊ ನಿಲ್ದಾಣವನ್ನು ಬಾಹ್ಯಾಕಾಶದಲ್ಲೂ ಕಟ್ಟಬಹುದೇ ಎಂದು ನೀವು ಕೇಳಬಹುದು. ಕಟ್ಟಿದರೂ ಅದು ಅಲ್ಲಿ ನಿಂತಲ್ಲೇ ನಿಲ್ಲುವ ಬದಲು, ಗಂಟೆಗೆ 28 ಸಾವಿರ ಕಿ.ಮೀ. ವೇಗದಲ್ಲಿ ಭೂಪ್ರದಕ್ಷಿಣೆ ಹಾಕುತ್ತಿರುತ್ತದೆ. ನಿಂತಲ್ಲೇ ನಿಲ್ಲಬೇಕೆಂದರೆ (ನಿಂತಂತೆ ಕಾಣಬೇಕೆಂದರೆ) ಅದನ್ನು ಸುಮಾರು 36 ಸಾವಿರ ಕಿ.ಮೀ. ಎತ್ತರದ ಭೂಸ್ಥಿರ ಕಕ್ಷೆಯಲ್ಲಿ ಕಟ್ಟಿ ನಿಲ್ಲಿಸಬೇಕಾಗುತ್ತದೆ.

ಶುಭಾಂಶು ತಲುಪಬೇಕಿದ್ದ ಐಎಸ್‌ಎಸ್ ನಿಲ್ದಾಣ ನಮ್ಮಿಂದ ಕೇವಲ 400 ಕಿ.ಮೀ. ಎತ್ತರದಲ್ಲಿ ಸುತ್ತುತ್ತಿದೆ. ಅದು, ಬೆಂಗಳೂರಿನಿಂದ ಗೋಕರ್ಣ/ಗೋವಾಕ್ಕೆ ಹೋದಷ್ಟೇ ದೂರ. ಹಾಗಾಗಿ ಗೋವಾಕ್ಕೆ ಹೋದಷ್ಟೇ ಸಲೀಸಾಗಿ ಈಗೀಗ ಎಷ್ಟೊಂದು ಪಯಣಿಗರು ಅಲ್ಲಿಗೆ ಹೋಗುತ್ತಿದ್ದಾರೆ. ಸ್ಪೇಸ್ ಎಕ್ಸ್, ಬ್ಲೂ ಆರಿಜಿನ್ ಮುಂತಾದ ಖಾಸಗಿ ಕಂಪನಿಗಳ ನೌಕೆಯಲ್ಲಿ ಕಳೆದ ಎರಡು ತಿಂಗಳಲ್ಲಿ 21 ಮಂದಿ, ಅವರಲ್ಲೂ ಹತ್ತು ಜನರು ಮೊದಲ ಬಾರಿ ಹೋಗಿ ಬಂದಿದ್ದಾರೆ. ಅವರಲ್ಲಿ ಬೆಲಾರೂಸ್‌ನ ಗಗನಸಖಿ ಮರ್ಯಾನಾ, ವಿಯೆಟ್ನಾಂ ಮೂಲದ ಅಮೆರಿಕದ ಅತ್ಯಾಚಾರ ಸಂತ್ರಸ್ತೆ ಅಮಾಂಡಾ ಎಂಗುಯೆನ್ ಕೂಡ ಇದ್ದಾರೆ. ಏಪ್ರಿಲ್ 14ರಂದು ಎಲ್ಲ ಆರು ಮಹಿಳೆಯರೇ ಬಾಹ್ಯಾಕಾಶ ಯಾನ ಮಾಡಿ (ಅಂದರೆ 100 ಕಿ.ಮೀ. ಎತ್ತರದ 'ಕಾರ್ಮಾನ್ ಗಡಿ'ಯನ್ನು ದಾಟಿ ಕ್ಷೀಣಗುರುತ್ವದಲ್ಲಿ ಹನ್ನೊಂದು ನಿಮಿಷ ತೇಲಾಡಿ) ಬಂದಿದ್ದಾರೆ. ಹಾಗೆಂದು ಶೂನ್ಯ ಗುರುತ್ವದ ಪಯಣವನ್ನು ತೀರಾ ಹಗುರವಾಗಿ ಪರಿಗಣಿಸಬೇಡಿ. ಅದರಲ್ಲೂ 400 ಕಿ.ಮೀ. ಎತ್ತರದ ಅಟ್ಟಣಿಗೆಗೆ ಹೋಗಬೇಕೆಂದರೆ ಭಾರೀ ತರಬೇತಿ, ತಾಳ್ಮೆ, ಸ್ಥೈರ್ಯ ಎಲ್ಲ ಬೇಕು. ಎಂಟು ದಿನಗಳ ವಾಸಕ್ಕೆಂದು ಹೋದ ಸುನಿತಾ ವಿಲಿಯಮ್ಸ್ ಹಿಂದಿರುಗಿ ಬರಲಾರದೆ 286 ದಿನ ಅಲ್ಲೇ ಉಳಿದಿದ್ದರಲ್ಲ?

ಬಾಹ್ಯಾಕಾಶ ನಿಲ್ದಾಣ ಎಂದ ಮಾತ್ರಕ್ಕೇ ಅಲ್ಲಿ ಕೂತು ಇಡೀ ಭೂಮಿಯ ಉಂಡೆಯನ್ನು ನೋಡಬಹುದು ಎಂದೆಲ್ಲ ಊಹಿಸಿದರೆ ತಪ್ಪಾಗುತ್ತದೆ. ಐಎಸ್‌ಎಸ್ ಕಿಟಕಿಯಿಂದ ಇಡೀ ಭಾರತ ಕೂಡ ಒಂದೇ ನೋಟದಲ್ಲಿ ಸಿಗಲಾರದು. ಗೋವಾದಿಂದ ಚೆನ್ನೈವರೆಗಿನ ಒಂದು ಫೋಟೊ ತೆಗೆಯಬಹುದು. ಈಗಂತೂ ಮೋಡ ಮುಸುಕಿರುವುದರಿಂದ ಅದೂ ಸಾಧ್ಯವಿಲ್ಲ. ಆದರೆ ಎಲ್ಲ ಖಂಡಗಳೂ ಸರಸರ ಓಡುತ್ತಿರುತ್ತವೆ. ಪ್ರತಿ ಒಂದೂವರೆ ಗಂಟೆಗೆ ಭೂಮಿಯ ಒಂದು ಪ್ರದಕ್ಷಿಣೆ ಹಾಕುತ್ತ 24 ಗಂಟೆಗಳಲ್ಲಿ ಆರು ಸೂರ್ಯೋದಯ, ಆರು ಸೂರ್ಯಾಸ್ತಗಳನ್ನು ನೋಡುವುದು ಮೊದಮೊದಲು ತುಂಬ ರೋಚಕ ಎನಿಸುವುದಂತೂ ನಿಜ. ಹಗಲು– ರಾತ್ರಿ, ಏಕಾದಶಿ, ಅಮಾವಾಸ್ಯೆ ಎಂಬ ನಮ್ಮೆಲ್ಲ ಲೆಕ್ಕಾಚಾರಗಳೂ ಅಲ್ಲಿ ತಲೆಕೆಳಗು.

ನಾವೂ ಅಲ್ಲಿದ್ದರೆ ಪದೇ ಪದೇ ತಲೆಕೆಳಗು! ಶುಭಾಂಶು ಅಲ್ಲಿ ಯೋಗಾಸನ ಹಾಕಲಿದ್ದಾರೆ. ಶೂನ್ಯ ಗುರುತ್ವದಲ್ಲಿ ಮೂಳೆ, ಸ್ನಾಯುಗಳ ಬಿಗಿತಗಳ ಏರಿಳಿತ ಹೇಗಾಗುತ್ತದೆ ಎಂಬುದರ ವೈಜ್ಞಾನಿಕ ಪರೀಕ್ಷೆ ಮಾಡುತ್ತಾರಂತೆ. ಅವರು ನಿನ್ನೆ ಹೊರಟಿದ್ದಿದ್ದರೆ 'ಅಂತರರಾಷ್ಟ್ರೀಯ ಯೋಗ ದಿನ'ಕ್ಕೆ (ಜೂನ್ 21) ಸರಿಯಾಗಿ ಅಷ್ಟೆತ್ತರದಲ್ಲಿ ಯೋಗ ಪ್ರದರ್ಶನ ಮಾಡಬಹುದಿತ್ತು. ಹಿಂದೆ ಸೋವಿಯತ್ ರಷ್ಯಾದ 'ಸಲ್ಯೂತ್7' ನೌಕೆಯಲ್ಲಿ ಪಯಣಿಸಿದ ರಾಕೇಶ್ ಶರ್ಮಾ ಕೂಡ ಯೋಗಾಸನ ಹಾಕಿ, ರಷ್ಯನ್ ಗಗನಯಾತ್ರಿಗಳನ್ನು ಅವಾಕ್ಕಾಗಿಸಿದ್ದರು. ಅಂದಿನ (1985ರ) ಮಟ್ಟಿಗೆ ಅದು 'ಅತ್ಯಂತ ಕೌತುಕದ ಮೆಡಿಕಲ್ ಪ್ರಯೋಗ' ಎಂದು ನಾಸಾ ವರದಿ ಮಾಡಿತ್ತು.

ಅತ್ಯಲ್ಪ ಗುರುತ್ವದಲ್ಲಿ ಏನೇನು ಹೇಗೆ ಹೇಗೆ ವರ್ತಿಸುತ್ತವೆ ಎಂಬುದರ ಕುರಿತು ನೂರಾರು ತಮಾಷೆಯ 'ವೈಜ್ಞಾನಿಕ' ಪ್ರಯೋಗಗಳು ಬಾಹ್ಯಾಕಾಶ ಅಟ್ಟಣಿಗೆಗಳಲ್ಲಿ ನಡೆದಿವೆ. ಅಲ್ಲಿ ಮೋಂಬತ್ತಿ ಉರಿಸಿದರೆ ಗೋಲಾಕಾರದ ಜ್ವಾಲೆ ಹೊಮ್ಮುತ್ತದೆ; ಬಾಯಿ ಮುಕ್ಕಳಿಸಿ ಉಗುಳಿದರೆ ಅದೂ ಚೆಂಡಿನಂತೆ ಅಥವಾ ಮುತ್ತಿನ ಉಂಡೆಯಂತೆ ಮುಖದ ಎದುರೇ ತೇಲಾಡುತ್ತದೆ ಎಂಬುದು ನಮಗೆಲ್ಲ ಗೊತ್ತು. ಅದರಾಚೆಗೆ, ಮಕ್ಕಳಿಗೂ ಮುದ ನೀಡುವ ಯೋ-ಯೋ ಎಂಬ ಗಿರಗಿಟ್ಟೆಯನ್ನು ಸುತ್ತಿಸಿದ್ದೇನು, ಹಸಿರುಪಾಚಿಯನ್ನು ಹಾವಿನಂತೆ ಓಡಾಡಿಸಿದ್ದೇನು, ಹಂದಿಮೂತಿಯ, ಎಂಟು ಕಾಲುಗಳ ಟಾರ್ಡಿಗ್ರಾಡ್ ಎಂಬ ಅತಿಸೂಕ್ಷ್ಮ ಗಾತ್ರದ ಮುದ್ದು ಜೀವಿಗಳ ಪ್ರಣಯಕೇಳಿಯ ಪರೀಕ್ಷೆ ಮಾಡಿದ್ದೇನು... ಪಟ್ಟಿ ಸಾಕಷ್ಟು ಉದ್ದ ಇದೆ.

ಬಾಹ್ಯಾಕಾಶ ನಿಲ್ದಾಣದ ಆ ಏಕಾಂತವಾಸದ ನಡುವೆ ಯಾತ್ರಿಗಳಿಗೆ ಮನರಂಜನೆಯೂ ಬೇಕಲ್ಲ? ಅಂಥ ಕತೆಗಳೂ ಇಲ್ಲಿ ಪುಟ ತುಂಬಿಸುವಷ್ಟಿದೆ. ಸ್ಕಾಟ್ ಕೆಲ್ಲಿ ಮತ್ತು ಮಾರ್ಕ್ ಕೆಲ್ಲಿ ಎಂಬಿಬ್ಬರು ಅವಳಿ ಜವಳಿ ಗಗನಯಾತ್ರಿಗಳ ಕತೆ ಕೇಳಿ: ಐಎಸ್‌ಎಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದ ಸ್ಕಾಟ್‌ನ ಜನ್ಮದಿನದ ಉಡುಗೊರೆಯಾಗಿ ಅಣ್ಣ ಮಾರ್ಕ್ 2016ರಲ್ಲಿ ಒಂದಿಡೀ ಗೊರಿಲ್ಲಾ ಛದ್ಮವೇಷವನ್ನೇ ಮೇಲಕ್ಕೆ ಕಳ್ಳಸಾಗಣೆ ಮಾಡಿ ಕಳಿಸಿದ. ಐಎಸ್‌ಎಸ್‌ನಲ್ಲಿದ್ದ ಐರೋಪ್ಯ ಬಾಹ್ಯಾಕಾಶ ಸಂಘದ ಟಿಮ್ ಪೀಕ್ ಎಂಬಾತನಿಗೆ ಇದು ಗೊತ್ತಿರಲಿಲ್ಲ. ಸ್ಕಾಟ್ ಮೆಲ್ಲಗೆ ಗೊರಿಲ್ಲಾ ವೇಷ ತೊಟ್ಟು ಜಿಗಿಯುತ್ತ (ಅಲ್ಲಿ ಎಲ್ಲರೂ ಜಿಗಿಯುತ್ತ, ತೇಲುತ್ತಲೇ ಚಲಿಸಬೇಕು ಅನ್ನಿ) ಬಂದಾಗ ಟಿಮ್ ಗಾಬರಿಯಾಗಿ ಕೂಗುತ್ತ ಚೀರುತ್ತ ಓಡಿದ್ದೂ, ಈತ ಆತನನ್ನು ಅಟ್ಟಿಸಿಕೊಂಡು ಈಜಿದ್ದೂ ಭಲೇ ತಮಾಷೆಯ ದೃಶ್ಯವಾಗಿ ಈಗಲೂ ಅದನ್ನು ಯೂಟ್ಯೂಬ್‌ನಲ್ಲಿ ನೋಡಬಹುದು.

ಈಗಿನ ತಂಡದ ಮುಖ್ಯಸ್ಥೆಯಾಗಿ 56ರ ಹರಯದ ಪೆಗ್ಗಿ ವಿಟ್ಸನ್ ಹೋಗಲಿದ್ದಾರಲ್ಲ? ಅಮೆರಿಕದ ಮಟ್ಟಿಗೆ ಅವರಷ್ಟು ದೀರ್ಘ ಕಾಲ (ಒಟ್ಟು 675 ದಿನಗಳು) ಬಾಹ್ಯಾಕಾಶದಲ್ಲಿ ಕಳೆದವರು ಬೇರೆ ಯಾರೂ ಇಲ್ಲ. ಆಕೆ ಕೂಡ 2017ರ ಉಡ್ಡಾಣದಲ್ಲಿ ತಮಾಷೆಗೆಂದು ಸರಕು ಸಾಗಿಸುವ ಮೂಟೆಯಲ್ಲಿ ಅಡಗಿ ಕೂತರು. ಇತರ ಅಮೆರಿಕನ್ ಸಿಬ್ಬಂದಿ ಅವರಿದ್ದ ಮೂಟೆಯನ್ನು ತಳ್ಳಿಕೊಂಡು ಐಎಸ್‌ಎಸ್‌ಗೆ ಅಂಟಿಕೊಂಡಿದ್ದ ರಷ್ಯನ್ ಕಕ್ಷೆಗೆ ಹೋಗಿ ಬಿಚ್ಚಿದರು. ಮೂಟೆಯಿಂದ ಹಠಾತ್ತಾಗಿ ಹಿಗ್ಗಿ ಎದ್ದ ಪೆಗ್ಗಿಯನ್ನು ನೋಡಿ ಕಕ್ಕಾಬಿಕ್ಕಿಯಾದರು. ಕಳೆದ ವರ್ಷ ಸುನಿತಾ ಮತ್ತು ವಿಲ್ಮೋರ್ ಅವರನ್ನು ಭೂಮಿಗೆ ಕರೆ ತರುವ ಸಿದ್ಧತೆಗೆಂದು ಮುಚ್ಚಳ ತೆರೆದಾಗ ಅನ್ಯಲೋಕದ ಜೀವಿಯಂತೆ ಮುಖವಾಡ ಹಾಕಿದ್ದ ನಿಕ್ ಹೇಗ್ ಎಂಬಾತ ಈಜುತ್ತ ಈಚೆ ಬಂದು ವೀಕ್ಷಕರನ್ನು ತಬ್ಬಿಬ್ಬು ಮಾಡಿದ್ದ.

ಅಂಥ ಚೆಲ್ಲಾಟಗಳ ಕತೆ ಹೇಗೂ ಇರಲಿ. ಸೌರಮಂಡಲದ ಏಕೈಕ ಜೀವಂತ ಗ್ರಹವೆನಿಸಿ, ಅದೆಷ್ಟು ಕೋಟಿ ಜೀವಿಗಳನ್ನು ಪೊರೆಯುತ್ತ ತನ್ನಷ್ಟಕ್ಕೆ ಸುತ್ತುತ್ತಿರುವ ಈ ಸುಂದರ ಸಮೃದ್ಧ ಭೂಮಿಯನ್ನು ಏಕಾಂತದಲ್ಲಿ ನೋಡುವುದೇ ಒಂದು ಅಲೌಕಿಕ ಅನುಭವ ತಾನೆ? ಇಲ್ಲಿ ನಾಯಕರೆನಿಸಿದವರು ನಮ್ಮನ್ನೇ ಆಯುಧಗಳನ್ನಾಗಿ ಮಾಡಿ ಬಡಿದಾಡಿಕೊಳ್ಳುತ್ತ ಈ ಅಪೂರ್ವ 'ಗೃಹ'ದ ಚಂದಿ ಉಡಾಯಿಸುತ್ತಿದ್ದಾರಲ್ಲ? ಆ ಎತ್ತರದಲ್ಲಿ ಯೋಗಾಸನ ಹಾಕಿ ಇದನ್ನೆಲ್ಲ ನೋಡುವ ವಿಷಾದ ಯೋಗ ಹೇಗಿರುತ್ತದೊ?



ಚುರುಮುರಿ



ಖರೀದಿಗೆ ಬೇಕಿದೆ!

• ಗುರು ಪಿ.ಎಸ್.

'ಸಹಿಸಲಾರೆ, ಈ ಅವಮಾನವನ್ನ ಯಾವುದೇ ಕಾರಣಕ್ಕೂ ಸಹಿಸಲಾರೆ' ಎಂದು ವೈಟ್ ಆ್ಯಂಡ್ ವೈಟ್ ಡ್ರೆಸ್ ಹಾಕ್ಕೊಂಡು, ಹೆಗಲ ಮೇಲೊಂದು ಕಾಸ್ಟ್ಲಿ ಶಾಲು ಏರಿಸಿಕೊಂಡು ಬಂದರು ಪೊಲಿಟಿಷಿಯನ್ ಮುದ್ದಣ್ಣ ಸಾಹೇಬ್ರು.

'ಏನ್ ಸರ್? ಏನು ಸಹಿಸಲ್ಲ ಅಂದಿದ್ದು' ಕೇಳಿದ ಪಿ.ಎ. ವಿಜಿ.

'ಫಂಕ್ಷನ್‌ಗೆ ಹೋಗಿ, ಆ ಕಪ್‌ಗೊಂದು ಮುತ್ತಿಟ್ಟದ್ದಕ್ಕೆ ಇಷ್ಟೆಲ್ಲ ರಾದ್ಧಾಂತ ಆಯ್ತು. ರಾಜಕಾರಣಿಗಳಿಗೂ ಕ್ರಿಕೆಟ್‌ಗೂ ಏನ್ ಸಂಬಂಧ ಅಂತ ಎಲ್ಲರೂ ಕೇಳ್ತಿದ್ದಾರೆ' ಸಿಟ್ಟಲ್ಲೇ ಹೇಳಿದರು ಮುದ್ದಣ್ಣ.

'ಆಗಿರೋದು ಸಣ್ಣ ಅವಘಡವೇನೂ ಅಲ್ವಲ್ಲ ಸರ್, ವಿರೋಧ ಬರೋದು ಸ್ವಾಭಾವಿಕ' ಹೆದರುತ್ತಲೇ ಹೇಳಿದ ವಿಜಿ.

'ಇನ್ಮುಂದೆ ಅದು ಹೇಗೆ ಇಂತಹ ಪ್ರಶ್ನೆ ಕೇಳುತ್ತಾರೋ ನೋಡ್ತೇನೆ'.

'ಅಂದ್ರೆ ಸರ್?'

'ಆ ಫ್ರಾಂಚೈಸಿಯನ್ನೇ ನಾನು ಖರೀದಿಸ್ತೀನಿ, ಆಗ ಓನರ್ ಆಗಿ ಕಪ್‌ಗೆ ಮುತ್ತಿಡ್ತೀನಿ'.

'ಆದರೂ, ಪ್ರೈವೆಟ್ ಫ್ರಾಂಚೈಸಿಗೆ ವಿಧಾನ ಸೌಧದ ಮೆಟ್ಟಿಲುಗಳ ಮೇಲೆ ಸನ್ಮಾನ ಮಾಡಿದ್ದು ಎಷ್ಟು ಸರಿ ಅಂತ ಎಲ್ಲರೂ ಕೇಳ್ತಿದ್ದಾರೆ ಸರ್?'

'ನನ್ನ ಕಿವಿಗೂ ಬಿದ್ದಿದೆ. ಆ ಮೆಟ್ಟಿಲುಗಳ ಸಮೇತ ವಿಧಾನಸೌಧವನ್ನೇ ಖರೀದಿ ಮಾಡಬೇಕು ಅಂತಿದ್ದೀನಿ', ದೃಢವಾಗಿ ಹೇಳಿದರು ಸಾಹೇಬ್ರು.

'ಮತ್ತೆ ಚಿನ್ನಸ್ವಾಮಿ ಸ್ಟೇಡಿಯಂ ಸರ್...?'

'ಅದೂ ಕೊಡ್ತಾರಂತ ಕೇಳಿ ನೋಡಿ'.

'ಸರ್, ಇಷ್ಟೆಲ್ಲ ಖರೀದಿ ಮಾಡಿದ ಮೇಲೆ ಇ.ಡಿ.ಯವರು ದಾಳಿ ಮಾಡಲ್ವ?'

'ಇಂತಹ ಎಷ್ಟ್ ದಾಳಿ ನೋಡಿಲ್ಲ ನಾನು, ಅವರನ್ನೂ ಖರೀದಿ ಮಾಡಿದರಾಯ್ತು ಬಿಡ್ರೀ' ಗಹಗಹಿಸಿ ನಕ್ಕರು ಸಾಹೇಬ್ರು.

ಅಷ್ಟರಲ್ಲಿ ಫೋನ್ ರಿಂಗ್ ಆಯ್ತು.

'ಯಾರದು ರೀ ಫೋನ್'.

'ಸರ್, ಹೈಕಮಾಂಡ್‌ದು?', 'ಏನಂತೆ?'

'ನಿಮ್ ಪೋಸ್ಟ್ ಅನ್ನೇ ಯಾರೋ ಖರೀದಿ ಮಾಡಿದ್ರಂತೆ' ಎಂದು ವಿಜಿ ಹೇಳುತ್ತಿದ್ದಂತೆ, ಸಾಹೇಬ್ರಿಗೆ ಸಿಟ್ಟು ನೆತ್ತಿಗೇರಿತು. 'ಆ ಹೈಕಮಾಂಡ್ ಅನ್ನೇ ಪರ್ಚೇಸ್ ಮಾಡೇ ಬಿಡೋಣ' ಎಂದು ಎದ್ದು ನಿಂತರು!

ದಿನದ ಟ್ವೀಟ್

ಮಗುವಿನ ಹಕ್ಕನ್ನು ರಕ್ಷಿಸೋಣ



ಆಟವು ಮೋಜು ಮಾಡುವುದಕ್ಕಿಂತ ಹೆಚ್ಚಿನದು. ತಂಡಸ್ಫೂರ್ತಿಯನ್ನು ಗಟ್ಟಿಗೊಳಿಸುತ್ತದೆ, ಸಂತಸ ನೀಡುತ್ತದೆ ಮತ್ತು ಸವಾಲು ಎದುರಿಸುವುದನ್ನು ಕಲಿಸುತ್ತದೆ. ಆಟವಾಡಲು, ಕಲಿಯಲು ಹಾಗೂ ಬೆಳವಣಿಗೆ ಹೊಂದಲು ಪ್ರತಿ ಮಗು ಹೊಂದಿರುವ ಹಕ್ಕನ್ನು ರಕ್ಷಿಸಲು ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣ...

ಸಚಿನ್ ತೆಂಡೂಲ್ಕರ್, ಮಾಜಿ ಕ್ರಿಕೆಟಿಗ

ಕಿಡಿನುಡಿ



ಗೋಧ್ರಾ ಘಟನೆಯಲ್ಲಿ ಎಷ್ಟು ಜನ ಸತ್ತರು? ಚಾಮರಾಜನಗರದಲ್ಲಿ ಕೋವಿಡ್ ಸಾಂಕ್ರಾಮಿಕದ ವೇಳೆ ಆಮ್ಲಜನಕ ದೊರೆಯದೆ ಕೆಲವರು ಮೃತಪಟ್ಟರು. ಆಗ ಮುಖ್ಯಮಂತ್ರಿ ಆಗಿದ್ದವರು ಯಾರು? ಅವರು ರಾಜೀನಾಮೆ ನೀಡಿದರೇ? ಆರ್‌ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ ಕಾಲ್ತುಳಿತ ಪ್ರಕರಣವನ್ನು ಬಿಜೆಪಿಯು ರಾಜಕೀಯವಾಗಿ ಬಳಸಿಕೊಳ್ಳುತ್ತಿದೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಸೋಮವಾರ, 12-6-2000

• ಭೀಕರ ರಸ್ತೆ ಅಪಘಾತದಲ್ಲಿ ರಾಜೇಶ್ ಪೈಲಟ್ ಸಾವು

ಜೈಪುರ, ಜೂನ್ 11– ಕೇಂದ್ರದ ಮಾಜಿ ಸಚಿವ ರಾಜೇಶ್ ಪೈಲಟ್ (55) ಇಂದು ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ನಿಧನರಾದರು.

ರಾಜಸ್ತಾನದ ದೌಸಾ ಜಿಲ್ಲೆಯ ಭಂದಾನಾಕ್ಕೆ ಸಮೀಪ ಮಧ್ಯಾಹ್ನ ಎರಡೂ ಮುಕ್ಕಾಲು ಗಂಟೆಗೆ ಪೈಲಟ್ ಸ್ವತಃ ತಾವೇ ಓಡಿಸುತ್ತಿದ್ದ ಜೀಪು, ರಾಜಸ್ತಾನದ ಸರ್ಕಾರಿ ಬಸ್ಸಿಗೆ ಡಿಕ್ಕಿ ಹೊಡೆದಾಗ ತೀವ್ರವಾಗಿ ಗಾಯಗೊಂಡರು. ತಕ್ಷಣ ಅವರನ್ನು ಸವಾಯಿ ಮಾನ್‌ಸಿಂಗ್ ಆಸ್ಪತ್ರೆಗೆ ಸೇರಿಸಲಾಗಿದ್ದರೂ ಅವರನ್ನು ಉಳಿಸಿಕೊಳ್ಳುವ ವೈದ್ಯರ ಪ್ರಯತ್ನ ಫಲಕಾರಿಯಾಗಲಿಲ್ಲ.

'ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿದರೂ ಕೆಲವು ಗಂಟೆಗಳ ಕಾಲ ಸಾವಿನೊಂದಿಗೆ ಹೋರಾಡಿದ ಪೈಲಟ್ ಕೊನೆಯುಸಿರೆಳೆದರು' ಎಂದು ಆಸ್ಪತ್ರೆಯ ಮುಖ್ಯಸ್ಥ ಪ್ರೊ.ಎಸ್.ಆರ್. ದಿವಾಕರ್ ತಿಳಿಸಿದರು.

• ಮೋಸದಾಟ: ಕಪಿಲ್‌ದೇವ್, ಅಜರ್, ಜಡೇಜ ವಿಚಾರಣೆ

ನವದೆಹಲಿ, ಜೂನ್ 11– ಕ್ರಿಕೆಟ್‌ನಲ್ಲಿನ ಮೋಸದಾಟಕ್ಕೆ ಸಂಬಂಧಿಸಿದಂತೆ ಕೆಲವು ಕ್ರಿಕೆಟ್ ಆಟಗಾರರು ಮತ್ತು ಬುಕ್ಕಿಗಳನ್ನು ಸಂಪರ್ಕಿಸಲು ಮಾಜಿ ಕ್ರಿಕೆಟಿಗ ಅಜಯ್ ಶರ್ಮಾ ಕಾನೂನುಬಾಹಿರವಾಗಿ ಉಪಯೋಗಿಸಿದ ಮೊಬೈಲ್ ದೂರವಾಣಿಯ ಸಂಖ್ಯೆಯನ್ನು ಕೇಂದ್ರೀಯ ತನಿಖಾ ಸಂಸ್ಥೆ (ಸಿಬಿಐ) ಪತ್ತೆ ಹಚ್ಚಿದೆ.

ಈ ನಡುವೆ ಮೋಸದಾಟಕ್ಕೆ ಸಂಬಂಧಿಸಿದಂತೆ ಮುಂದಿನ ವಾರ ಭಾರತ ತಂಡದ ಕೋಚ್ ಕಪಿಲ್‌ದೇವ್, ಆಟಗಾರರಾದ ಮಹಮದ್ ಅಜರುದ್ದೀನ್, ಅಜಯ್ ಜಡೇಜ ಮತ್ತು ಮಾಜಿ ಕ್ರಿಕೆಟಿಗರು– ಹಾಲಿ ವೀಕ್ಷಕ ವಿವರಣೆಗಾರರಾದ ಸುನೀಲ್ ಗಾವಸ್ಕರ್ ಮತ್ತು ರವಿ ಶಾಸ್ತ್ರಿ ಅವರನ್ನು ವಿಚಾರಿಸಲು ಸಿಬಿಐ ನಿರ್ಧರಿಸಿದೆ.

50 ವರ್ಷಗಳ ಹಿಂದೆ

ಗುರುವಾರ, 12-6-1975

• ಹೆಸರು ಸಾಗರ– ನೀರಿಗೆ ಬರ

ಚಿತ್ರದುರ್ಗ, ಜೂನ್ 11– ಈಚೀಚೆಗೆ ಅದೊಂದು 'ಮರೀಚಿಕೆ' ಆಗಿದೆ. ನೀರಿಗಾಗಿ ನಿರ್ಮಾಣವಾದ ಕಟ್ಟೆ. ಮುಕ್ಕಾಲು ಶತಮಾನದ ಹಿಂದೆ ಹಂಚಿಕೊಳ್ಳುವವರ ಸಂಖ್ಯೆ ಕಡಿಮೆ ಇತ್ತು. ನೀರು ಸಾಕಾಗಿತ್ತು. ಬೆಳೆವ ಬಯಲು ಬೆಳೆಯಿತು, ಬಂಜರಾಯಿತು.

ಜಿಲ್ಲೆಯ ವಾಣಿವಿಲಾಸ ಸಾಗರ ಸುಮಾರು ಮೂರು ದಶಕಗಳಿಂದ ಇದ್ದೂ ಇಲ್ಲದಂತಾಗಿದೆ. ಕಟ್ಟೆ ಇದೆ, ಸಾಕಷ್ಟು ನೀರಿಲ್ಲ. ಈಗ ನೀರನ್ನೂ ತುಂಬುವ ಪ್ರಯತ್ನ. ಹಿರಿಯೂರು ತಾಲ್ಲೂಕಿನ ರೈತರಲ್ಲಿ ಮತ್ತೆ ಆಶಾಭಾವನೆಯನ್ನು ಮೂಡಿಸಿದೆ.

• ತೈಲ ರಾಷ್ಟ್ರಗಳಿಗೆ ರಾಜ್ಯದಿಂದ ಮಾಂಸ ರಫ್ತಿಗೆ ಯೋಜನೆ

ಬೆಂಗಳೂರು, ಜೂನ್ 11– ರಾಜ್ಯದಿಂದ ಪರ್ಷಿಯನ್ ಖಾರಿ ರಾಷ್ಟ್ರಗಳಿಗೆ ಮಾಂಸ ರಫ್ತು ಮಾಡಲು ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ಆ ಬಗ್ಗೆ ಪರಿಶೀಲಿಸಲು ಇತ್ತೀಚೆಗೆ ಪ್ರವಾಸ ಮಾಡಿದ ವಿಶ್ವಸಂಸ್ಥೆ ತಜ್ಞರ ತಂಡವೊಂದು ಯೋಜನಾ ವರದಿಯೊಂದನ್ನು ಸಿದ್ಧಪಡಿಸಲಿದೆ ಎಂದು ಕೃಷಿ ಸಚಿವ ಎನ್. ಚಿಕ್ಕೇಗೌಡ ಅವರು ಮಂಗಳವಾರ ಇಲ್ಲಿ ತಿಳಿಸಿದರು.

ಬಂಡೂರು ಜಾತಿ ಕುರಿ ಮಾಂಸಕ್ಕೆ ಹೆಚ್ಚು ಬೇಡಿಕೆ ಇದೆಯೆಂದು ಅವರು ಹೇಳಿದರು.

ಸಂಗತ

ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಕ್ಷಾಮ

ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆಯಿಂದ ಸರ್ಕಾರ ಸಾಧಿಸಿರುವುದಾದರೂ ಏನು?

• ರಾಜಕುಮಾರ ಕುಲಕರ್ಣಿ

ಜಮಖಂಡಿ ನಗರದ ಬಾಗಲಕೋಟೆ ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ನಡೆದ ಕಾರ್ಯಾಗಾರವೊಂದರ ಸಮಾರೋಪದಲ್ಲಿ ವಿಶ್ರಾಂತ ಕುಲಪತಿ ಪ್ರೊ.ಎನ್. ನರಸಿಂಹಮೂರ್ತಿ ಅವರು, 'ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖ ಆಗುತ್ತಿದೆ. ಈ ಸಂಖ್ಯೆ ಹೆಚ್ಚಿಸುವ ಕೆಲಸವನ್ನು ಸರ್ಕಾರ ಮಾಡಬೇಕು' ಎಂದು ಹೇಳಿರುವುದು ಪತ್ರಿಕೆಯಲ್ಲಿ ವರದಿಯಾಗಿದೆ. ಅವರ ಮಾತು ಸತ್ಯಕ್ಕೆ ಹತ್ತಿರವಾದುದು. ಪ್ರಸ್ತುತ, ರಾಜ್ಯದಲ್ಲಿನ ಸರ್ಕಾರಿ ವಿಶ್ವವಿದ್ಯಾಲಯಗಳ ಸ್ಥಿತಿ ಶೋಚನೀಯವಾಗಿದೆ.

ರಾಜ್ಯದಲ್ಲಿ ಈ ಮೊದಲು ಕಂದಾಯ ವಿಭಾಗಕ್ಕೊಂದರಂತೆ ವಿಶ್ವವಿದ್ಯಾಲಯಗಳಿದ್ದವು. ಪ್ರತಿ ವಿಶ್ವವಿದ್ಯಾಲಯದಡಿ ಕಾಲೇಜುಗಳ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದ್ದು, ಪ್ರತಿವರ್ಷ ವಿದ್ಯಾರ್ಥಿಗಳ ಪ್ರವೇಶಕ್ಕೆ ಸ್ಪರ್ಧೆಯ ವಾತಾವರಣ ಇರುತ್ತಿತ್ತು. ವಿಶ್ವವಿದ್ಯಾಲಯಗಳ ಸಂಖ್ಯೆ ಕಡಿಮೆ ಇದ್ದಾಗ, ಅವುಗಳ ನಿರ್ವಹಣೆಗೆ ಅಗತ್ಯವಾದ ಹಣಕಾಸಿನ ನೆರವು ನೀಡುವುದು ಸರ್ಕಾರಕ್ಕೆ ಸುಲಭವಾಗಿತ್ತು. ಭೌಗೋಳಿಕ ಅಂತರವನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ನಾತಕೋತ್ತರ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿತ್ತು. ಬೋಧನೆ ಮತ್ತು ಸಂಶೋಧನೆಯ ಮೂಲಕ ವಿಶ್ವವಿದ್ಯಾಲಯಗಳು ರಾಜ್ಯದಲ್ಲಿ ಅತ್ಯುತ್ತಮ ಶೈಕ್ಷಣಿಕ ಪರಿಸರವನ್ನು ನಿರ್ಮಿಸಿದ್ದವು.


ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಆಯಾ ಕಾಲದ ಸರ್ಕಾರಗಳು ಹಟಕ್ಕೆ ಬಿದ್ದಂತೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದವು. ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಸರ್ಕಾರ ತನ್ನ ಹಿಂಬಾಲಕರನ್ನೋ ಅಥವಾ ಪಕ್ಷನಿಷ್ಠರನ್ನೋ ಆಯಕಟ್ಟಿನ ಜಾಗದಲ್ಲಿ ಕೂರಿಸುವುದು ಎಲ್ಲರಿಗೂ ಗೊತ್ತಿರುವ ಬಹಿರಂಗ ಸತ್ಯ. ಒಂದರ್ಥದಲ್ಲಿ ವಿಶ್ವವಿದ್ಯಾಲಯಗಳು ಆಯಕಟ್ಟಿನ ಜಾಗಗಳನ್ನು ಅರಸುತ್ತಿದ್ದವರಿಗೆ ನೆಲೆ ಒದಗಿಸುವ ಪುನರ್ವಸತಿ ಕೇಂದ್ರಗಳಾಗಿವೆ.

ನಿರ್ದಿಷ್ಟ ಭೌಗೋಳಿಕ ವ್ಯಾಪ್ತಿಯಲ್ಲಿನ ಪದವಿ ಕಾಲೇಜುಗಳನ್ನು ಹೊಸದಾಗಿ ಅಸ್ತಿತ್ವಕ್ಕೆ ಬಂದ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಳಿಸಲಾಗುತ್ತದೆ. ಪರಿಣಾಮವಾಗಿ, ಎರಡು ಅಥವಾ ಎರಡಕ್ಕಿಂತ ಹೆಚ್ಚು ವಿಶ್ವವಿದ್ಯಾಲಯಗಳು ಈಗಾಗಲೇ ಅಸ್ತಿತ್ವದಲ್ಲಿರುವ ಕಾಲೇಜುಗಳನ್ನು ಸಮ ಪ್ರಮಾಣದಲ್ಲಿ ಹಂಚಿಕೊಳ್ಳುತ್ತವೆ. ಆಗ ವಿದ್ಯಾರ್ಥಿಗಳ ಸಂಖ್ಯೆಯ ಜೊತೆಗೆ ಆರ್ಥಿಕ ಸಂಪನ್ಮೂಲವೂ ಹಂಚಿಹೋಗುತ್ತದೆ. ಇದು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ದಾಖಲಾತಿ ಕಡಿಮೆಯಾಗಲು ಮಾತ್ರವಲ್ಲದೆ, ಆರ್ಥಿಕ ಸಂಪನ್ಮೂಲದ ಕೊರತೆಗೂ ಕಾರಣವಾಗುತ್ತದೆ.

ಹೊಸ ವಿಶ್ವವಿದ್ಯಾಲಯಗಳು ಮಾತ್ರವಲ್ಲದೆ, ಹಳೆಯ ವಿಶ್ವವಿದ್ಯಾಲಯಗಳೂ ಹಣಕಾಸಿನ ಬಿಕ್ಕಟ್ಟು ಎದುರಿಸುತ್ತಿವೆ. ರಾಜ್ಯದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳೆಂಬ ಮನ್ನಣೆಗೆ ಪಾತ್ರವಾದ ಸಂಸ್ಥೆಗಳಲ್ಲಿಯೂ ಸಿಬ್ಬಂದಿಗೆ ನಿಯಮಿತವಾಗಿ ವೇತನ ಪಾವತಿಯಾಗುತ್ತಿಲ್ಲ ಎನ್ನುವ ದೂರುಗಳಿವೆ.

ಪೂರ್ಣಕಾಲಿಕ ಬೋಧಕರಿಲ್ಲದೆ ಅತಿಥಿ ಉಪನ್ಯಾಸಕರಿಂದ ವಿಭಾಗಗಳ ಶೈಕ್ಷಣಿಕ ಚಟುವಟಿಕೆಗಳು ನಿರ್ವಹಿಸಲ್ಪಡುತ್ತಿವೆ. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾಲಯಗಳಲ್ಲಿನ ಸಮಸ್ಯೆಗಳೇ ಬೆಟ್ಟದಷ್ಟಿರುವಾಗ ಜಿಲ್ಲೆಗೊಂದು ವಿಶ್ವವಿದ್ಯಾಲಯ ಸ್ಥಾಪಿಸಿ ಸರ್ಕಾರ ಸಾಧಿಸಿರುವುದಾದರೂ ಏನು?

ವಿದ್ಯಾರ್ಥಿಗಳ ಕೊರತೆಗೆ ವಿಶ್ವವಿದ್ಯಾಲಯದಲ್ಲಿನ ಸಮಸ್ಯೆಗಳು ಮಾತ್ರವಲ್ಲದೆ, ಅಲ್ಲಿ ಬೋಧಿಸುತ್ತಿರುವ ವಿಷಯಗಳ ಜನಪ್ರಿಯತೆ ಕುಂಠಿತಗೊಳ್ಳುತ್ತಿರುವುದೂ ಕಾರಣವಾಗಿದೆ. ಸದ್ಯದ ಸಂದರ್ಭದಲ್ಲಿ, ವೃತ್ತಿಪರ ಕೋರ್ಸ್‌ಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿರುವುದರಿಂದ ವಿಜ್ಞಾನ ಮತ್ತು ಸಮಾಜ ವಿಜ್ಞಾನ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಭಾಷೆ ಮತ್ತು ಲಲಿತಕಲೆಗಳನ್ನು ಅಧ್ಯಯನ ಮಾಡಲು ವಿದ್ಯಾರ್ಥಿಗಳು ಆಸಕ್ತಿ ತೋರಿಸುತ್ತಿಲ್ಲ.



ದಶಕದ ಹಿಂದೆ ರಾಜ್ಯದಲ್ಲಿ ಪದವಿಪೂರ್ವ ಶಿಕ್ಷಣದ ಹಂತದಲ್ಲಿ ವೃತ್ತಿಪರ ಕೋರ್ಸ್‌ಗಳಿದ್ದವು. ಗ್ರಂಥಾಲಯ ವಿಜ್ಞಾನ, ಹೊಲಿಗೆ ಮತ್ತು ಕಸೂತಿ, ಬುಕ್ ಬೈಂಡಿಂಗ್‌ನಂಥ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಇತ್ತು. ಈ ವೃತ್ತಿಪರ ಕೋರ್ಸ್‌ಗಳ ಶಿಕ್ಷಣವನ್ನು ಪದವಿಪೂರ್ವ ಶಿಕ್ಷಣಕ್ಕೆ ತತ್ಸಮಾನವೆಂದು ಪರಿಗಣಿಸಲಾಗುತ್ತಿತ್ತು. ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳನ್ನು ಶಿಕ್ಷಕರ ತರಬೇತಿ ಕೋರ್ಸ್‌ಗೆ ಪ್ರವೇಶ ಪಡೆಯಲು ಅನರ್ಹರೆಂದು ಸರ್ಕಾರ ಹೊಸ ನಿಯಮ ಜಾರಿಗೊಳಿಸಿತು. ನಂತರ, ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಇಳಿಮುಖವಾಯಿತು.

ನಿರೀಕ್ಷಿತ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗದೇ ಇದ್ದಾಗ ಸಹಜವಾಗಿಯೇ ಆಯಾ ವಿಷಯಗಳ ಬೇಡಿಕೆ ಕುಸಿಯಲಾರಂಭಿಸುತ್ತದೆ. ಇನ್ನೊಂದೆಡೆ, ವೈದ್ಯಕೀಯ ಮತ್ತು ಎಂಜಿನಿಯರಿಂಗ್‌ನಂತಹ ವೃತ್ತಿಪರ ಕೋರ್ಸ್‌ಗಳು ಸೃಷ್ಟಿಸುತ್ತಿರುವ ಉದ್ಯೋಗಾವಕಾಶಗಳು ಆ ವಿಷಯಗಳತ್ತ ಹೆಚ್ಚಿನ ವಿದ್ಯಾರ್ಥಿಗಳು ಆಕರ್ಷಣೆಗೊಳ್ಳಲು ಕಾರಣವಾಗುತ್ತಿವೆ.

ಶಿಕ್ಷಣದ ಉದ್ದೇಶಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯಗಳ ಪಠ್ಯಕ್ರಮದಲ್ಲಿ ಬಹಳಷ್ಟು ಬದಲಾವಣೆಗಳಾಗಬೇಕಿದೆ. ವಿಶ್ವವಿದ್ಯಾಲಯಗಳಲ್ಲಿನ ಸಂಶೋಧನೆಯನ್ನು ಉದ್ಯೋಗ ಮತ್ತು ವೇತನ ಬಡ್ತಿ ವ್ಯಾಪ್ತಿಯಿಂದ ಹೊರತರಬೇಕು. ಉನ್ನತ ಶಿಕ್ಷಣಕ್ಕೆ ಎಲ್ಲರಿಗೂ ಪ್ರವೇಶ ಎನ್ನುವುದಕ್ಕಿಂತ ಆಸಕ್ತರಿಗೆ ಮಾತ್ರ ಅವಕಾಶ ಎನ್ನುವಂತಾಗಬೇಕು. ಹೆಚ್ಚಿನ ಸಂಖ್ಯೆಯಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದಕ್ಕಿಂತ, ಅಸ್ತಿತ್ವದಲ್ಲಿರುವ ವಿಶ್ವವಿದ್ಯಾಲಯಗಳನ್ನು ಅಭಿವೃದ್ಧಿಪಡಿಸುವತ್ತ ಸರ್ಕಾರ ಗಮನಹರಿಸಬೇಕು. ಸಾಧ್ಯವಾದರೆ, ಇನ್ನೂ ಅಭಿವೃದ್ಧಿಯನ್ನೇ ಕಾಣದ ವಿಶ್ವವಿದ್ಯಾಲಯಗಳನ್ನು ಮುಚ್ಚಿದರೂ ಯಾವುದೇ ತೊಂದರೆ ಇಲ್ಲ.

ವಾಚಕರ ವಾಣಿ

ಯಕ್ಷಗಾನದ ಪಾವಿತ್ರ್ಯ ಅಳಿಯದಿರಲಿ

ಕರಾವಳಿ ಕರ್ನಾಟಕದ ಯಕ್ಷಗಾನ ಕಲೆಯು ರಾಜಕೀಯ ಪಕ್ಷವೊಂದರ ಮತ್ತು ಅದರ ನಾಯಕನ ವೈಭವೀಕರಣದ ಗಾನಸುಧೆ ಹರಿಸುವ ದುರಂತದೆಡೆಗೆ ಸಾಗುತ್ತಿರುವುದನ್ನು ನಾರಾಯಣ ಎ. ಅವರ ಲೇಖನವು (ಪ್ರ.ವಾ., ಜೂನ್ 11) ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದೆ.

ಯಕ್ಷಗಾನ ಕಲೆಗೆ ಮೆತ್ತಿಕೊಳ್ಳುತ್ತಿರುವ ಈ ಕಳಂಕವನ್ನು ಹೀಗೆಯೇ ಬಿಟ್ಟರೆ ಅದು ಮುಂದೆ ಈ ಕಲೆಯ ಪಾವಿತ್ರ್ಯ, ಮೌಲ್ಯವನ್ನೂ ಹಾಳು ಮಾಡುತ್ತದೆ. ಜನಮಾನಸದಲ್ಲಿ ಹಲವು ಬಗೆಯ ವಿಷಮ ಭಾವಗಳನ್ನು ಬಿತ್ತಿ ಪೋಷಿಸ ತೊಡಗುತ್ತದೆ. ಭವಿಷ್ಯದ ಅವಘಡಗಳಿಂದ ಈ ಕಲೆಯನ್ನು ಪಾರು ಮಾಡಲು ಹಿರಿಯ ಕಲಾವಿದರು, ವಿದ್ವಾಂಸರು, ಚಿಂತಕರು ದೊಡ್ಡ ಸ್ತರದಲ್ಲಿ ಸೂಕ್ತ ಕ್ರಮವಹಿಸುವ ಅನಿವಾರ್ಯ ಇದೆ.

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಪ್ಲಾಸ್ಟಿಕ್ ನಿಷೇಧ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು

ರಾಜ್ಯ ಸರ್ಕಾರವು ಆಗಸ್ಟ್ 15ರಿಂದ ಅನ್ವಯ ಆಗುವಂತೆ, ಮುಜರಾಯಿ ದೇಗುಲಗಳಲ್ಲಿ ಪ್ಲಾಸ್ಟಿಕ್ ಬಳಕೆಗೆ ನಿಷೇಧ ಹೇರಲು ಮುಂದಾಗಿರುವುದು ಪ್ರಶಂಸನೀಯ. ಆದರೆ, ಈ ನಿಯಮ ಎಷ್ಟರಮಟ್ಟಿಗೆ ಜಾರಿಯಾಗಲಿದೆ ಎಂಬುದರ ಮೇಲೆ ಅದರ ಯಶಸ್ಸು ನಿಂತಿದೆ. ಈ ಹಿಂದೆ, ದೇವಾಲಯಗಳಲ್ಲಿ ಮೊಬೈಲ್ ಫೋನ್ ಬಳಕೆಗೆ ನಿಷೇಧ ವಿಧಿಸಲಾಗಿತ್ತು. ಸಾರ್ವಜನಿಕ ಸ್ಥಳಗಳ ಹತ್ತಿರ ತಂಬಾಕು ಉತ್ಪನ್ನಗಳ ಮಾರಾಟದ ಮೇಲೂ ನಿರ್ಬಂಧ ಹೇರಲಾಗಿತ್ತು. ಆದರೆ, ಸರ್ಕಾರದ ಈ ಆದೇಶವು ಇಂದಿಗೂ ಸರಿಯಾಗಿ ಕಾರ್ಯರೂಪಕ್ಕೆ ಬಂದಿಲ್ಲ.

ಸರ್ಕಾರವು ಈ ಬಾರಿ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಬೇಕು. ದೇಗುಲದ ಸಿಬ್ಬಂದಿ ಮತ್ತು ಭಕ್ತರಿಗೆ ಪ್ಲಾಸ್ಟಿಕ್‌ನ ಹಾನಿಕಾರಕ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಬೇಕು.

ವಿಜಯಕುಮಾರ್ ಎಚ್.ಕೆ., ರಾಯಚೂರು

ಬೆಂಗಳೂರು ಉತ್ತರ ಜಿಲ್ಲೆ: ಅಸಂಬದ್ಧ ಪ್ರಲಾಪ

ತುಮಕೂರು ಜಿಲ್ಲೆಯನ್ನು 'ಬೆಂಗಳೂರು ಉತ್ತರ ಜಿಲ್ಲೆ'ಯಾಗಿ ಮಾರ್ಪಡಿಸುವ ದಿಸೆಯಲ್ಲಿ ಸಿದ್ಧತೆ ನಡೆದಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರು ಹೇಳಿರುವುದು ವರದಿಯಾಗಿದೆ (ಪ್ರ.ವಾ., ಜೂನ್ 11). ಇದು ಅಕ್ಷರಶಃ ಅಸಂಬದ್ಧ ಪ್ರಲಾಪವಾಗಿದೆ.

ಹತ್ತು ತಾಲ್ಲೂಕುಗಳನ್ನು ಒಳಗೊಂಡಿರುವ ತುಮಕೂರು ಜಿಲ್ಲೆಗೆ ತನ್ನದೇ ಆದ ಭೌಗೋಳಿಕ, ಸಾಂಸ್ಕೃತಿಕ, ಧಾರ್ಮಿಕ, ಐತಿಹಾಸಿಕ ಪರಂಪರೆ ಇದೆ. ಮೈಸೂರು ಮಹಾರಾಜರ ಆಳ್ವಿಕೆ ಕಾಲದಿಂದಲೂ ಸ್ವತಂತ್ರ ಜಿಲ್ಲೆಯಾಗಿಯೇ ಗುರುತಿಸಲ್ಪಟ್ಟಿದೆ. ಹೀಗಿರುವ ಪರಿಪೂರ್ಣ ಜಿಲ್ಲೆಯೊಂದನ್ನು ಬೆಂಗಳೂರಿಗೆ ಸೇರ್ಪಡೆಗೊಳಿಸುವ ಪ್ರಯತ್ನವು ಸ್ವಾರ್ಥ ಹಾಗೂ ಕುಟಿಲ ರಾಜಕೀಯದ ಹುನ್ನಾರ ಎನಿಸುತ್ತದೆ.

ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯಾಗಿ ಮಾಡಿರುವುದನ್ನು ಸಚಿವರು ಉದಾಹರಿಸಿದ್ದಾರೆ. ಆದರೆ, ಆ ಜಿಲ್ಲೆಯು ಈ ಮೊದಲು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಗೊಳಪಟ್ಟು, ಬೆಂಗಳೂರಿನ ಒಂದು ಭಾಗವೇ ಆಗಿತ್ತು. ಈಗ ಅದೇ ಜಾಡಿನಲ್ಲಿ ತುಮಕೂರನ್ನು 'ಬೆಂಗಳೂರು ಉತ್ತರ ಜಿಲ್ಲೆ' ಆಗಿಸಲು ಹೊರಟಿರುವುದು ಕುತಂತ್ರ, ಕುತರ್ಕದ ರಾಜಕೀಯ ಎನಿಸುತ್ತದೆ.

ಆರ್.ಎಸ್. ಅಯ್ಯರ್, ತುಮಕೂರು

ತಿರಸ್ಕೃತರ ಚಾವಡಿ!

'ಚಿಂತಕರ ಚಾವಡಿ' ಎಂದೇ ಕರೆಸಿಕೊಳ್ಳುವ ವಿಧಾನ ಪರಿಷತ್ತಿಗೆ ಸಾಹಿತ್ಯ, ಕಲೆ, ಸಂಗೀತ, ಶಿಕ್ಷಣ, ಸಮಾಜ ಸೇವೆಯಂತಹ ಕ್ಷೇತ್ರಗಳಲ್ಲಿ ದುಡಿದ ಗಣ್ಯರನ್ನು ನೇಮಕ ಮಾಡಬೇಕಿದೆ (ಆಳ–ಅಗಲ, ಜೂನ್ 11). ಆದರೆ, ಕೆಳಮನೆಗೆ ಮಾರ್ಗದರ್ಶನ ಮಾಡುವ ಬುದ್ಧಿಜೀವಿಗಳು, ಚಿಂತಕರು ಇರಬೇಕಾದ ಮೇಲ್ಮನೆಗೆ ಇಂದು ನೇರ ಚುನಾವಣೆಗಳಲ್ಲಿ ಮತದಾರರಿಂದ ತಿರಸ್ಕೃತಗೊಂಡವರನ್ನು ನಾಮನಿರ್ದೇಶನ ಮಾಡಲಾಗುತ್ತಿದೆ. ಒಟ್ಟಾರೆ ಮೇಲ್ಮನೆಯು ತಿರಸ್ಕೃತರ ಮನೆಯಾಗಿರುವುದು ವಿಪರ್ಯಾಸ.

ಚಂದ್ರು ಪಾಟೀಲ್, ಹುಳ್ಳಿಹಾಳ

ಆನೆ ಕಾಟ ತಪ್ಪುವುದಿಲ್ಲ...

'ಆನೆ- ಮಾನವ ಸಂಘರ್ಷ ತಡೆಗೆ ಜೇನುನೊಣ ಯೋಜನೆ' ಜಾರಿಗೊಳಿಸಲು ಸರ್ಕಾರ ಮುಂದಾಗಿರುವ ಬಗ್ಗೆ ವರದಿಯಾಗಿದೆ. ಜೇನುನೊಣ ಇರುವ ಪ್ರದೇಶಕ್ಕೆ ಆನೆಗಳು ಬರುವುದಿಲ್ಲ. ಹೀಗಾಗಿ, ಆನೆ ಬ್ಯಾರಿಕೇಡ್ ಹಾಕಿರುವ ಮಾರ್ಗದುದ್ದಕ್ಕೂ ಜೇನು ಕೃಷಿ ಮಾಡಿದರೆ ರೈತರಿಗೂ ಅನುಕೂಲ. ಆನೆಗಳ ಕಾಟ ತಪ್ಪುತ್ತದೆ ಎಂಬುದು ಸರ್ಕಾರದ ವಾದ.

ಜೇನು ಕೃಷಿಯಿಂದ ಆನೆ ಕಾಟವು ಕಿಂಚಿತ್ತೂ ಕಡಿಮೆ ಆಗುವುದಿಲ್ಲ. ಇದನ್ನು ನಾನು ನನ್ನ 30 ವರ್ಷಗಳ ಕೃಷಿ ಅನುಭವದಿಂದ ಹೇಳುತ್ತಿದ್ದೇನೆ. ನನ್ನ ತೋಟದಲ್ಲಿ 20ಕ್ಕಿಂತಲೂ ಹೆಚ್ಚು ಜೇನು ಪೆಟ್ಟಿಗೆಗಳಿವೆ. ಆನೆ ಬರುವ ದಾರಿಯಲ್ಲಿ ಅವುಗಳನ್ನು ಇಟ್ಟಿದ್ದೇವೆ. ಆನೆಗಳಿಗೆ ಅವು ಲೆಕ್ಕಕ್ಕೇ ಇಲ್ಲ. ಪೆಟ್ಟಿಗೆಯನ್ನು ಬೀಳಿಸಿ ತೋಟಕ್ಕೆ ನುಗ್ಗುತ್ತವೆ. ಕಾಡಾನೆ ಕಾಟಕ್ಕೆ ಸೌರ ಬೇಲಿಗಿಂತ ಉತ್ತಮ ಪರಿಹಾರ ಬೇರೊಂದಿಲ್ಲ. ಸೌರ ಬೇಲಿ ಅಳವಡಿಸಿಕೊಳ್ಳಲು ಸರ್ಕಾರ ರೈತರಿಗೆ ಹೆಚ್ಚಿನ ನೆರವು ನೀಡಲಿ.

ಸಹನಾ ಕಾಂತಬೈಲು, ಬಾಲಂಬಿ, ಮಡಿಕೇರಿ

ಹೆದ್ದಾರಿ ಪ್ರಾಧಿಕಾರದ ಉತ್ತಮ ಕೆಲಸ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ತಲಪಾಡಿಯಿಂದ ನಂತೂರುವರೆಗೆ ಹಾಗೂ ಸುರತ್ಕಲ್‌ನಿಂದ ಸಾಸ್ತಾನದವರೆಗೆ ಕಡಿಮೆ ಸಾಂದ್ರತೆಯ ಪಾಲಿಥೀನ್ (ಎಲ್‌ಡಿಪಿಇ) ಬಳಸಿ ಸರ್ವಿಸ್ ರಸ್ತೆ ನಿರ್ಮಿಸಲಾಗಿದೆ (ಪ್ರ.ವಾ., ಜೂನ್ 11). ಈ ರಸ್ತೆಯಲ್ಲಿ ಓಡಾಡಿದರೂ ವಾಹನ ಚಲಾಯಿಸಿದರೂ ಜಾರುವುದಿಲ್ಲ!

ವಿವಿಧ ಗ್ರಾಮ ಪಂಚಾಯಿತಿಗಳಿಂದ ಸಂಗ್ರಹಿಸಿದ 170 ಟನ್ ಪ್ಲಾಸ್ಟಿಕ್ ಅನ್ನು ಸದ್ಬಳಕೆ ಮಾಡಿಕೊಂಡು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಈ ರಸ್ತೆ ನಿರ್ಮಿಸಿದೆ. ಇದೊಂದು ಉತ್ತಮ ಕೆಲಸವಾಗಿದೆ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕಾವೇರಿ ಆರತಿ, ಅಮ್ಯೂಸ್‌ಮೆಂಟ್ ಪಾರ್ಕ್ ಯೋಜನೆಗೆ ರೈತಸಂಘದ ಪ್ರಬಲ ವಿರೋಧ



ಕೆಆರ್‌ಎಸ್ ಅಭಿವೃದ್ಧಿಯೋ, ಅನಾಹುತವೋ?

ರೈತರ ಜೀವನಾಡಿಯಾದ ಕೆಆರ್‌ಎಸ್ ಜಲಾಶಯದ ಬಳಿ 'ಕಾವೇರಿ ಆರತಿ' ನಡೆಸುವ ಹಾಗೂ 'ಅಮ್ಯೂಸ್‌ಮೆಂಟ್ ಪಾರ್ಕ್' ನಿರ್ಮಿಸುವ ರಾಜ್ಯ ಸರ್ಕಾರದ ಪ್ರಯತ್ನ ರೈತರನ್ನು ಕೆರಳಿಸಿದೆ. 94 ವರ್ಷಗಳ ಹಳೆಯ ಅಣೆಕಟ್ಟೆಯ ಸುತ್ತ ರಾಜ್ಯ ಸರ್ಕಾರ ಹಲವು ಅಭಿವೃದ್ಧಿ ಯೋಜನೆ, ಕಾರ್ಯಕ್ರಮ, ಕಾಮಗಾರಿ ಹಮ್ಮಿಕೊಳ್ಳುತ್ತಿದೆ. ಅದರಿಂದ ಕನ್ನಂಬಾಡಿ ಕಟ್ಟೆಯ ಅಸ್ತಿತ್ವಕ್ಕೆ ಧಕ್ಕೆಯಾಗುವ ಆತಂಕ ವ್ಯಕ್ತವಾಗಿದೆ. ಅವು ಅವೈಜ್ಞಾನಿಕ ಯೋಜನೆಗಳಾಗಿದ್ದು, ಅವಕಾಶ ಕೊಡುವುದಿಲ್ಲ ಎಂದು ರೈತರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಆದರೆ ರಾಜ್ಯ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ ಎಂದು ಹೇಳಿದ್ದು, ಟೆಂಡರ್ ಪ್ರಕ್ರಿಯೆ ಮುಂದುವರಿಸಿದೆ. ವಿವಾದವು ನ್ಯಾಯಾಲಯದ ಮೆಟ್ಟಿಲನ್ನೂ ಏರಿದೆ

● ಕೆ.ನರಸಿಂಹಮೂರ್ತಿ, ಸಿದ್ದು ಆರ್.ಜಿ.ಹಳ್ಳಿ

ಮೈಸೂರು ಮತ್ತು ಮಂಡ್ಯದ ಕೃಷಿ ಚಟುವಟಿಕೆಗಳಿಗೆಂದೇ ನಿರ್ಮಾಣವಾಗಿ, ಈಗ ಬೆಂಗಳೂರಿಗೂ ಕುಡಿಯುವ ನೀರು ಪೂರೈಸುತ್ತಿರುವ ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯದ ನೆಲದಲ್ಲಿ ಈಗ ಪ್ರತಿಭಟನೆಯ ಕಾವೇರಿದೆ. ಅಲ್ಲಿ 'ಕಾವೇರಿ ಆರತಿ' ಹಮ್ಮಿಕೊಳ್ಳುವ ಹಾಗೂ 'ಅಮ್ಯೂಸ್‌ಮೆಂಟ್ ಪಾರ್ಕ್' (ಬೃಂದಾವನ ಉದ್ಯಾನ ಉನ್ನತೀಕರಣ) ನಿರ್ಮಿಸುವ ರಾಜ್ಯ ಸರ್ಕಾರದ ಪ್ರಯತ್ನ ರೈತರನ್ನು ಕೆರಳಿಸಿದೆ. ಬೃಹತ್ತಾದ ಯೋಜನೆ ಮತ್ತು 'ಕಾವೇರಿ ಆರತಿ' ಕಾರ್ಯಕ್ರಮಗಳನ್ನೂ ರೈತರು ಏಕಕಾಲಕ್ಕೆ ವಿರೋಧಿಸುತ್ತಿದ್ದಾರೆ.

ಕೆಆರ್‌ಎಸ್ ಅಣೆಕಟ್ಟೆಯ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಚಟುವಟಿಕೆ ಬೇಡ ಎಂಬುದು ರೈತರ ಆಗ್ರಹ. ಆದರೆ ರಾಜ್ಯ ಸರ್ಕಾರ ಮಾತ್ರ ಹೆಜ್ಜೆ ಹಿಂದಿಡುವುದಿಲ್ಲ ಎಂದು ಹೇಳಿದೆ. ಹೀಗಾಗಿ, ಸರ್ಕಾರ ಮತ್ತು ರೈತಸಂಘದ ನಡುವಿನ ಸಂಘರ್ಷ ತಾರಕಕ್ಕೇರಿದೆ.

ಈ ಎರಡೂ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಆಯ್ಕೆ ಮಾಡಿಕೊಂಡಿರುವ ಸ್ಥಳ, ಶ್ರೀರಂಗಪಟ್ಟಣ ಮತ್ತು ಪಾಂಡವಪುರ ತಾಲ್ಲೂಕಿನ ವಿವಿಧ ಗ್ರಾಮಗಳನ್ನು ಒಳಗೊಂಡಿರುವ 'ಕೆಆರ್‌ಎಸ್ ಡ್ಯಾಂ' ಕೆಳಭಾಗದ ಪ್ರದೇಶ. ಈ ಅಂಶವೇ ರೈತರ ಕೆಂಗಣ್ಣಿಗೆ ಕಾರಣವಾಗಿರುವುದು. 1931ರಲ್ಲಿ ನಿರ್ಮಾಣಗೊಂಡ ಅಣೆಕಟ್ಟೆಗೆ ಈಗ 94 ವರ್ಷವಾಗಿದ್ದು, ಶತಮಾನದ ಹೊಸ್ತಿಲಲ್ಲಿದೆ. 'ರೈತರ ಜೀವನಾಡಿಯಾದ ಕನ್ನಂಬಾಡಿ ಕಟ್ಟೆಯ ಅಸ್ತಿತ್ವಕ್ಕೆ ಧಕ್ಕೆ ತರುವ, ಅನಾಹುತ ಸೃಷ್ಟಿಸುವ ಇಂಥ ಅವೈಜ್ಞಾನಿಕ ಯೋಜನೆಗಳಿಗೆ ಅವಕಾಶ ಕೊಡುವುದಿಲ್ಲ' ಎಂದು ರೈತರು ಬಿಗಿಪಟ್ಟು ಹಿಡಿದಿದ್ದಾರೆ.

ಈ ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಕೈಗೊಳ್ಳಲು 2015-16, 2018-19 ಹಾಗೂ 2024-25ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. '198 ಎಕರೆ ಜಾಗದಲ್ಲಿ ಬೃಂದಾವನ ಉದ್ಯಾನವನ್ನು ವಿಶ್ವದರ್ಜೆಗೆ ಉನ್ನತೀಕರಿಸಿ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುವುದರಿಂದ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸಬಹುದು ಮತ್ತು ಅದರಿಂದ ಪ್ರವಾಸೋದ್ಯಮದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ' ಎಂಬುದು ಸರ್ಕಾರದ ವಾದ.

'2024ರ ಜುಲೈನಲ್ಲಿ ₹2,663 ಕೋಟಿ ಮೊತ್ತದ ಅಮ್ಯೂಸ್‌ಮೆಂಟ್ ಪಾರ್ಕ್ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಸಿಕ್ಕಿದೆ. ಎರಡು ಬಾರಿ ಟೆಂಡರ್ ಆಹ್ವಾನಿಸಿದರೂ, ಬಿಡ್ದುದಾರರು ಪ್ರತಿಕ್ರಿಯಿಸದೇ ಇದ್ದುದರಿಂದ 3ನೇ ಬಾರಿಗೆ 2025ರ ಮಾರ್ಚ್ 15ರಂದು ಟೆಂಡರ್ ಆಹ್ವಾನಿಸಲಾಗಿದೆ. ಈ ಬಾರಿ 7 ಬಿಡ್ದುದಾರರು ಆಸಕ್ತಿ ವ್ಯಕ್ತಪಡಿಸಿದ್ದು, 'ಪ್ರೀ ಬಿಡ್' ಸಭೆಯಲ್ಲಿ ಭಾಗವಹಿಸಿದ್ದಾರೆ. ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ' ಎನ್ನುತ್ತಾರೆ ಕಾವೇರಿ ನೀರಾವರಿ ನಿಗಮದ ಎಂಜಿನಿಯರ್‌ಗಳು.

ಅಮ್ಯೂಸ್‌ಮೆಂಟ್ ಪಾರ್ಕ್‌ನ ಭಾಗವಾಗಿ ಹೆಲಿಪ್ಯಾಡ್, ವಾಹನ ನಿಲ್ದಾಣ, ಮನರಂಜನಾ ಉದ್ಯಾನ, ತೂಗು ಸೇತುವೆ, ವೀಕ್ಷಣಾ ಗೋಪುರ ಸೇರಿದಂತೆ ಒಟ್ಟು 41 ಕಾಮಗಾರಿಗಳನ್ನು ನಡೆಸಲು ಉದ್ದೇಶಿಸಲಾಗಿದೆ. 'ಇವುಗಳಿಂದ ಅಣೆಕಟ್ಟೆಗೆ ಅಪಾಯ ಒದಗುತ್ತದೆ' ಎನ್ನುವುದು ರೈತರ ವಾದ.

ವಿವಾದಕ್ಕೆ ದಶಕದ ಇತಿಹಾಸ: ಈಗ ಎದ್ದಿರುವ ವಿವಾದ, ವಿರೋಧ, ಪ್ರತಿಭಟನೆಗೆ ದಶಕದ ಇತಿಹಾಸವಿದೆ. 2016-17ರಲ್ಲಿ ಅಂದಿನ ಕಾಂಗ್ರೆಸ್ ಸರ್ಕಾರ ಜಲಾಶಯ ಸಮೀಪ 300 ಎಕರೆ ಪ್ರದೇಶದಲ್ಲಿ ₹1,500 ಕೋಟಿ ವೆಚ್ಚದಲ್ಲಿ 'ಡಿಸ್ನಿಲ್ಯಾಂಡ್' ಹಾಗೂ 125 ಅಡಿಯ ಕಾವೇರಿ ಪ್ರತಿಮೆಯನ್ನು ನಿರ್ಮಿಸಲು ನೀಲನಕ್ಷೆ ತಯಾರಿಸಿತ್ತು. ಡ್ಯಾಂ ಸಮೀಪದ ನಿಷೇಧಿತ ಪ್ರದೇಶದಲ್ಲಿ ಯೋಜನೆ ಜಾರಿಗೆ ತರಲಾಗುತ್ತಿದೆ ಎಂದು ಪರಿಸರ, ರೈತ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳು ರಸ್ತೆ ಚಳವಳಿ ಮತ್ತು ಕಾನೂನು ಹೋರಾಟದ ಮೂಲಕ ಯೋಜನೆಯನ್ನು ತಟಸ್ಥಗೊಳಿಸುವಲ್ಲಿ ಯಶಸ್ವಿಯಾಗಿದ್ದವು.

'ಡಿಸ್ನಿಲ್ಯಾಂಡ್' ಯೋಜನೆ ಮರುನಾಮಕರಣಗೊಂಡು ಈಗ 'ಅಮ್ಯೂಸ್‌ಮೆಂಟ್ ಪಾರ್ಕ್' ಆಗಿದೆ. ಇದರ ವಿರುದ್ಧವೂ ಪತ್ರಿಕಾಗೋಷ್ಠಿ, ಪ್ರತಿಭಟನೆ, ಮುಖ್ಯಮಂತ್ರಿಗೆ ಮನವಿ ಸೇರಿದಂತೆ ಹಲವು ರೀತಿಯಲ್ಲಿ ರೈತಸಂಘದವರು ಹೋರಾಟ ನಡೆಸುತ್ತಿದ್ದಾರೆ. ಈ ಮಧ್ಯೆ ಜೂನ್ 6ರಂದು ಮಂಡ್ಯದ ಜಿಲ್ಲಾ ಪಂಚಾಯಿತಿಯ ಕಾವೇರಿ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಧ್ಯಕ್ಷತೆಯಲ್ಲಿ ರೈತ ಸಂಘಟನೆಗಳ ಸಭೆ ಕರೆದು, ಅಭಿಪ್ರಾಯ ಕೇಳಲಾಗಿತ್ತು. ಈ ಎರಡು ಯೋಜನೆಗಳನ್ನು ಕೈಬಿಡಲು ರೈತಸಂಘದ ಮುಖಂಡರು ಸರ್ವಾನುಮತದ ನಿರ್ಣಯ ಮಂಡಿಸಿದ್ದರು.

'ರೈತರ ಅಭಿಪ್ರಾಯವನ್ನು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರಿಗೆ ತಿಳಿಸಿ, ಚರ್ಚಿಸಿದ ನಂತರ ಮುಂದಿನ ನಿರ್ಧಾರ ಕೈಗೊಳ್ಳುತ್ತೇವೆ' ಎಂದು ಸಚಿವ ಚಲುವರಾಯಸ್ವಾಮಿ ಭರವಸೆ ನೀಡಿದ್ದರು. 'ಇದರ ಬೆನ್ನಲ್ಲೇ ಸರ್ಕಾರ ಕದ್ದುಮುಚ್ಚಿ ಕೆಆರ್‌ಎಸ್ ಅಣೆಕಟ್ಟೆ ಬಳಿ ಯೋಜನೆಗಳಿಗೆ ಸಂಬಂಧಿಸಿ ಕಾಮಗಾರಿ ಮುಂದುವರಿಸಿ ಮರಗಳನ್ನು ಕಡಿದು, ಪ್ಲಾಟ್‌ಫಾರ್ಮ್ ಮಾಡಲು ಮುಂದಾಗಿರುವುದು ರೈತ ಮತ್ತು ಪ್ರಗತಿಪರ ಮುಖಂಡರನ್ನು ಕೆರಳಿಸಿದೆ. ಹೀಗಾಗಿ, ಮೇಣದ ಬತ್ತಿ ಪ್ರದರ್ಶನ, ಪ್ರತಿಭಟನಾ ಸಭೆ ಸೇರಿದಂತೆ ಹೋರಾಟ ವಿವಿಧ ರೂಪಗಳನ್ನು ಪಡೆಯುತ್ತಿದೆ.

ಕೆಆರ್‌ಎಸ್ ಅಣೆಕಟ್ಟೆ ನಿರ್ಮಾಣವಾಗಿ 94 ವರ್ಷವಾಗಿರುವುದರಿಂದ ಅದರ ನಿರ್ವಹಣೆಯ ಬಗ್ಗೆ ಹೆಚ್ಚಿನ ಕೆಲಸಗಳಾಗಬೇಕು. ಆದರೆ, ಅದರ ಬಗ್ಗೆ ಯೋಚನೆಯನ್ನೇ ಮಾಡದ ಸರ್ಕಾರ, ಡ್ಯಾಂ ಸುತ್ತ ಗಣಿಗಾರಿಕೆ, ಅಭಿವೃದ್ಧಿ ಚಟುವಟಿಕೆ ಇತ್ಯಾದಿ ನಡೆಯಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕಾರಣವಾಗುತ್ತಿದೆ; ಇದು ಉತ್ತಮ ಬೆಳವಣಿಗೆಯಲ್ಲ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸುತ್ತಾರೆ.



ಅಮ್ಯೂಸ್‌ಮೆಂಟ್ ಪಾರ್ಕ್ ನೀಲನಕ್ಷೆ

ಅಮ್ಯೂಸ್‌ಮೆಂಟ್ ಪಾರ್ಕ್ ಯೋಜನೆಯ ವಿವರ

ನಿರ್ಮಾಣ ಅವಧಿ	4.5 ವರ್ಷ
ನಿರ್ವಹಣೆಯ ಅವಧಿ	30 ವರ್ಷ
ಗುರುತಿಸಿರುವ ಜಾಗ	198 ಎಕರೆ
ಸಿವಿಲ್ ಕಾಮಗಾರಿ ವೆಚ್ಚ	₹1,894 ಕೋಟಿ
ಒಟ್ಟು ಯೋಜನಾ ವೆಚ್ಚ	₹2,663 ಕೋಟಿ
ಪ್ರವಾಸಿಗರ ನಿರೀಕ್ಷೆ	ನಿತ್ಯ 15 ಸಾವಿರ

ಕಾನೂನು ಹೋರಾಟ

ಅಮ್ಯೂಸ್‌ಮೆಂಟ್ ಪಾರ್ಕ್ ಯೋಜನೆ ಮತ್ತು ಕಾವೇರಿ ಆರತಿಯನ್ನು ವಿರೋಧಿಸಿ ಪ್ರತಿಭಟನೆಯ ಜೊತೆಜೊತೆಗೇ ಕಾನೂನು ಹೋರಾಟವೂ ಶುರುವಾಗಿದೆ. ಹೈಕೋರ್ಟ್ ವಕೀಲ ಎಂ.ಶಿವಪ್ರಕಾಶ್ ಅವರ ನೇತೃತ್ವದಲ್ಲಿ ರೈತರಾದ, ಮಂಡ್ಯ ತಾಲ್ಲೂಕಿನ ಗೋಪಾಲಪುರದ ಕೆ.ಬೋರಯ್ಯ, ಕೆ.ಆರ್.ಪೇಟೆ ತಾಲ್ಲೂಕಿನ ಇಂದುವಾಳು ಗ್ರಾಮದ ಎಚ್.ಚಂದ್ರಶೇಖರ್, ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜ ಸಾಗರದ ಸಿ.ಮಂಜುನಾಥ್, ಹೊಂಗಳ್ಳಿಯ ಕೆ.ನರಸಿಂಹ ಮತ್ತು ಕನ್ನಂಬಾಡಿ ಗ್ರಾಮದ ಬಿ.ಪಾಪಣ್ಣ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿದ್ದಾರೆ.

ಕೇಂದ್ರದ ಜಲಶಕ್ತಿ ಸಚಿವಾಲಯ, ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರ, ಕಾವೇರಿ ನೀರಾವರಿ ನಿಗಮ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಜಿಲ್ಲಾಡಳಿತವನ್ನು ಪ್ರತಿವಾದಿಗಳನ್ನಾಗಿಸಲಾಗಿದೆ. ಮೇ 15ರಂದು ಮೊಕದ್ದಮೆ ಹೂಡಿದ್ದು, ವಿಚಾರಣೆಯನ್ನು ಜೂನ್ 26ಕ್ಕೆ ನಿಗದಿ ಮಾಡಲಾಗಿದೆ.

'ಕರ್ಪೂರದ ಆರತಿಗೇಕೆ ₹92 ಕೋಟಿ?'


ಸುನಂದಾ ಜಯರಾಂ

ಕೆಆರ್‌ಎಸ್ ಅಣೆಕಟ್ಟೆ ಸಮೀಪ, ಬೃಂದಾವನ ಉದ್ಯಾನದ ಬಳಿ ದಸರಾ ವೇಳೆಗೆ 'ಕಾವೇರಿ ಆರತಿ' ಕಾರ್ಯಕ್ರಮ ನಡೆಸಲು ಯೋಜನೆ ರೂಪಿಸಿದ್ದು, ಅದನ್ನೂ ರೈತರು ಮತ್ತು ಸ್ಥಳೀಯರು ತೀವ್ರವಾಗಿ ವಿರೋಧಿಸುತ್ತಿದ್ದಾರೆ.

'ಉತ್ತರ ಪ್ರದೇಶದ 'ಗಂಗಾ ಆರತಿ'ಯಿಂದ ಪ್ರೇರಿತವಾದ 'ಕಾವೇರಿ ಆರತಿ'ಯು ಮೌಢ್ಯ ಬಿತ್ತುವ ಕಾರ್ಯಕ್ರಮ. ಕರ್ಪೂರದ ಆರತಿಗೇಕೆ ₹92 ಕೋಟಿ? ಡ್ಯಾಂ ಬಳಿ 10 ಸಾವಿರ ಜನ ಒಂದೆಡೆ ಸೇರಿದರೆ, ಜಲಮಾಲಿನ್ಯ ಮತ್ತು ಪರಿಸರ ಮಾಲಿನ್ಯ ಉಂಟಾಗುತ್ತದೆ. ಕಾವೇರಿ ನದಿ ಕಲುಷಿತಗೊಂಡರೆ ಕುಡಿಯುವ ನೀರು, ತಿನ್ನುವ ಅನ್ನ ವಿಷಮಯವಾಗುತ್ತದೆ' ಎಂದು ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ಆತಂಕ ವ್ಯಕ್ತಪಡಿಸಿದರು.

- **₹92.3 ಕೋಟಿ** — ಕಾವೇರಿ ಆರತಿ ಅಂದಾಜು ವೆಚ್ಚ
- **8 ಸಾವಿರ** — ಆಸನಗಳ ವ್ಯವಸ್ಥೆ
- **45x45 ಮೀಟರ್** — ಆರತಿ ನಡೆಸುವ ಜಾಗದ ವಿಸ್ತೀರ್ಣ
- **175x175 ಮೀಟರ್** — ಕಾರ್ಯಕ್ರಮ ವೀಕ್ಷಣೆಗೆ ಪ್ಲಾಟ್‌ಫಾರ್ಮ್ ನಿರ್ಮಾಣ

'ಕೋಟ್ಯಂತರ ರೂಪಾಯಿ ಖರ್ಚು ಮಾಡಿ 'ಕಾವೇರಿ ಆರತಿ' ಮತ್ತು 'ಅಮ್ಯೂಸ್‌ಮೆಂಟ್ ಪಾರ್ಕ್' ಯೋಜನೆ ಜಾರಿಗೊಳಿಸುವುದರಿಂದ ಜಿಲ್ಲೆಯ ರೈತರಿಗೆ ಆಗುವ ಪ್ರಯೋಜನವೇನು? ಇದೇ ಹಣದಲ್ಲಿ ಉಪನಾಲೆಗಳನ್ನು ದುರಸ್ತಿಗೊಳಿಸಿ, ಕೆರೆ–ಕಟ್ಟೆಗಳ ಹೂಳು ತೆಗೆಸಿದರೆ ರೈತರ ಬದುಕು ಬಂಗಾರವಾಗುತ್ತದೆ' ಎಂದರು.


ಆದರೆ, 'ಯಾರೇ ವಿರೋಧಿಸಿದರೂ ದಸರಾ ವೇಳೆಗೆ ಕಾವೇರಿ ಆರತಿ ಮಾಡುತ್ತೇವೆ' ಎಂದು ಮಂಡ್ಯ ಶಾಸಕ ಪಿ.ರವಿಕುಮಾರ್ ಹೇಳಿಕೆ ನೀಡಿದ್ದು, ಅದು ರೈತರ ಆಕ್ರೋಶವನ್ನು ಹೆಚ್ಚಿಸಿದೆ. 'ಶಾಸಕರು ತೊಡೆ ತಟ್ಟಿದರೆ, ರೈತರು ಯಾವುದೇ ಕಾರಣಕ್ಕೂ ಬಗ್ಗುವುದಿಲ್ಲ' ಎಂದು ರೈತ ಮುಖಂಡರು ತಿರುಗೇಟು ನೀಡಿದ್ದಾರೆ.

ಜನವರಿಯಿಂದ ಜೂನ್‌ವರೆಗೆ ಡ್ಯಾಂನಲ್ಲಿ ನೀರು ಕಡಿಮೆಯಾಗಿ ಕೃಷಿ ಮತ್ತು ಕುಡಿಯುವುದಕ್ಕೆ ನೀರಿನ ತತ್ವಾರವಾಗುತ್ತದೆ. ಆಗ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ಎಲ್ಲಿಂದ ನೀರು ತರುತ್ತಾರೆ?
ಕೆ.ಬೋರಯ್ಯ, ರೈತ ಮುಖಂಡ

ಜಗತ್ತಿನಲ್ಲಿ ಎಲ್ಲಿಯೂ ಡ್ಯಾಂ ಪಕ್ಕ ಅಮ್ಯೂಸ್‌ಮೆಂಟ್ ಪಾರ್ಕ್ ಸ್ಥಾಪಿಸಿರುವ ಉದಾಹರಣೆಯಿಲ್ಲ. ಅಣೆಕಟ್ಟೆ ಪಕ್ಕ ನಿರ್ಮಾಣ ಕಾಮಗಾರಿ ನಡೆಸಿದರೆ ಅಪಾಯ ಕಟ್ಟಿಟ್ಟ ಬುತ್ತಿ. ಡ್ಯಾಂನಿಂದ 20 ಕಿ.ಮೀ.ದೂರದಲ್ಲಿ ಈ ಯೋಜನೆ ಕೈಗೊಳ್ಳುವುದು ಸೂಕ್ತ
ಪ್ರೊ.ಬಸವರಾಜಪ್ಪ, ನಿವೃತ್ತ ಹಿರಿಯ ಭೂವಿಜ್ಞಾನಿ

ಪ್ರವಾಸೋದ್ಯಮ ಅಭಿವೃದ್ಧಿ ದೃಷ್ಟಿಯಿಂದ ಬೃಂದಾವನ ಉದ್ಯಾನವನ್ನು ವಿಶ್ವದರ್ಜೆಗೆ ಉನ್ನತೀಕರಿಸುವ ಯೋಜನೆ ಇದಾಗಿದ್ದು, ಡ್ಯಾಂ ಸುರಕ್ಷತೆಗೂ ಆದ್ಯತೆ ನೀಡಲಾಗಿದೆ
ರಘುರಾಮ್, ಅಧೀಕ್ಷಕ ಎಂಜಿನಿಯರ್, ಕಾವೇರಿ ನೀರಾವರಿ ನಿಗಮ

'ಸುರಕ್ಷತಾ ಕಾಯ್ದೆ ಉಲ್ಲಂಘನೆ'



'ಅಣೆಕಟ್ಟು ಸುರಕ್ಷತಾ ಕಾಯ್ದೆಯ 2021ರ ಪ್ರಕಾರ, ಅಣೆಕಟ್ಟೆಯ 20 ಕಿ.ಮೀ ಸುತ್ತ ಯಾವುದೇ ಅಭಿವೃದ್ಧಿ ಚಟುವಟಿಕೆ ಹಮ್ಮಿಕೊಳ್ಳುವಂತಿಲ್ಲ. ಬೇರೆ ಯಾವುದೇ ನಿರ್ಮಾಣ ಕಾರ್ಯ ಮಾಡುವಂತಿಲ್ಲ. ಅಣೆಕಟ್ಟೆಯ ಸ್ವರೂಪವನ್ನು ಬದಲಿಸುವಂತಿಲ್ಲ. ಆದರೂ ಸರ್ಕಾರವು ಯೋಜನೆಯನ್ನು ಅನುಷ್ಠಾನಗೊಳಿಸಲು ಮುಂದಾಗಿದೆ' ಎನ್ನುತ್ತಾರೆ, ಯೋಜನೆ ವಿರುದ್ಧ ಪಿಐಎಲ್ ಹೂಡಿರುವ ಹೈಕೋರ್ಟ್ ವಕೀಲ ಎಂ.ಶಿವಪ್ರಕಾಶ್.

'ಅಣೆಕಟ್ಟು ಸಂರಕ್ಷಿತ ಪ್ರದೇಶ. ಅದನ್ನು ಎಲ್ಲ ಬಗೆಯ ಅಪಾಯಗಳಿಂದ ಸಂರಕ್ಷಿಸಬೇಕು. ಆದರೆ, ಅಭಿವೃದ್ಧಿಯ ಕಾರಣ ಒಡ್ಡಿ, ಸಹಜ ನ್ಯಾಯಕ್ಕೆ ವಿರುದ್ಧವಾಗಿ ಯೋಜನೆಯ ವ್ಯಾಪ್ತಿಯ ಜಮೀನುಗಳ ಖಾತೆಗಳನ್ನು ಏಕಾಏಕಿ ಕಾವೇರಿ ನೀರಾವರಿ ನಿಗಮದ ಹೆಸರಿಗೆ ನಮೂದಿಸಲಾಗಿದೆ. ಇದು ಕಾನೂನುಬಾಹಿರ' ಎಂಬುದು ಅವರ ಪ್ರತಿಪಾದನೆ.

'ರೈತರು ದುಡುಕಬಾರದು'

ಯೋಜನೆ ಕುರಿತು ರೈತರೊಂದಿಗೆ ಈಗಾಗಲೇ ಚರ್ಚಿಸಿದ್ದೇನೆ; ಮತ್ತೊಮ್ಮೆ ಚರ್ಚಿಸಲೂ ಸಿದ್ಧನಿದ್ದೇನೆ. ಸಿ.ಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರೊಂದಿಗೆ ಚರ್ಚಿಸಿ, ನಂತರ ಸಂಘಟನೆಯವರ ಬಳಿಗೇ ಬಂದು ತೀರ್ಮಾನ ಕೈಗೊಳ್ಳಬೇಕೆಂಬುದು ನನ್ನ ಆಲೋಚನೆ.

ಸಂಘಟನೆಯವರು ಆತುರಪಟ್ಟು ಪ್ರತಿಭಟನೆ ಮಾಡಿದರೆ ನಾನೇನು ಮಾಡಲಿ. ನಮಗೆ ಅವರಂತೆ ದುಡುಕುವ ಅವಶ್ಯಕತೆ ಇಲ್ಲ. ಅವರಿಗೆ ನಾವು ಯಾವ ಸೂಚನೆಗಳನ್ನೂ ನೀಡಲು ಆಗುವುದಿಲ್ಲ. ದೇವರು ಅವರಿಗೆ ಶಕ್ತಿ ಕೊಡಲಿ


ಎನ್.ಚಲುವರಾಯಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ

ಪಕ್ಷಿಧಾಮಗಳಿಗೂ ಧಕ್ಕೆ; ಆತಂಕ

'ಡ್ಯಾಂ ಸಮೀಪದ ಬೃಂದಾವನ ಉದ್ಯಾನ ಮತ್ತು ತೋಟಗಾರಿಕೆ ಜಾಗ 'ಅರಣ್ಯ ಪ್ರದೇಶ' ಎಂದು 1978ರಲ್ಲಿ ನೋಟಿಫಿಕೇಶನ್ ಆಗಿದೆ. ಅಣೆಕಟ್ಟೆಗೆ ಒಂದು ಕಿ.ಮೀ. ದೂರದಲ್ಲಿರುವ ದೇವರಾಜ ಪಕ್ಷಿಧಾಮದಲ್ಲಿ ನೀರುನಾಯಿ ಮತ್ತು ವಲಸೆ ಪಕ್ಷಿಗಳಿವೆ. 3 ಕಿ.ಮೀ. ದೂರದಲ್ಲಿ ರಂಗನತಿಟ್ಟು ಮತ್ತು ಕಾವೇರಿ ನದಿ ತೀರದಲ್ಲಿ ಗೆಂಡೆಹೊಸಹಳ್ಳಿ ಪಕ್ಷಿಧಾಮವಿದೆ. ಪಕ್ಷಿ ಸಂಕುಲಕ್ಕೂ ಯೋಜನೆಯಿಂದ ತೊಂದರೆಯಾಗುತ್ತದೆ' ಎನ್ನುತ್ತಾರೆ ಮಂಡ್ಯದ ಸಾಮಾಜಿಕ ಕಾರ್ಯಕರ್ತ ಕೆ.ಆರ್.ರವೀಂದ್ರ.


ಕೆ.ಆರ್.ರವೀಂದ್ರ

'ಈ ಹಿಂದೆ ಡ್ಯಾಂ ಬಳಿ ನಡೆಸಲು ಯತ್ನಿಸಿದ್ದ 'ಟ್ರಯಲ್ ಬ್ಲಾಸ್ಟ್' ಅನ್ನು ಹೋರಾಟದ ಮೂಲಕ ತಡೆದಿದ್ದೇವೆ. ಈಗ ಅಮ್ಯೂಸ್‌ಮೆಂಟ್ ಪಾರ್ಕ್‌ಗಾಗಿ ಆಳವಾದ ದೊಡ್ಡ ಗುಂಡಿಗಳನ್ನು ತೋಡಿದರೆ, ಶಿಲಾ ಪದರದ ಮೇಲೆ ನಿಂತಿರುವ ಕೆಆರ್‌ಎಸ್ ಅಣೆಕಟ್ಟೆ ಕಂಪಿಸಿದರೆ ಆಗುವ ಅನಾಹುತಕ್ಕೆ ಯಾರು ಹೊಣೆ? ನಾವು ಅಭಿವೃದ್ಧಿ ವಿರೋಧಿಗಳಲ್ಲ. ನಮ್ಮ ಹೋರಾಟ ಡ್ಯಾಂ ಉಳಿವಿಗಾಗಿ' ಎನ್ನುತ್ತಾರೆ ರೈತ ಮುಖಂಡ ಎ.ಎಲ್.ಕೆಂಪೂಗೌಡ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಬೃಹತ್ ಸಂಖ್ಯೆಯಲ್ಲಿ ಜನ** ರಸ್ತೆಗಳಲ್ಲಿ ನೆರೆದು, ನೃತ್ಯ ಮಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ಐಪಿಎಲ್ ಫೈನಲ್ ಪಂದ್ಯದಲ್ಲಿ ಆರ್‌ಸಿಬಿ ವಿಜಯ ಸಾಧಿಸಿ ಚೊಚ್ಚಲ ಕಪ್ ಗೆದ್ದ ನಂತರ ಅಭಿಮಾನಿಗಳು ಬೆಂಗಳೂರಿನ ರಸ್ತೆಗಳಲ್ಲಿ ನರ್ತಿಸಿ ಸಂಭ್ರಮಾಚರಣೆ ಮಾಡಿದ ವಿಡಿಯೊ ಇದು ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



✓ **ವಿಡಿಯೊದ ಕೀಫ್ರೇಮ್‌ಗಳನ್ನು** ಇನ್‌ವಿಡ್ ಟೂಲ್ ಹಾಗೂ ಗೂಗಲ್ ಲೆನ್ಸ್ ಮೂಲಕ ಪರಿಶೀಲನೆ ನಡೆಸಿದಾಗ, ಒಂದೇ ವಿಡಿಯೊ ಅನ್ನು ಹಲವರು ಇದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡುಬಂತು. ಜತೆಗೆ, ಗೂಗಲ್ ರಿವರ್ಸ್ ಇಮೇಜ್ ಸರ್ಚ್ ಮಾಡಿದಾಗ, ಅದು 2024 ಜೂನ್ 30ಕ್ಕೆ ಸಂಬಂಧಿಸಿದ ಇನ್‌ಸ್ಟಾಗ್ರಾಂ ಪೋಸ್ಟ್‌ಗೆ ಸಂಪರ್ಕ ಕಲ್ಪಿಸಿತು. ಭಾರತ ಕ್ರಿಕೆಟ್ ತಂಡವು 2024ರ ಜೂನ್ 29ರಂದು ನಡೆದ ಟಿ20 ವಿಶ್ವಕಪ್ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕ ವಿರುದ್ಧ ಜಯ ಸಾಧಿಸಿದ ಪ್ರಯುಕ್ತ ಅಭಿಮಾನಿಗಳು ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಸಂಭ್ರಮಾಚರಣೆ ಮಾಡಿದರು ಎಂದು ಉಲ್ಲೇಖಿಸಲಾಗಿತ್ತು. ವಿಡಿಯೊ ಅನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದರಲ್ಲಿ ಕೆಲವು ಅಂಗಡಿಗಳ ಮುಂದೆ ಮರಾಠಿ ಬೋರ್ಡ್‌ಗಳಿರುವುದೂ ಕಾಣುತ್ತದೆ. ಕೊಲ್ಹಾಪುರಕ್ಕೆ ಸಂಬಂಧಿಸಿದ ಹಳೆಯ ವಿಡಿಯೊ ಅನ್ನು ಸುಳ್ಳು ಪ್ರತಿಪಾದನೆಗಳೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜೂನ್ 12, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣಪ್ರತಿಪದ್ ಗಂ. 14-28 ನಕ್ಷತ್ರ: ಮೂಲ ಗಂ. 21-57 ಯೋಗ: ಶುಭ ಗಂ. 14-05 ಕರಣ: ಕೌಲವ ಗಂ. 14-28, ವೃಷಭ ಮಾಸದ 29 ನೇ ದಿನ. ಮಳೆ ನಕ್ಷತ್ರ : ಮೃಗಶಿರ 2 ನೇ ಪಾದ.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-07 **ಸೂರ್ಯಾಸ್ತ :** 06-54, **ಮುಸ್ಲಿಂ ದಿನಾಂಕ :** 15 ಜುಲ್‌ಹಿಜಾ,
ದಿನ ವಿಶೇಷ : ಗುರು ಹರಗೋವಿಂದರ ಜನ್ಮದಿನ
ಅದೃಷ್ಟ ಸಂಖ್ಯೆ : 1, 7

ಮೇಷ: ಕೂಪಮಂಡೂಕದ ಭಾವನೆಯನ್ನು ಕಳಚಿಕೊಂಡು ಮುನ್ನುಗ್ಗಿದಲ್ಲಿ ಒಳ್ಳೆಯ ಅವಕಾಶಗಳನ್ನು ಪಡೆಯುವಿರಿ ಎಂಬುವುದರಲ್ಲಿ ಎರಡನೆ ಮಾತಿಲ್ಲ. ಮನೆಯಲ್ಲಿ ಸುಖ ಶಾಂತಿ ನೆಲೆಸುತ್ತದೆ.

ವೃಷಭ: ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಬಹುಭಾಷಾ ಕಲಿಕೆಯಂಥ ಅವಕಾಶ ಸಿಗಲಿದೆ. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳಿಗೆ ವಿಷ ಅನಿಲ, ದೂಳಿನಿಂದ ಉಸಿರಾಟ ಸಮಸ್ಯೆಗಳು ಎದುರಾಗಬಹುದು.

ಮಿಥುನ: ಸಾಂಸಾರಿಕ ವಿಚಾರಕ್ಕೆ ಸಂಬಂಧಿಸಿದಂತೆ ಆತುರದಿಂದ ಯಾವುದೇ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ. ನಂಬದಿರುವ ಪರಿಸ್ಥಿತಿ ಬರಬಹುದು. ವೃತ್ತಿರಂಗದಲ್ಲಿ ಮೋಸ ಹೋಗಬಹುದು.

ಕರ್ಕಾಟಕ: ನಿಮ್ಮದಲ್ಲದ ಕ್ಷೇತ್ರದವರಿಗೆ ಸೂಚನೆಗಳನ್ನು ನೀಡಲು ಹೋಗಿ ಮುಖಭಂಗ ಮಾಡಿಕೊಳ್ಳದಿರಿ. ವಾಹನ ಚಾಲನೆಯಲ್ಲಿ ರಕ್ಷಣೆಯ ಜತೆಯಲ್ಲಿ ಸಹಪ್ರಯಾಣಿಕರ ಬಗೆಗೆ ಗಮನ ವಹಿಸಿ.

ಸಿಂಹ: ಕಾರ್ಯಕ್ಷೇತ್ರದಲ್ಲಿ ಕೆಲಸದ ಹೊರೆ ಬೆಟ್ಟದಂತೆ ಇರವುದು. ಕಾನೂನು ವಿದ್ಯಾರ್ಥಿಗಳು ಮುಂಬರುವ ಪರೀಕ್ಷೆಗಾಗಿ ಹೆಚ್ಚು ಮಾಹಿತಿಯನ್ನು ಸಂಗ್ರಹಿಸಲು ಉತ್ತಮ ದಿನ. ಹಳದಿ ವರ್ಣ ಶುಭದಾಯಕ.

ಕನ್ಯಾ: ವಾಸ್ತವವಾಗಿ ಕಚೇರಿಯಲ್ಲಿರುವ ವಿಷಯಗಳು ಹಾಗೂ ನಿಮ್ಮನ್ನು ತಲುಪುತ್ತಿರುವ ವಿಚಾರಗಳ ನಡುವೆ ಇರುವ ವ್ಯತ್ಯಾಸ ತಿಳಿಯುತ್ತದೆ. ಪರಸ್ಥಳದಲ್ಲಿ ಚಿನ್ನಾಭರಣ ಕಳವಾಗುವ ಸಾಧ್ಯತೆ ಇದೆ.

ತುಲಾ: ಗಣ್ಯರ ಭೇಟಿಯಲ್ಲಿ ಉಡುಗೆ ತೊಡುಗೆಗಳು ಪ್ರಾಮುಖ್ಯತೆ ಹೊಂದುತ್ತವೆ. ಮನೋಬಲವು ಹೆಚ್ಚಿರುವುದರಿಂದ ದೈಹಿಕ ವೈಕಲ್ಯ ಅಡ್ಡಿ ಪಡಿಸುವುದಿಲ್ಲ.

ವೃಶ್ಚಿಕ: ಮಾತೃ ಸಂಬಂಧಿ ಬಂಧುಗಳ ಆಗಮನದಿಂದ ಸಂತೋಷ ಹೊಂದುವಿರಿ. ಸುಖಮಯವಾಗಿರುವ ಜೀವನವನ್ನು ಮೂರನೇ ವ್ಯಕ್ತಿಗಳ ಮಾತನ್ನು ಕೇಳಿ ಹಾಳುಮಾಡಿಕೊಳ್ಳದಿರಿ. ಕಚೇರಿಯಲ್ಲಿ ಸಂತೋಷವಾಗಿರುವಿರಿ.

ಧನು: ಮಾಡಿದ ತಪ್ಪಿಗೆ ತುಂಬಾ ವ್ಯಥೆ ಪಡುತ್ತೀರಿ. ಕ್ಷಮೆಗಾಗಿ ಬಹಳ ಪ್ರಯತ್ನ ಪಡುತ್ತೀರಿ. ಉದ್ಯೋಗ ಬದಲಾವಣೆ ವಿಚಾರದಲ್ಲಿದ್ದ ಗೊಂದಲದ ವಾತಾವರಣವು ದಿನದಿಂದ ದಿನಕ್ಕೆ ಜಾಸ್ತಿಯಾಗುವುದು.

ಮಕರ: ಮೊನ್ನೆಯಷ್ಟೆ ಇತ್ಯರ್ಥವಾಯಿತು ಎಂದುಕೊಂಡ ಕುಟುಂಬ ಕಲಹವು ಮತ್ತೆ ಹೊಗೆಯಾಡುವ ಸಾಧ್ಯತೆ ಇದೆ. ಸಾಧು ಸಂತರ ಮಾತುಗಳು ಆಕರ್ಷಿಸುವುದು. ಮಕ್ಕಳ ಯೋಗಕ್ಷೇಮ ನೋಡುವುದನ್ನು ಮರೆಯಬೇಡಿ.

ಕುಂಭ: ತಲೆನೋವಿನಂಥ ಕಾಯಿಲೆಗಳು ಬರಬಹುದಾದ ಸಾಧ್ಯತೆ ಇರುವುದರಿಂದ ಕಂಪ್ಯೂಟರ್, ಟಿ.ವಿ ಮತ್ತು ಮೊಬೈಲ್ ಪರದೆಯಿಂದ ದೂರ ಇರಿ. ವೃತ್ತಿ ಜೀವನದಲ್ಲಿ ಅತ್ಯಂತ ಕ್ಲಿಷ್ಟಕರ ಸವಾಲುಗಳು ಎದುರಾಗಲಿವೆ.

ಮೀನ: ಅಂದುಕೊಂಡ ಕೆಲಸಗಳು ನಿರ್ವಿಘ್ನವಾಗಿ ನಡೆಯಲು ಗಣಪತಿ ದೇವಾಲಯಕ್ಕೆ ಭೇಟಿ ಕೊಡಿ. ಸ್ನೇಹಿತರ ಸಂತೋಷ ಕೂಟದಲ್ಲಿ ಪಾಲ್ಗೊಳ್ಳುವಿಕೆಯು ಮನಸ್ಸಿಗೆ ಖುಷಿಯನ್ನು ತರಲಿದೆ.

ಸಹಜ ಪ್ರೀತಿ

ನುಡಿ ಬೆಳಗು — ದೀಪಾ ಹಿರೇಗುತ್ತಿ



ಅಬ್ರಹಾಂ ಲಿಂಕನ್ ಸಂಸತ್ತಿನ ಅಧಿವೇಶನಕ್ಕೆ ಹೊರಟಿದ್ದರು. ಹೀಗೆ ದಾರಿಯಲ್ಲಿ ಸಾಗುವಾಗ, ಸಭೆಯಲ್ಲಿ ತಾವು ಮಾತನಾಡಬೇಕಿರುವ ವಿಷಯದ ಬಗ್ಗೆ ಆಳವಾಗಿ ಯೋಚಿಸುತ್ತಲಿದ್ದರು. ಜೊತೆಯಲ್ಲಿದ್ದ ತಮ್ಮ ಸೆಕ್ರೆಟರಿಗೆ ಪ್ರಶ್ನೆಗಳನ್ನು ಕೇಳುತ್ತಾ ತಾವು ಮಾತನಾಡಬೇಕಿರುವ ಸಂಗತಿಯ ಬಗ್ಗೆ ಚಿಂತನೆಗೆ ಒಳಪಡಿಸಿಕೊಳ್ಳುತ್ತಿದ್ದರು. ಹಾಗೆ ಯೋಚಿಸುತ್ತಾ ಹೊರಗೆ ನೋಡುವಾಗ ಒಂದು ಕೊಚ್ಚೆಯ ಗುಂಡಿಯಲ್ಲಿ ಹಂದಿಯ ಮರಿಯೊಂದು ಸಿಲುಕಿಬಿಟ್ಟಿತ್ತು. ಅದನ್ನು ನೋಡಿದ ತಕ್ಷಣ ಲಿಂಕನ್ ತಮ್ಮ ಡ್ರೈವರ್‌ಗೆ ಗಾಡಿಯನ್ನು ನಿಲ್ಲಿಸುವಂತೆ ಸೂಚಿಸಿದರು. ಇದ್ಯಾವುದೂ ಗೊತ್ತಿರದ ಸೆಕ್ರೆಟರಿ 'ನಡೆಯುತ್ತಿರುವುದು ಸಂಸತ್ತಿನ ಅಧಿವೇಶನ. ನೀವು ಬಾರದೆ ಸಭೆ ಆರಂಭವಾಗದು. ಅಮೆರಿಕದ ಸಂಸತ್ತು ಯಾವತ್ತೂ ತಡವಾಗಿ ಆರಂಭಗೊಂಡಿಲ್ಲ' ಎಂದು ಎಚ್ಚರಿಸಿದ. 'ಅಧಿವೇಶನಕ್ಕಿಂತ ಮುಖ್ಯವಾದ ಕೆಲಸ ಇದೆ. ನೀನು ಹೋಗಿ ತಯಾರಿ ನಡೆಸು' ಎಂದರು ಲಿಂಕನ್. ಅದಕ್ಕವನು, 'ನೀವು ಅಮೆರಿಕದ ಅಧ್ಯಕ್ಷ, ನಿಮಗೊಂದು ಘನತೆ ಇದೆ. ನಿಮ್ಮ ಕಾರು, ರಕ್ಷಣೆ ಇವುಗಳನ್ನು ಬಿಟ್ಟು ಸಾಮಾನ್ಯರ ಹಾಗೆ ಬರಲು ಸಾಧ್ಯವೇ' ಎಂದು ಪ್ರಶ್ನಿಸಿದ. ಲಿಂಕನ್ ತುಸು ಕಟುವಾಗಿ 'ನೀನು ಹೊರಡು' ಎಂದರು. ಅಸಮಾಧಾನದಿಂದಲೇ ಹೊರಟ ಸೆಕ್ರೆಟರಿ.

ಲಿಂಕನ್, ಕೊಚ್ಚೆಯಲ್ಲಿ ಸಿಕ್ಕಿಕೊಂಡಿದ್ದ ಹಂದಿಮರಿಯ ಬಳಿಗೆ ಬಂದು ನಿಧಾನವಾಗಿ ಅದನ್ನು ಅಲ್ಲಿಂದ ಬಿಡಿಸಿದರು. ಅವರ ಕೈ ಕೆಸರಾಗಿತ್ತು. ಕೊಚ್ಚೆಯಲ್ಲಿ ಸಿಕ್ಕಿಬಿದ್ದು ಮೊದಲೇ ಗಾಬರಿಯಾಗಿದ್ದ ಹಂದಿಯ ಮರಿ ಬಿಡಿಸುತ್ತಿದ್ದ ಹಾಗೆ ಚಂಗನೆ ಹಾರಿತು. ಹಾರಿದ ರಭಸಕ್ಕೆ ಲಿಂಕನ್‌ರ ಬಟ್ಟೆಯ ಮೇಲೆ ಕೂಡ ಕೊಚ್ಚೆ ಹಾರಿತು. ತುಂಬು ಸಮಾಧಾನದಿಂದ ಲಿಂಕನ್ ಸಂಸತ್ತಿಗೆ ಬಂದರು. ಕೊಚ್ಚೆಯಾಗಿದ್ದ ಅವರ ಬಟ್ಟೆಯನ್ನು ನೋಡಿ ಎಲ್ಲರಿಗೂ ಗಾಬರಿ. ಏನಾಯಿತು ಎಂದು ಪ್ರಶ್ನಿಸಿದರು. ಅದಕ್ಕವರು, 'ಜೀವವೊಂದು ಕೊಚ್ಚೆಯಲ್ಲಿ ಬಿದ್ದು ಒದ್ದಾಡುತ್ತಿತ್ತು. ಅದಕ್ಕೆ ಸ್ವಲ್ಪ ತಡವಾಯಿತು. ನನ್ನ ಕ್ಷಮಿಸುತ್ತೀರಲ್ಲವೇ' ಎಂದು ಪ್ರಶ್ನಿಸಿದರು.

ನಡೆದ ವಿಷಯವನ್ನು ಬೇರೆಯವರಿಂದ ತಿಳಿದ ಸೆಕ್ರೆಟರಿ ಕೇಳಿದ. 'ಒಂದು ಹಂದಿಯನ್ನು ಕಾಪಾಡುವುದು ಸಂಸತ್ತಿಗಿಂತ ದೊಡ್ಡ ಕೆಲಸವೇ? ಅದನ್ನು ನೀವು ಬೇರೆಯವರಿಗೆ ವಹಿಸಲೂ ಬಹುದಿತ್ತಲ್ಲವೇ?' ಎಂದು. 'ಜೀವ ಕಾರುಣ್ಯಕ್ಕಿಂತ ದೊಡ್ಡದು ಯಾವುದಿದೆ? ಆ ಕ್ಷಣಕ್ಕೆ ಆ ಮರಿಯ ಜೀವ ದೊಡ್ಡದು ಅಂತ ನನಗನ್ನಿಸಿತು. ನಾನು ಅದನ್ನು ಇನ್ನೊಬ್ಬರಿಗೆ ವಹಿಸಿದ್ದರೆ ಅದನ್ನವರು ಮಾಡಿದರೋ ಇಲ್ಲವೋ ಎಂದು ಗೊತ್ತಾಗದೆ ಸಂಸತ್ತಿನ ಕಲಾಪದಲ್ಲೂ ಪೂರ್ಣವಾಗಿ ಭಾಗವಹಿಸಲು ಆಗದೆ ಒದ್ದಾಡುತ್ತಿದ್ದೆ. ಅದಕ್ಕೆ ನಾನೇ ಆ ಕೆಲಸವನ್ನು ಮಾಡಿದೆ. ಹಾಗಾಗಿ ಯಾವ ಆತಂಕವೂ ಇಲ್ಲದೆ ನನ್ನ ಮುಂದಿನ ಕೆಲಸಗಳನ್ನು ಸುಸೂತ್ರವಾಗಿ ಮಾಡಲು ಸಾಧ್ಯವಾಯಿತು' ಎಂದರು ಲಿಂಕನ್.


ತಾನು ದೊಡ್ಡವನು, ತನ್ನ ಜೀವ, ತನ್ನ ಭಾವ, ತನ್ನ ಮನೆಯ ಜನ ಮಾತ್ರ ದೊಡ್ಡವರು ಎಂದುಕೊಂಡು ಇನ್ನೊಂದು ಜೀವದ ಜೊತೆ ಚೆಲ್ಲಾಟವಾಡುವ ಆಳುವ ವರ್ಗದವರ ನಡುವೆ ಲಿಂಕನ್‌ರ ಮಾನವೀಯ ಸರಳ, ಸಹಜ ಪ್ರೀತಿಯ ಈ ನಡೆ ದೊಡ್ಡದಲ್ಲವೇ? ❖

ಪದಬಂಧ 6071

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅನಿರೀಕ್ಷಿತ ಘಟನೆಯಿದು (4)
3.ನೀರು ಧುಮ್ಮಿಕ್ಕುವ ಸ್ಥಳ (4)
5.ದಾಯಾದಿಯ ಬೀಳ್ಕೊಡುವಿಕೆಯನ್ನು ಹೀಗೆನ್ನಿ (3)
7.ಚರಂಡಿ ಸುತ್ತಮುತ್ತಲೂ ಇರುವ ಕೆಸರು (2)
8.ಆದರ ತೋರಿಸಿ ಹೇಳಿದ ಬೆಲೆ (2)
10.ಚಟಕ್ಕೊಂದು ಪರ್ಯಾಯ ಪದ (3)
11.ಜಿಪುಣನನ್ನು ಹೀಗೂ ಕರೆಯುತ್ತಾರೆ (3)
13.ಪುಢಾರಿ ಜೊತೆಯಲ್ಲಿರುವ ಶತ್ರು (2)
15.ಈತ ಸ್ನೇಹಿತ (2)
16.ಆನೆಯನ್ನು ಹತೋಟಿಯಲ್ಲಿಡಲು ಬಳಸುವ ಸಾಧನ (3)
18.ಗಳಿಕೆ ಕೊನೆಗಿದ್ದರೂ ಸಿಕ್ಕಿರುವ ನಿಂದೆ (4)
19.ಈತ ಸೂರ್ಯನ ಮಗ (4)

ಮೇಲಿಂದ ಕೆಳಕ್ಕೆ
1.ಭಾರತೀಯ ವೈದ್ಯಶಾಸ್ತ್ರ (4)
2.ಕವಿತೆ ಬರೆಯುವವನು (2)
3.ಯಜಮಾನನಿಗೆ ದೊರೆತಿರುವ ಗೆಲುವು (2)
4.ವಸ್ತುಗಳನ್ನು ತೂಗುವ ಸಾಧನ (3)
6.ದಾನ ಕೊಡುತ್ತಿರುವ ಅಸುರ (3)
7.ಬೇರೊಂದು ದೇಶಕ್ಕೆ ಕಳಿಸುವ ರಾಜಪ್ರತಿನಿಧಿ (4)
9. ಪುಸ್ತಕದ ಮೇಲು ಹೊದಿಕೆ (4)
12.ತಪರಾಕು ಸಿಕ್ಕ ಮೇಲೆ ಮಾಡಿದ ಹೊಗಳಿಕೆ (3)
14.ಪುರಕ್ಕೆ ಬಂದಿರುವವನು ಗೌರವಿಸಲ್ಪಟ್ಟ ವ್ಯಕ್ತಿ (4)
15.ಶಿವನ ಕುದುರೆ ಇಲ್ಲಿಗೆ ಬಂದಿದೆ (3)
16.ಹತೋಟಿಯನ್ನು ಹೀಗೆನ್ನಿ (2)
17.ಶರಧಿಯಲ್ಲಿ ಬಿದ್ದಿರುವ ಬಾಣ (2)



6070ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪೂರ್ವಗ್ರಹ 3.ಪರಿಹಾರ 5.ಕೆರ
7.ತರುಣ 8.ಮಾನ
10.ಶವ 11.ಕಶೇರು
13.ಮತಿ 15.ಕಲರವ
16.ರಸಭಂಗ

ಮೇಲಿಂದ ಕೆಳಕ್ಕೆ:
1.ಪೂರೈಕೆ 2.ಹರಿತ
3.ಪಯಣ 4.ರಸನ
6.ರಜತೋತ್ಸವ 8.ಮಾರಣಹೋಮ
10.ಶತಕ 11.ಕಕವ
12.ರುಧಿರ 14.ತಿಣಗ

ಸುಡೊಕು 6455

3					8	2		6
			4	9				3
		8			2		5	
	3			4				1
		1	7		5	6	2	
	6			1				
6			5	2		1		7
	1				4		6	
9		5		7		3		8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6454 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

ಷೇರುಪೇಟೆ ವಹಿವಾಟು ▲123



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,104
ಇಂದಿನ ಅಂತ್ಯ	25,141
▲	37
ದಿನದ ಗರಿಷ್ಠ	25,222

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹202-512
ದ್ವಿತಳಿ (ಬಿ.ವಿ)	₹334-683

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹193
ಆರ್‌ಎಸ್‌ಎಸ್-5	₹188
ಗುಡ್ ಲಾಟ್	₹177

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹27900
ಎಸಿ	₹15400
ಆರ್‌ಪಿ	₹20500
ಆರ್‌ಸಿ	₹10725

ವಿನಿಮಯ ದರ

$	ಡಾಲರ್	85.53
£	ಪೌಂಡ್	115.40
€	ಯುರೊ	97.76
¥	ಯೆನ್ (100ಕ್ಕೆ)	59

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1360 (1360)
ಸೋಯಾ (ರಿಫೈನ್ಡ್)	₹1160 (1170)
ಸೂರ್ಯಕಾಂತಿ (ರಿಫೈನ್ಡ್)	₹1320 (1320)
ಪಾಮೋಲಿನ್	₹1140 (1145)

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟಾ	
ಚಾಲಿ	38089-42099
ಚಿಪ್ಪು	24569-29999
ಕೋಕ	7099-21099
ಫ್ಯಾಕ್ಟರಿ	5099-24889
ಹೊಸಚಾಲಿ	33999-42129
ಪುತ್ತೂರು	
ಕೋಕ	20000-31500
ಹೊಸತು	26000-47500
ಹಳತು	39000-52000
ಶಿವಮೊಗ್ಗ	
ಬೆಟ್ಟೆ	48400-59109
ಗೊರಬಲು	16158-30129
ರಾಶಿ	46009-58309
ಸರಕು	50109-88100
ಸಿದ್ದಾಪುರ	
ಬಿಳಿಗೋಟು	25089-32099
ಚಾಲಿ	34639-40000
ಕೋಕ	18629-27309
ಕೆಂಪುಗೋಟು	21600-23849
ರಾಶಿ	42099-46899
ತಟ್ಟಿಬೆಟ್ಟೆ	28900-41899

ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಮಾಹಿತಿ

ಸಾಮಾಜಿಕ ಸುರಕ್ಷತೆ ವ್ಯಾಪ್ತಿ ಏರಿಕೆ



ನವದೆಹಲಿ (ಪಿಟಿಐ): ಭಾರತದಲ್ಲಿ ಸಾಮಾಜಿಕ ಸುರಕ್ಷತಾ ಸೌಲಭ್ಯಗಳನ್ನು ಪಡೆದಿರುವವರ ಪ್ರಮಾಣವು 2025ರಲ್ಲಿ ಶೇಕಡ 64.3ಕ್ಕೆ ಏರಿಕೆ ಆಗಿದೆ ಎಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್‌ಒ) ದತ್ತಾಂಶಗಳು ತಿಳಿಸಿವೆ. ಈ ಸೌಲಭ್ಯ ಪಡೆದವರ ಪ್ರಮಾಣವು 2015ರಲ್ಲಿ ಶೇ 19ರಷ್ಟು ಆಗಿತ್ತು.

ಸಾಮಾಜಿಕ ಸುರಕ್ಷತಾ ಸೌಲಭ್ಯಗಳನ್ನು ಪಡೆದವರ ಸಂಖ್ಯೆಯ ದೃಷ್ಟಿಯಿಂದ ಭಾರತವು ಈಗ ವಿಶ್ವದಲ್ಲಿ ಎರಡನೆಯ ಸ್ಥಾನದಲ್ಲಿ ಇದೆ. ದೇಶದ 94 ಕೋಟಿ ಪ್ರಜೆಗಳಿಗೆ ಈ ಸೌಲಭ್ಯಗಳು ದೊರೆತಿವೆ ಎಂದು ಐಎಲ್‌ಒ ಹೇಳಿದೆ.

'ಸಾಮಾಜಿಕ ಸುರಕ್ಷತಾ ಸೌಲಭ್ಯಗಳನ್ನು ಪಡೆದವರ ಪ್ರಮಾಣದಲ್ಲಿನ ಏರಿಕೆಯು, ವಿಶ್ವದಲ್ಲಿ ಇಂತಹ ಸೌಲಭ್ಯಗಳ ಅತಿವೇಗದ ವಿಸ್ತರಣೆಯಾಗಿದೆ. ಇದು ಅಂತ್ಯೋದಯದ ವಿಚಾರದಲ್ಲಿ ಸರ್ಕಾರ ಹೊಂದಿರುವ ಬದ್ಧತೆಯನ್ನು ತೋರಿಸುತ್ತಿದೆ' ಎಂದು ಕೇಂದ್ರ ಕಾರ್ಮಿಕ ಸಚಿವ ಮನ್‌ಸುಖ್ ಮಾಂಡವೀಯ ಹೇಳಿದ್ದಾರೆ. ಅವರು ಐಎಲ್‌ಒ ಆಯೋಜಿಸಿರುವ 113ನೆಯ ಅಂತರರಾಷ್ಟ್ರೀಯ ಕಾರ್ಮಿಕ ಸಮಾವೇಶದಲ್ಲಿ ಭಾಗಿಯಾಗಲು ಜಿನಿವಾಕ್ಕೆ ತೆರಳಿದ್ದಾರೆ.

ಕನಿಷ್ಠ ಒಂದಾದರೂ ಸಾಮಾಜಿಕ ಸುರಕ್ಷತಾ ಸೌಲಭ್ಯದ ವ್ಯಾಪ್ತಿಗೆ ಬಂದಿರುವ ಭಾರತೀಯರ ಪ್ರಮಾಣವು ಶೇ 64.3ರಷ್ಟು ಆಗಿದೆ ಎಂಬುದನ್ನು ಐಎಲ್‌ಒ ತನ್ನ ಡ್ಯಾಶ್‌ಬೋರ್ಡ್‌ನಲ್ಲಿ ಪ್ರಕಟಿಸಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.


ಕಳೆದ ದಶಕದಲ್ಲಿ ಇದ್ದ ಪ್ರಮಾಣಕ್ಕೆ ಹೋಲಿಸಿದರೆ ಈ ಸೌಲಭ್ಯ ಪಡೆದವರ ಪ್ರಮಾಣದಲ್ಲಿ ಶೇ 45ರಷ್ಟು ಏರಿಕೆ ಆಗಿದೆ, ದಶಕವೊಂದರ ಅವಧಿಯಲ್ಲಿ ಈ ಪ್ರಮಾಣದ ಏರಿಕೆ ಹಿಂದೆಂದೂ ಆಗಿರಲಿಲ್ಲ ಎಂದು ಐಎಲ್‌ಒ ಹೇಳಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಬಡವರು ಮತ್ತು ಕಾರ್ಮಿಕ ವರ್ಗದವರಿಗೆ ಭಾರತದಲ್ಲಿ ಜಾರಿಗೆ ತಂದಿರುವ ಅಭಿವೃದ್ಧಿ ನೀತಿಗಳನ್ನು ಐಎಲ್‌ಒ ಮಹಾನಿರ್ದೇಶಕ ಗಿಲ್ಬರ್ಟ್ ಎಫ್. ಹೊಂಗ್ಬೊ ಪ್ರಶಂಸಿಸಿದ್ದಾರೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಪ್ರಕಟಣೆ ಹೇಳಿದೆ.

ಸಾಮಾಜಿಕ ಸುರಕ್ಷತಾ ಸೌಲಭ್ಯವನ್ನು ಐಎಲ್‌ಒ ಪರಿಗಣನೆಗೆ ತೆಗೆದುಕೊಳ್ಳಬೇಕು ಎಂದಾದರೆ ಆ ಯೋಜನೆಗೆ ಶಾಸನವೊಂದರ ಬಲ ಇರಬೇಕು, ನಗದು ರೂಪದಲ್ಲಿ ಸೌಲಭ್ಯ ನೀಡುತ್ತಿರಬೇಕು, ಸೌಲಭ್ಯವು ಚಾಲ್ತಿಯಲ್ಲಿ ಇರಬೇಕು ಮತ್ತು ಕಳೆದ ಮೂರು ವರ್ಷಗಳ ದತ್ತಾಂಶವನ್ನು ಒದಗಿಸಬೇಕು ಎಂದು ಸಚಿವಾಲಯವು ಹೇಳಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್, ನಿಫ್ಟಿ ಏರಿಕೆ



ಮುಂಬೈ (ಪಿಟಿಐ): ದೇಶದ ಷೇರು ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 123 ಅಂಶ ಹೆಚ್ಚಳವಾಗಿ, 82,515ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 37 ಅಂಶ ಏರಿಕೆಯಾಗಿ, 25,141ಕ್ಕೆ ಕೊನೆಗೊಂಡಿದೆ.

ಎಚ್‌ಸಿಎಲ್ ಟೆಕ್, ಇನ್ಫೊಸಿಸ್, ಟೆಕ್ ಮಹೀಂದ್ರ, ರಿಲಯನ್ಸ್ ಇಂಡಸ್ಟ್ರೀಸ್, ಬಜಾಜ್ ಫಿನ್‌ಸರ್ವ್, ಐಸಿಐಸಿಐ ಬ್ಯಾಂಕ್, ಟಾಟಾ ಮೋಟರ್ಸ್ ಮತ್ತು ಎಟರ್ನಲ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಪವರ್ ಗ್ರಿಡ್, ಅದಾನಿ ಪೋರ್ಟ್ಸ್, ಇಂಡಸ್‌ಇಂಡ್ ಬ್ಯಾಂಕ್, ನೆಸ್ಲೆ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಹಿಂದೂಸ್ತಾನ್ ಯುನಿಲಿವರ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಎಂಸಿಎಲ್‌ನಲ್ಲಿ ಪರಿಸರ ದಿನಾಚರಣೆ

ಬೆಂಗಳೂರು: ಕೇಂದ್ರ ಸರ್ಕಾರದ 'ಮಹಾನದಿ ಕೋಲ್‌ಫೀಲ್ಡ್ಸ್ ಲಿಮಿಟೆಡ್' (ಎಂಸಿಎಲ್) ಕಂಪನಿಯು ಒಡಿಶಾದ ಸಂಬಲಪುರದಲ್ಲಿನ ತನ್ನ ಕೇಂದ್ರ ಕಚೇರಿಯಲ್ಲಿ ಈಚೆಗೆ ವಿಶ್ವ ಪರಿಸರ ದಿನವನ್ನು ಆಚರಿಸಿತು. ಈ ಸಂದರ್ಭದಲ್ಲಿ ಅದು 'ಅಮ್ಮನ ಹೆಸರಿನಲ್ಲಿ ಒಂದು ಮರ' ಅಭಿಯಾನವನ್ನು ಆರಂಭಿಸಿತು.

ಕಂಪನಿಯ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಉದಯ್ ಅನಂತ ಕಾಓಲೆ ಅವರು ಸಸಿ ನೆಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ಕಂಪನಿಯ ಹಿರಿಯ ಅಧಿಕಾರಿಗಳಾದ ಕೇಶವ ರಾವ್, ಪಿ.ಕೆ. ಪಟೇಲ್, ಜೆ.ಕೆ. ಬೋರಾ, ಎ.ಕೆ. ಬೆಹುರಾ, ಸಂಜಯ್ ಝಾ ಮತ್ತಿತರರು ಇದ್ದರು.

ಪರಿಸರ ದಿನಾಚರಣೆಯ ಭಾಗವಾಗಿ ಕಾಓಲೆ ಅವರು ಪರಿಸರ ಧ್ವಜ ಆರೋಹಣ ಮಾಡಿದರು, ಎಲ್ಲ ನೌಕರರಿಗೆ ಪರಿಸರ ಪ್ರತಿಜ್ಞೆ ಬೋಧಿಸಿದರು ಎಂದು ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಬೆಂಗಳೂರಿನಲ್ಲಿ ವೊಡಾಫೋನ್ 5ಜಿ ಸೇವೆ ಆರಂಭ

ಬೆಂಗಳೂರು (ಪಿಟಿಐ): ದೂರಸಂಪರ್ಕ ಸೇವಾ ಕಂಪನಿ ವೊಡಾಫೋನ್ ಐಡಿಯಾ, 5 ಜಿ ಸೇವೆಗಳನ್ನು ಬೆಂಗಳೂರಿನಲ್ಲಿ ಬುಧವಾರ ಆರಂಭಿಸಿದೆ.

ಮುಂಬೈ, ದೆಹಲಿ, ಪಟ್ನಾ ಮತ್ತು ಚಂಡೀಗಢದಲ್ಲಿ ವೊಡಾಫೋನ್ ಐಡಿಯಾದ 5ಜಿ ಸೇವೆಗಳು ಈಗಾಗಲೇ ಶುರುವಾಗಿದೆ. ದೇಶದ ಪ್ರಮುಖ 17 ನಗರಗಳಲ್ಲಿ ಈ ಸೇವೆ ಆರಂಭಿಸುವ ಗುರಿಯನ್ನು ಕಂಪನಿ ಹೊಂದಿದೆ. ಆರಂಭಿಕ ಬೆಲೆಯಾಗಿ ಯೋಜನೆಗಳು ₹299ರಿಂದ ಆರಂಭಗೊಳ್ಳಲಿವೆ ಎಂದು ಕಂಪನಿ ತಿಳಿಸಿದೆ.

ಬಳಕೆದಾರರಿಗೆ ಉತ್ತಮ ನೆಟ್‌ವರ್ಕ್ ಸೇವೆ ಒದಗಿಸಲು ಸ್ಯಾಮ್ಸಂಗ್ ಜೊತೆ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ ಎಂದು ಕಂಪನಿ ತಿಳಿಸಿದೆ.

ಕಿರುಸಾಲ ವಿತರಣೆಯಲ್ಲಿ ಶೇ 25ರಷ್ಟು ಇಳಿಕೆ

ನವದೆಹಲಿ (ಪಿಟಿಐ): 2024–2025ರ ಆರ್ಥಿಕ ವರ್ಷದಲ್ಲಿ ಸಣ್ಣ ಹಣಕಾಸು ಸಂಸ್ಥೆಗಳು (ಎಂಎಫ್‌ಐ) ಒಟ್ಟು ₹1.12 ಲಕ್ಷ ಕೋಟಿ ಕಿರುಸಾಲ ವಿತರಿಸಿವೆ.

2023–24ರ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಸಾಲ ವಿತರಣೆಯಲ್ಲಿ ಶೇ 25ರಷ್ಟು ಇಳಿಕೆಯಾಗಿದೆ ಎಂದು ಸಣ್ಣ ಹಣಕಾಸು ಸಂಸ್ಥೆಗಳ ಒಕ್ಕೂಟ (ಎಂಎಫ್‌ಐಎನ್) ಬುಧವಾರ ತಿಳಿಸಿದೆ.

ಒಟ್ಟು 2.2 ಕೋಟಿ ಖಾತೆಗಳಿಗೆ ಈ ಸಾಲವನ್ನು ನೀಡಲಾಗಿದೆ. ಪ್ರತಿ ಖಾತೆಗೆ ಸರಾಸರಿ ₹50,131 ಸಾಲ ನೀಡಲಾಗಿದೆ. ಸರಾಸರಿ ಸಾಲದ ಮೊತ್ತವು 2023–24ಕ್ಕೆ ಹೋಲಿಸಿದರೆ ಶೇ 12.3ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಮಾರ್ಚ್ ಅಂತ್ಯದ ವೇಳೆಗೆ ಉದ್ಯಮದ ಒಟ್ಟು ಸಂಪತ್ತಿನ ನಿರ್ವಹಣಾ ಮೌಲ್ಯದಲ್ಲಿ (ಎಯುಎಂ) ಶೇ 11.9ರಷ್ಟು ಇಳಿಕೆಯಾಗಿದ್ದು, ₹1.47 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಯುಬಿಐ, ಐಒಬಿ ಬಡ್ಡಿ ದರ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ (ಯುಬಿಐ) ಮತ್ತು ಇಂಡಿಯನ್ ಓವರ್‌ಸೀಸ್ ಬ್ಯಾಂಕ್ (ಐಒಬಿ) ಸಾಲದ ಮೇಲಿನ ಬಡ್ಡಿ ದರವನ್ನು ಶೇ 0.50ರಷ್ಟು ಕಡಿತಗೊಳಿಸಿವೆ.

ಎಕ್ಸ್‌ಟರ್ನಲ್ ಬೆಂಚ್‌ಮಾರ್ಕ್ ಲೆಂಡಿಂಗ್ ರೇಟ್ (ಇಬಿಎಲ್‌ಆರ್) ಮತ್ತು ರೆಪೊ ದರ ಆಧರಿಸಿದ ಸಾಲದ ಬಡ್ಡಿ ದರವನ್ನು ಕಡಿಮೆ ಮಾಡಲಾಗಿದೆ. ಗೃಹ, ವಾಹನ, ವೈಯಕ್ತಿಕ ಮತ್ತು ಎಂಎಸ್‌ಎಂಇ ಸಾಲಗಾರರಿಗೆ ಈ ಬಡ್ಡಿ ದರ ಇಳಿಕೆಯ ಪ್ರಯೋಜನ ದೊರೆಯಲಿದೆ ಎಂದು ಯುಬಿಐ ತಿಳಿಸಿದೆ.

ಕಳೆದ ವಾರ ನಡೆದ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆಯು ರೆಪೊ ದರವನ್ನು ಶೇ 0.50ರಷ್ಟು ಕಡಿತಗೊಳಿಸಿತ್ತು. ಹೀಗಾಗಿ ಬ್ಯಾಂಕ್‌ಗಳು ಬಡ್ಡಿ ದರ ಇಳಿಕೆ ಮಾಡಿದೆ.

ಡೊನಾಲ್ಡ್ ಟ್ರಂಪ್ ವಿರುದ್ಧದ ಪೋಸ್ಟ್: ಮಸ್ಕ್ ವಿಷಾದ

ವಾಷಿಂಗ್ಟನ್ (ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಕಳೆದ ವಾರ ಪೋಸ್ಟ್ ಹಾಕಿದ್ದಕ್ಕೆ ಉದ್ಯಮಿ ಇಲಾನ್ ಮಸ್ಕ್ ಬುಧವಾರ ವಿಷಾದ ವ್ಯಕ್ತಪಡಿಸಿದ್ದಾರೆ.

'ಸಾಮಾಜಿಕ ಮಾಧ್ಯಮದ ಪೋಸ್ಟ್‌ಗಳು ಮಿತಿ ಮೀರಿದ್ದಾಗಿದ್ದವು' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ. ಮಸ್ಕ್ ಒಡೆತನದ ಸಂಸ್ಥೆಗಳೊಂದಿಗಿನ ಗುತ್ತಿಗೆಯನ್ನು ರದ್ದು ಮಾಡುವುದಾಗಿಯೂ ಟ್ರಂಪ್ ಎಚ್ಚರಿಕೆ ನೀಡಿದ್ದರು. ಈ ಬೆನ್ನಲ್ಲೇ ಮಸ್ಕ್ ವಿಷಾದ ವ್ಯಕ್ತಪಡಿಸಿದ್ದಾರೆ. ಟ್ರಂಪ್ ಅವರ ತೆರಿಗೆ ಮತ್ತು ಖರ್ಚು ಮಸೂದೆಯನ್ನು ವಿರೋಧಿಸಿ ಮಸ್ಕ್ ಟೀಕೆ ಮಾಡಲು ಆರಂಭಿಸಿದ ನಂತರ ಸಾಮಾಜಿಕ ಮಾಧ್ಯಮದಲ್ಲಿ ಇಬ್ಬರೂ ಪರಸ್ಪರ ಆರೋಪ–ಪ್ರತ್ಯಾರೋಪ ನಡೆಸಿದ್ದರು.

ಸಿಹಿಗೆಣಸು ಧಾರಣೆ ಕುಸಿತ

ಪ್ರಜಾವಾಣಿ ವಾರ್ತೆ

ಸೋಮವಾರಪೇಟೆ (ಕೊಡಗು ಜಿಲ್ಲೆ): ಪ್ರತಿ ಕೆ.ಜಿಗೆ ₹35ರಿಂದ ₹40ರ ಆಸುಪಾಸಿನಲ್ಲಿದ್ದ ಸಿಹಿ ಗೆಣಸಿನ ದರ ಕೇವಲ ₹6ಕ್ಕೆ ಕುಸಿದಿದೆ.

ತಾಲ್ಲೂಕಿನ ಬಾಣವಾರ, ಗಣಗೂರು, ಎರಪಾರೆ, ಗೋಣಿಮರೂರು, ಅಬ್ಬೂರುಕಟ್ಟೆ, ಅಳುವಾರ ಸೇರಿ ಕಡಿಮೆ ಮಳೆ ಬೀಳುವೆಡೆ ರೈತರು ಗೆಣಸು ಬೆಳೆದಿದ್ದಾರೆ. ಫಸಲನ್ನು 6 ತಿಂಗಳ ನಂತರ ಕೀಳಲಾರಂಭಿಸಿ 8 ತಿಂಗಳವರೆಗೆ ಕಾಯ್ದುಕೊಳ್ಳಬಹುದಾರೂ, ದರ ಕುಸಿದಿರುವುದರಿಂದ ಸಂಪೂರ್ಣವಾಗಿ ಕೀಳಲೇಬೇಕಾಗಿದೆ. 'ವರ್ಷಕ್ಕೆ ಎರಡು ಬಾರಿ ಬೆಳೆಯುವ ಸಿಹಿಗೆಣಸು ಹೆಚ್ಚಿನ ನೀರು ಬೇಡುವುದಿಲ್ಲ. 6 ತಿಂಗಳಲ್ಲಿ ಬೆಳೆ ಕೈಗೆ ಬರುತ್ತದೆ. ಆಗ ಬೆಲೆ ಎಷ್ಟಿದ್ದರೂ ಮಾರಬೇಕಾಗುತ್ತದೆ' ಎನ್ನುತ್ತಾರೆ ಗಣಗೂರಿನ ಋಷಿ.

'ಗೆಣಸನ್ನು ಮಂಗಳೂರು, ಕೇರಳಕ್ಕೆ ಸಾಗಿಸಲಾಗುತ್ತದೆ. ಸಂಗ್ರಹಿಸಿಡಲು ಶೀತಲೀಕರಣ ವ್ಯವಸ್ಥೆ ಇದ್ದರೆ ಮಾತ್ರ ಲಾಭವಾಗುತ್ತದೆ' ಎಂಬುದು ಗೋಣಿಮರೂರಿನ ಹರೀಶ್ ಅಭಿಮತ.

'ಸಂವಿಧಾನ ಎಂಬ ಶಾಂತ ಕ್ರಾಂತಿ'



ಬಿ.ಆರ್.ಗವಾಯಿ

ಲಂಡನ್ (ಪಿಟಿಐ): ಭಾರತದ ಸಂವಿಧಾನವು ಸಾಮಾಜಿಕ ದಾಖಲೆ. ಅದು ಕೇವಲ ತೋರ್ಪಡಿಕೆಗಾಗಿ 'ಎಲ್ಲರೂ ಸಮಾನರು' ಎಂದು ಹೇಳುವುದಿಲ್ಲ. ಬದಲಾಗಿ ಅಧಿಕಾರದ ಮರು–ಮೌಲ್ಯಮಾಪನ ಮಾಡಲು ಮತ್ತು ಘನತೆಯನ್ನು ಮರುಸ್ಥಾಪಿಸಲು ಮಧ್ಯಪ್ರವೇಶಿಸುವಷ್ಟು ಗಟ್ಟಿತನವನ್ನು ಹೊಂದಿದೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ಹೇಳಿದರು.

'ಸಂವಿಧಾನವು ಕಾನೂನು ಅಥವಾ ರಾಜಕೀಯ ಚೌಕಟ್ಟು ಅಲ್ಲ; ಅದು ಒಂದು ಭಾವನೆ, ಶಾಯಿಯಲ್ಲಿ ಕೆತ್ತಿದ ಶಾಂತ ಸ್ವರೂಪದ ಕ್ರಾಂತಿ' ಎಂದರು.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ, 'ಪ್ರಾತಿನಿಧ್ಯದಿಂದ ಪರಿವರ್ತನೆಯೆಡೆಗೆ: ಸಂವಿಧಾನದ ವಿಶ್ವಾಸಾರ್ಹತೆಯ ಸಾಕಾರ' ಎಂಬ ವಿಷಯ ಕುರಿತು ಮಂಗಳವಾರ ಅವರು ಮಾತನಾಡಿದರು. ಮುನ್ಸಿಪಲ್ ಶಾಲೆಯಿಂದ ಸುಪ್ರೀಂ ಕೋರ್ಟ್‌ನ ಅತ್ಯುನ್ನತ ಹುದ್ದೆಯವರೆಗಿನ ತಮ್ಮ ಜೀವನದ ಪಯಣವನ್ನೇ ಉಲ್ಲೇಖಿಸಿ, ತಳ ಸಮುದಾಯಗಳ ಮೇಲೆ ಸಂವಿಧಾನದ ಸಕಾರಾತ್ಮಕ ಪರಿಣಾಮವನ್ನು ಒತ್ತಿ ಹೇಳಿದರು.

'ಹಲವು ದಶಕಗಳ ಹಿಂದೆ ಭಾರತದ ಲಕ್ಷಾಂತರ ನಾಗರಿಕರನ್ನು 'ಅಸ್ಪೃಶ್ಯರು' ಎಂದು ಕರೆಯಲಾಗುತ್ತಿತ್ತು. ಅವರನ್ನು ಅಶುದ್ಧರು ಎನ್ನಲಾಗುತ್ತಿತ್ತು. ಅವರು ತಮಗಾಗಿ ಧ್ವನಿ ಎತ್ತುವಂತಿಲ್ಲ ಎಂದು ಹೇಳಲಾಗುತ್ತಿತ್ತು. ಆದರೆ ಇಂದು ನಾವು ಇಲ್ಲಿದ್ದೇವೆ. ಅದೇ ಸಮುದಾಯಕ್ಕೆ ಸೇರಿದ ವ್ಯಕ್ತಿಯೊಬ್ಬರು ದೇಶದ ನ್ಯಾಯಾಂಗದ ಅತ್ಯುನ್ನತ ಹುದ್ದೆಯನ್ನು ಹೊಂದಿ, ಮುಕ್ತವಾಗಿ ಮಾತನಾಡುತ್ತಿದ್ದಾರೆ' ಎಂದರು.

ಮುಂಬೈ ಧಾರಣೆ

ಶೇಂಗಾ

11-06-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1370 (1370)
ಒಂದು ವಾರದ ಡೆಲಿವರಿ	1365 (1365)
ಪಾಮ್ ವಾರದ ಡೆಲಿವರಿ	1138 (1143)
ಸೂರ್ಯಕಾಂತಿ ಎಣ್ಣೆ ಕಚ್ಚಾ	1240 (1245)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹95,700 (96,200)
ಬೆಳ್ಳಿ ಕೆ.ಜಿ ₹1,05,300 (1,06,900)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

'ಭಯೋತ್ಪಾದನೆ ತೊಲಗಿಸಲು ಪಾಕ್ ಜತೆ ಸಂಘರ್ಷ'



ಎಸ್.ಜೈಶಂಕರ್

ಬ್ರಸೆಲ್ಸ್ (ಪಿಟಿಐ): ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಇತ್ತೀಚೆಗೆ ನಡೆದ ಸಂಘರ್ಷವು ಎರಡು ರಾಷ್ಟ್ರಗಳ ನಡುವಿನ ಕದನವಲ್ಲ; ಇದು ಭಯೋತ್ಪಾದನೆ ಮೂಲೋತ್ಪಾಟನೆಯ ಸಮರ ಎಂದು ಬೆಲ್ಜಿಯಂನಲ್ಲಿ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಸ್ಪಷ್ಟಪಡಿಸಿದ್ದಾರೆ.

ಇದನ್ನು (ಭಯೋತ್ಪಾದನೆ) ಹೀಗೆಯೇ ಬಿಟ್ಟರೆ ಪಶ್ಚಿಮ ರಾಷ್ಟ್ರಗಳನ್ನೂ ಕಾಡಲು ಆರಂಭಿಸುತ್ತದೆ ಎಂದು ಜೈಶಂಕರ್ ಆತಂಕ ವ್ಯಕ್ತಪಡಿಸಿದ್ದಾರೆ.

ಐರೋಪ್ಯ ರಾಷ್ಟ್ರದ ಸುದ್ದಿ ಜಾಲ 'ಯುರೈಕ್ಟೀವ್'ಗೆ ಬುಧವಾರ ನೀಡಿದ ಸಂದರ್ಶನದಲ್ಲಿ ಈ ವಿಚಾರ ತಿಳಿಸಿದ ಜೈಶಂಕರ್, ಪಹಲ್ಗಾಮ್ ದಾಳಿಗೆ ಭಾರತ ನೀಡಿದ 'ಆಪರೇಷನ್ ಸಿಂಧೂರ' ಪ್ರತ್ಯುತ್ತರದ ಬಗ್ಗೆ ಮಾಹಿತಿ ನೀಡಿದ್ದಾರೆ.

'ಒಸಾಮ ಬಿನ್ ಲಾಡೆನ್ ಎಂಬಾತನಿದ್ದ. ಆತ ಏಕೆ ಪಶ್ಚಿಮ ತುದಿಗೆ ಸಮಾನಾಂತರವಾಗಿರುವ ಪಾಕಿಸ್ತಾನ ಸೇನಾ ನಗರ ತನಗೆ ಸುರಕ್ಷಿತ ಎಂದು ಭಾವಿಸಿ ಸುಮಾರು ವರ್ಷಗಳ ಕಾಲ ಅಲ್ಲಿ ನೆಲಸಿದ್ದ' ಎಂದು ಜೈಶಂಕರ್ ಪ್ರಶ್ನಿಸಿದ್ದಾರೆ.

'ಆಪರೇಷನ್ ಸಿಂಧೂರ'ಕ್ಕೆ ಎರಡು ಪರಮಾಣು ರಾಷ್ಟ್ರಗಳ ನಡುವಿನ ಜಿದ್ದಾಜಿದ್ದಿ ಎಂದು ಅಂತರರಾಷ್ಟ್ರೀಯ ಮಾಧ್ಯಮಗಳು ಚೌಕಟ್ಟು ಹಾಕುತ್ತಿರುವುದನ್ನು ಜೈಶಂಕರ್ ಟೀಕಿಸಿದ್ದಾರೆ. ರಷ್ಯಾ ವಿರುದ್ಧ ಪ್ರತಿಬಂಧ ಹಾಕಿದ್ದನ್ನು ಭಾರತ ಏಕೆ ಬೆಂಬಲಿಸಲಿಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಉಕ್ರೇನ್ ಮತ್ತು ರಷ್ಯಾ ಜತೆ ಭಾರತ ಗಟ್ಟಿಯಾದ ಸಂಬಂಧ ಹೊಂದಿದೆ. ಯುದ್ಧದ ಮೂಲಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲಾಗದು' ಎಂದಿದ್ದಾರೆ.

ಪಾಕ್, ಭಾರತ ಎರಡೂ ಮುಖ್ಯ: ಅಮೆರಿಕ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಅಮೆರಿಕವು ಭಾರತ, ಪಾಕಿಸ್ತಾನ ಎರಡೂ ದೇಶಗಳ ಜೊತೆಗೆ ಸಂಬಂಧವನ್ನು ಹೊಂದಿರಬೇಕು. ಯಾವುದಾದರೂ ಒಂದು ದೇಶದ ಜೊತೆ ಮಾತ್ರ ಸಂಬಂಧ ಹೊಂದಿರಬೇಕು ಎಂಬ ಭಾವನೆ ಇರಬೇಕಿಲ್ಲ ಎಂದು ಅಮೆರಿಕದ ಸೇನಾ ಜನರಲ್ ಹೇಳಿದ್ದಾರೆ.

ಅಮೆರಿಕ ಸಶಸ್ತ್ರ ಸೇವೆಗಳ ಸಮಿತಿಯ ಸಭೆಯಲ್ಲಿ ಮಾತನಾಡಿದ ಸೇನಾ ಜನರಲ್ ಮಿಚೆಲ್ ಕುರಿಲ್ಲಾ, 'ನಾವು ಸಂಬಂಧದ ಸಕಾರಾತ್ಮಕ ಅಂಶವನ್ನು ಮಾತ್ರ ನೋಡಬೇಕು. ಪಾಕಿಸ್ತಾನದ ಪಾಲುದಾರಿಕೆಯೊಂದಿಗೆ ತಾಲಿಬಾನ್ ಐಸಿಸ್ ಕೊರಾಸನ್‌ನ 12ಕ್ಕೂ ಹೆಚ್ಚು ಜನರನ್ನು ಕೊಲ್ಲಲಾಗಿದೆ. ನಾವು ಪಾಕಿಸ್ತಾನಕ್ಕೆ ಗುಪ್ತಚರ ಸಹಕಾರ ನೀಡಿದರೆ, ಆ ದೇಶದವರು ಐಸಿಸ್ ಕೊರಾಸನ್‌ನ ಕನಿಷ್ಠ ಐವರನ್ನು ಸೆರೆಹಿಡಿಯುತ್ತಾರೆ' ಎಂದು ತಿಳಿಸಿದ್ದಾರೆ.

ಭಾರತಕ್ಕೆ ಬೆಂಬಲ: ಮತ್ತೊಮ್ಮೆ ದೃಢಪಡಿಸಿದ ಅಮೆರಿಕ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): 'ಭಯೋತ್ಪಾದನೆ ವಿರುದ್ಧದ ಭಾರತದ ಹೋರಾಟ ಮತ್ತು ದ್ವಿಪಕ್ಷೀಯ ಕಾರ್ಯತಂತ್ರಗಳ ಪಾಲುದಾರಿಕೆಯಲ್ಲಿ ಭಾರತಕ್ಕೆ ನಮ್ಮ ಪ್ರಬಲ ಬೆಂಬಲ ಇದೆ' ಎಂದು ಅಮೆರಿಕ ಪುನರ್ ದೃಢಪಡಿಸಿದೆ. ಭಾರತದ ಸರ್ವಪಕ್ಷಗಳ ಸಂಸದರ ನಿಯೋಗ ಭೇಟಿ ನೀಡಿದ್ದ ಸಂದರ್ಭದಲ್ಲಿ ಇದನ್ನು ತಿಳಿಸಿರುವುದಾಗಿ ಅಮೆರಿಕದ ರಾಜತಾಂತ್ರಿಕ ಇಲಾಖೆ ಹೇಳಿದೆ.

ಹಿಮಾಂಶಿ, ಅಭಿನವ್ ಚಾಂಪಿಯನ್



ಅಭಿನವ್ ಕೆ. ಮೂರ್ತಿ, ಹಿಮಾಂಶಿ ಚೌಧರಿ

ಬೆಂಗಳೂರು: ಹಿಮಾಂಶಿ ಚೌಧರಿ ಮತ್ತು ಅಭಿನವ್ ಕೆ. ಮೂರ್ತಿ ಅವರು ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ (19 ವರ್ಷದೊಳಗಿನವರು) ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡರು.

ಇಲ್ಲಿನ ಮ್ಯಾಚ್ ಪಾಯಿಂಟ್ ವಿ.ವಿ. ಪುರಂನಲ್ಲಿ ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ಬುಧವಾರ ಆರಂಭವಾದ ಟೂರ್ನಿಯ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಹಿಮಾಂಶಿ 11-7, 7-11, 11-5, 11-8, 8-11, 11-4ರಿಂದ ನೀತಿ ಅಗರವಾಲ್ ಅವರನ್ನು ಮಣಿಸಿದರು. ಇದಕ್ಕೂ ಮೊದಲು ಸೆಮಿಫೈನಲ್‌ನಲ್ಲಿ ಹಿಮಾಂಶಿ 10-12, 11-8, 11-9, 11-5ರಿಂದ ಹಿಯಾ ಸಿಂಗ್ ವಿರುದ್ಧ; ನೀತಿ 9-11, 11-5, 12-10, 10-12, 12-10ರಿಂದ ಪ್ರೇಕ್ಷಾ ಟಿ. ತಿಲಾವತ್ ವಿರುದ್ಧ ಗೆಲುವು ಸಾಧಿಸಿದ್ದರು.

ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಅಭಿನವ್ 7-11, 11-4, 11-7, 11-6, 11-9ರಿಂದ ವಿಭಾಸ್ ವಿ.ಜಿ. ವಿರುದ್ಧ ಜಯ ಸಾಧಿಸಿದರು. ನಾಲ್ಕರ ಘಟ್ಟದ ಹಣಾಹಣಿಯಲ್ಲಿ ವಿಭಾಸ್ 11-9, 11-8, 8-11, 11-13, 11-5ರಿಂದ ಅರ್ಣವ್ ಎನ್. ಎದುರು; ಅಭಿನವ್ 13-11, 8-11, 11-5, 11-6ರಿಂದ ಅಥರ್ವ ನವರಂಗ ಎದುಗು ಜಯ ಸಾಧಿಸಿದ್ದರು.

ಚೀನಾ ಸರಕುಗಳ ಮೇಲಿನ ಸುಂಕ ಶೇ 55ರಷ್ಟಾಗಲಿದೆ: ಟ್ರಂಪ್

ಖನಿಜ ಪೂರೈಕೆ: ಚೀನಾ, ಅಮೆರಿಕ ಒಪ್ಪಂದ



ವಾಷಿಂಗ್ಟನ್(ಎಪಿ): ನೂತನ ಒಪ್ಪಂದದಡಿ, ಅಮೆರಿಕವು ಚೀನಾದಿಂದ ಅಯಸ್ಕಾಂತಗಳು ಹಾಗೂ ಅಪರೂಪದ ಖನಿಜಗಳನ್ನು (ರೇರ್ ಅರ್ತ್ ಎಲಿಮೆಂಟ್ಸ್) ಖರೀದಿಸಲಿದೆ. ಹೀಗಾಗಿ, ಚೀನಾದ ಸರಕುಗಳ ಮೇಲಿನ ಸುಂಕಗಳು ಶೇ 55ರಷ್ಟು ಹೆಚ್ಚಳವಾಗಲಿವೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಹೇಳಿದ್ದಾರೆ.

'ಇದಕ್ಕೆ ಪ್ರತಿಯಾಗಿ, ಚೀನಾ ವಿದ್ಯಾರ್ಥಿಗಳು ಅಮೆರಿಕದ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಕೈಗೊಳ್ಳುವುದಕ್ಕೆ ಅವಕಾಶ ನೀಡಲಾಗುವುದು' ಎಂದೂ ಹೇಳಿದ್ದಾರೆ.

ಆತಂಕ: ಅಪರೂಪದ ಖನಿಜಗಳ ವ್ಯಾಪಾರಕ್ಕೆ ಸಂಬಂಧಿಸಿ ಅಮೆರಿಕ ಮತ್ತು ಚೀನಾ ನಡುವೆ ಒಪ್ಪಂದ ಏರ್ಪಟ್ಟ ಬೆನ್ನಲ್ಲೇ, ಚೀನಾದ ಜಿನ್‌ಜಿಯಾಂಗ್ ಪ್ರಾಂತ್ಯದಲ್ಲಿ ಕಾರ್ಮಿಕರ ಶೋಷಣೆ ಹೆಚ್ಚಾಗುವ ಕುರಿತು ಮಾನವ ಹಕ್ಕುಗಳ ಸಂಘಟನೆಗಳು ಆತಂಕ ವ್ಯಕ್ತಪಡಿಸಿವೆ.

ಟೈಟಾನಿಯಂ, ಲೀಥಿಯಂ, ಬೆರಿಲಿಯಂ ಹಾಗೂ ಮ್ಯಾಗ್ನೇಷಿಯಂನಂತಹ ಖನಿಜಗಳ ಗಣಿಗಾರಿಕೆ ಷಿನ್‌ಜಿಯಾಂಗ್ ಪ್ರಾಂತ್ಯದಲ್ಲಿ ಹೆಚ್ಚು. ಇಲ್ಲಿಂದ ಪೂರೈಕೆಯಾಗುವ ಈ ಅಪರೂಪದ ಖನಿಜಗಳ ಮೇಲೆ ಜಾಗತಿಕ ಮಟ್ಟದ ಅನೇಕ ಕಂಪನಿಗಳು ಅವಲಂಬಿತವಾಗಿವೆ.

ಷಿನ್‌ಜಿಯಾಂಗ್ ಪ್ರಾಂತ್ಯದಲ್ಲಿನ ಗಣಿಗಳಲ್ಲಿ ಉಯಿಘರ್ ಮುಸ್ಲಿಮರೇ ಅಧಿಕ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಚೀನಾ ಸರ್ಕಾರ ಇಲ್ಲಿ ಕಾರ್ಮಿಕಸ್ನೇಹಿ ನೀತಿ ಅನುಸರಿಸುವುದಿಲ್ಲ. ಹೆಚ್ಚು ದುಡಿಮೆ–ಕಡಿಮೆ ವೇತನದಂತಹ ಕಠಿಣ ನೀತಿಗಳನ್ನು ಅನುಸರಿಸಲಾಗುತ್ತಿದೆ. ನೂತನ ಒಪ್ಪಂದದಿಂದಾಗಿ ಈ ಕಾರ್ಮಿಕರ ಶೋಷಣೆ ಹೆಚ್ಚಲಿದೆ ಎಂದು ನೆದರ್ಲೆಂಡ್ಸ್ ಮೂಲದ ಗ್ಲೋಬಲ್ ರೈಟ್ಸ್ ಕಾಂಪ್ಲಿಯನ್ಸ್ ಸಂಘಟನೆ ಆತಂಕ ವ್ಯಕ್ತಪಡಿಸಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಚೀನಾ ವಿದೇಶಾಂಗ ಸಚಿವಾಲಯ, 'ಷಿನ್‌ಜಿಯಾಂಗ್ ಪ್ರಾಂತ್ಯದಲ್ಲಿ ದುಡಿಯುವುದಕ್ಕಾಗಿ ಬಲವಂತದಿಂದ ಯಾರನ್ನೂ ವರ್ಗಾವಣೆ ಮಾಡಿಲ್ಲ' ಎಂದು ಹೇಳಿದೆ.

'ಷಿನ್‌ಜಿಯಾಂಗ್ ಪ್ರಾಂತ್ಯದಲ್ಲಿ ಕಾರ್ಮಿಕ ವಿರೋಧಿ ನೀತಿ ಅನುಸರಿಸಲಾಗುತ್ತಿದೆ ಎಂಬ ಆರೋಪಗಳು ಸುಳ್ಳು. ಚೀನಾ ವಿರೋಧಿ ಶಕ್ತಿಗಳು ಇಂತಹ ಸುಳ್ಳುಗಳನ್ನು ಹಬ್ಬಿಸುತ್ತಿವೆ' ಎಂದೂ ಹೇಳಿದೆ.

ಚೀನಾ ಭೇಟಿಗೆ ಮುಂದಾದ ಉದ್ಯಮಿಗಳು

ನವದೆಹಲಿ (ಪಿಟಿಐ): ರೇರ್ ಅರ್ಥ್ ಮ್ಯಾಗ್ನೆಟ್‌ಗಳ ಆಮದಿಗೆ ಚುರುಕು ನೀಡುವ ಉದ್ದೇಶದಿಂದ ಭಾರತದ ಆಟೊಮೊಬೈಲ್ ಉದ್ಯಮದ ಪ್ರತಿನಿಧಿಗಳ ನಿಯೋಗವೊಂದು ಚೀನಾಕ್ಕೆ ಭೇಟಿ ನೀಡಲು ಸಿದ್ಧತೆ ನಡೆಸಿದೆ ಎಂದು ಮೂಲಗಳು ಹೇಳಿವೆ.

ಅಂದಾಜು 40–50 ಮಂದಿ ಪ್ರತಿನಿಧಿಗಳಿಗೆ ವೀಸಾ ಅನುಮತಿ ಸಿಕ್ಕಿದೆ. ಆದರೆ, ಚೀನಾದ ವಾಣಿಜ್ಯ ಸಚಿವಾಲಯದ ಹಸಿರು ನಿಶಾನೆಗೆ ಅವರು ಕಾಯುತ್ತಿದ್ದಾರೆ ಎಂದು ಗೊತ್ತಾಗಿದೆ.

ಆಟೊಮೊಬೈಲ್, ಗೃಹೋಪಯೋಗಿ ಉಪಕರಣಗಳು ಮತ್ತು ಪರಿಸರ ಪೂರಕ ಇಂಧನ ಉತ್ಪಾದನೆಯಲ್ಲಿ ಬಳಕೆಯಾಗುವ ರೇರ್ ಅರ್ಥ್ ಮ್ಯಾಗ್ನೆಟ್ ರಫ್ತಿನ ಮೇಲೆ ಚೀನಾ ಏಪ್ರಿಲ್ 4ರಿಂದ ಅನ್ವಯವಾಗುವಂತೆ ನಿರ್ಬಂಧ ವಿಧಿಸಿದೆ.

ಇವುಗಳ ಪೂರೈಕೆಯು ಸರಿಯಾಗಿ ಆಗದೆ ಇದ್ದರೆ ದೇಶದಲ್ಲಿ ಆಟೊಮೊಬೈಲ್ ತಯಾರಿಕೆಗೆ ತೊಂದರೆ ಆಗಲಿದೆ.

ಇಸ್ರೇಲ್ ದಾಳಿ 41 ಮಂದಿ ಸಾವು

ಕೈರೊ (ರಾಯಿಟರ್ಸ್): ಗಾಜಾದಲ್ಲಿ ಬುಧವಾರ ಇಸ್ರೇಲ್ ನಡೆಸಿದ ಗುಂಡಿನ ದಾಳಿ ಮತ್ತು ವೈಮಾನಿಕ ದಾಳಿಗೆ ಕನಿಷ್ಠ 41 ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ನೆಟ್‌ಜರೀಮ್‌ನಲ್ಲಿರುವ 'ಗಾಜಾ ಹ್ಯುಮ್ಯಾನಿಟೇರಿಯನ್ ಫೌಂಡೇಶನ್' (ಜಿಎಚ್‌ಎಫ್– ಅಮೆರಿಕ ಮಾನವೀಯ ನೆರವು ನೀಡುತ್ತಿದ್ದ ಸ್ಥಳ) ಬಳಿ ಇಸ್ರೇಲ್ ತೀವ್ರ ದಾಳಿ ನಡೆಸಿದೆ. ಈ ವೇಳೆ ಕನಿಷ್ಠ 25 ಜನರು ಮೃತಪಟ್ಟಿದ್ದು, 10ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ ಎಂದು ಶಿಫಾ ಮತ್ತು ಅಲ್–ಕುದ್ಸ್ ಆಸ್ಪತ್ರೆಯ ವೈದ್ಯಕೀಯ ಅಧಿಕಾರಿಗಳು ತಿಳಿಸಿದ್ದಾರೆ.

ರಫಾದಲ್ಲಿರುವ ಜಿಎಚ್‌ಎಫ್ ಬಳಿ ಇಸ್ರೇಲ್ ದಾಳಿಗೆ ಕನಿಷ್ಠ ಆರು ಜನರು ಮೃತಪಟ್ಟಿದ್ದಾರೆ ಎಂದು ಗಾಜಾ ಪಟ್ಟಿಯಲ್ಲಿರುವ ಖಾನ್ ಯೂನಿಸ್‌ನ ನಾಸರ್ ಆಸ್ಪತ್ರೆ ಅಧಿಕಾರಿಗಳು ತಿಳಿಸಿದ್ದಾರೆ.




ಸಮ್ಮಾನಕ್ಕಾಗಿ ಹಿರಿ, ಕಿರಿಯರ ಪೈಪೋಟಿ

'ಕಾಸಾಗ್ರ್ಯಾಂಡ್' ಪ್ರಸ್ತುತ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' 3ನೇ ಆವೃತ್ತಿಗೆ ದಿನಗಣನೆ ಆರಂಭವಾಗಿದೆ. ಇಂದು ಮೂರು ವಿಭಾಗಗಳ ನಾಮನಿರ್ದೇಶನಗಳನ್ನು ಪ್ರಕಟಿಸಲಾಗುತ್ತಿದೆ. ಇನ್ನಷ್ಟು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರುಗಳನ್ನು ಹಂತ ಹಂತವಾಗಿ ಪ್ರಕಟಿಸಲಾಗುವುದು.

CASAGRAND building aspirations Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಅತ್ಯುತ್ತಮ ಪೋಷಕ ನಟ



- ಲೋಕೇಶ್ ಗೌಡ — ಚಿತ್ರ: ಜಲಂಧರ
- ಗೋಪಾಲಕೃಷ್ಣ ದೇಶಪಾಂಡೆ — ಚಿತ್ರಗಳು: ಬ್ಲಿಂಕ್ ಮತ್ತು ಶಾಖಾಹಾರಿ
- ಜಹಾಂಗೀರ್ ಎಂ.ಎಸ್ — ಚಿತ್ರ: ಫೋಟೋ
- ಸೋಮಶೇಖರ ಬೋಳೆಗಾಂವ್ — ಚಿತ್ರ: ರೂಪಾಂತರ
- ಸಂಪತ್ ಮೈತ್ರೇಯ — ಚಿತ್ರ: ಮೂರನೇ ಕೃಷ್ಣಪ್ಪ

ಅತ್ಯುತ್ತಮ ಪೋಷಕ ನಟಿ



- ರುಹಿಕಾ ರಾಜ್ — ಚಿತ್ರ: ಜಲಂಧರ
- ಅಪೇಕ್ಷಾ ಚೋರನಹಳ್ಳಿ — ಚಿತ್ರ: ಕೋಳಿ ಎಸ್ರು
- ಸುಧಾರಾಣಿ — ಚಿತ್ರ: ಸಂಭವಾಮಿ ಯುಗೇ ಯುಗೇ
- ಹರಿಣಿ ಶ್ರೀಕಾಂತ್ — ಚಿತ್ರ: ಕೆರೆಬೇಟೆ
- ಗಿರಿಜಾ ಲೋಕೇಶ್ — ಚಿತ್ರ: ಜೀನಿಯಸ್ ಮುತ್ತ
- ಪ್ರಿಯಾ ಶಠಮರ್ಷಣ — ಚಿತ್ರ: ಭೀಮ
- ಹನುಮಕ್ಕ — ಚಿತ್ರ: ರೂಪಾಂತರ
- ಸಂಧ್ಯಾ ಅರಕೆರೆ — ಚಿತ್ರ: ಫೋಟೋ

ಅತ್ಯುತ್ತಮ ಛಾಯಾಗ್ರಹಣ



- ಪಿಕೆಎಚ್ ದಾಸ್ — ಚಿತ್ರ: ದೇಸಾಯಿ
- ಸುನೀಲ್ ನರಸಿಂಹಮೂರ್ತಿ — ಚಿತ್ರ: ಅಂಶು
- ಸಂತೋಷ್ ರೈ ಪಾತಾಜೆ — ಚಿತ್ರ: ಕರಟಕ ದಮನಕ
- ಶೇಖರ್‌ಚಂದ್ರ — ಚಿತ್ರ: ಮ್ಯಾಕ್ಸ್
- ನವೀನ್‌ಕುಮಾರ್ — ಚಿತ್ರ: ಭೈರತಿ ರಣಗಲ್
- ವಿಶ್ವಜಿತ್ ರಾವ್ — ಚಿತ್ರ: ಶಾಖಾಹಾರಿ
- ವೆಂಕಟ್ ರಾಮಪ್ರಸಾದ್ — ಚಿತ್ರ: ಕೃಷ್ಣಂ ಪ್ರಣಯ ಸಖಿ
- ದಿನೇಶ್ ದಿವಾಕರನ್ — ಚಿತ್ರ: ಫೋಟೋ
- ಕೀರ್ತನ್ ಪೂಜಾರಿ — ಚಿತ್ರ: ಕೆರೆಬೇಟೆ

ಮುಂದಿನ ವರ್ಷದ ವಿಶ್ವಕಪ್ ಫುಟ್‌ಬಾಲ್ ಟೂರ್ನಿ

ಬ್ರೆಜಿಲ್, ಆಸ್ಟ್ರೇಲಿಯಾಕ್ಕೆ ಅರ್ಹತೆ

ಸಾವೊ ಪೌಲೊ (ಬ್ರೆಜಿಲ್), (ಎಎಫ್‌ಪಿ): ಐದು ಬಾರಿಯ ಚಾಂಪಿಯನ್ ಬ್ರೆಜಿಲ್ ತಂಡ ತವರಿನಲ್ಲಿ ಪರಗ್ವೆ ತಂಡವನ್ನು 1-0 ಗೋಲಿನಿಂದ ಸೋಲಿಸಿ 2026ರ ವಿಶ್ವಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಫೈನಲ್‌ಗೆ ಅರ್ಹತೆ ಪಡೆಯಿತು.

ಇದುವರೆಗಿನ ಎಲ್ಲಾ ವಿಶ್ವಕಪ್‌ಗಳಲ್ಲಿ ಆಡಿದ ಏಕೈಕ ತಂಡ ಎಂಬ ಹಿರಿಮೆಗೆ ದಕ್ಷಿಣ ಅಮೆರಿಕದ ಈ ತಂಡ ಪಾತ್ರವಾಗಿದೆ. ಮಂಗಳವಾರ ನಡೆದ ಅರ್ಹತಾ ಸುತ್ತಿನ ಪಂದ್ಯದ 44ನೇ ನಿಮಿಷ ಮಥಾಯಿಸ್ ಕುನ್ಹಾ ಅವರ ಕ್ರಾಸ್‌ನಲ್ಲಿ ವಿನೀಷಿಯಸ್ ಜೂನಿಯರ್ ಅವರು ಗೋಲು ಗಳಿಸಿದರು.


ಕಾರ್ಲೊ ಆನ್ಸೆಲೋಟ್ಟಿ ಅವರು ಕೋಚ್ ಹುದ್ದೆಗೇರಿದ ನಂತರ ಬ್ರೆಜಿಲ್‌ಗೆ ಒಲಿದ ಮೊದಲ ಜಯ ಇದು.

ಲಿಮಾದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಆತಿಥೇಯ ಪೆರು ವಿರುದ್ಧ ಗೋಲಿಲ್ಲದೇ ಡ್ರಾ ಮಾಡಿಕೊಂಡ ಇಕ್ವೆಡೋರ್ ಸಹ ವಿಶ್ವಕಪ್‌ಗೆ ಟಿಕೆಟ್ ಗಿಟ್ಟಿಸಿಕೊಂಡಿತು.

ಆಸ್ಟ್ರೇಲಿಯಾಕ್ಕೆ ಅರ್ಹತೆ: ಆಸ್ಟ್ರೇಲಿಯಾ ತಂಡ ಮೆಲ್ಬರ್ನ್‌ನಲ್ಲಿ ನಡೆದ ಏಷ್ಯಾ- ಆಸ್ಟ್ರೇಲಿಯಾ ವಲಯದ ಅರ್ಹತಾ ಸುತ್ತಿನ ಪಂದ್ಯದಲ್ಲಿ 2-1 ಗೋಲುಗಳಿಂದ ಸೌದಿ ಅರೇಬಿಯಾ ತಂಡವನ್ನು ಸೋಲಿಸಿ ಸತತ ಆರನೇ ಬಾರಿ ವಿಶ್ವಕಪ್‌ನಲ್ಲಿ ಆಡುವ ಅವಕಾಶ ಸಂಪಾದಿಸಿತು.

ಕನಿಷ್ಠ ಐದು ಗೋಲುಗಳ ಅಂತರದಿಂದ ಜಯಿಸಿದಲ್ಲಿ ಮಾತ್ರ ಸೌದಿ ಅರೇಬಿಯಾಕ್ಕೆ ಅರ್ಹತೆ ಪಡೆಯುವ ಅವಕಾಶವಿತ್ತು. ನೂರನೇ ಅಂತರರಾಷ್ಟ್ರೀಯ ಪಂದ್ಯ ಆಡಿದ ಗೋಲ್‌ಕೀಪರ್ ಮ್ಯಾಟ್ ರಯಾನ್ ಕೊನೆಗಳಿಗೆಯ ಪೆನಾಲ್ಟಿ ಸೇರಿದಂತೆ ಐದು ಗೋಲು ಅವಕಾಶಗಳನ್ನು ತಪ್ಪಿಸಿ ಆಸ್ಟ್ರೇಲಿಯಾದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಈ ಮೂಲಕ ಈ ವಲಯದಿಂದ ಆರು ತಂಡಗಳು ವಿಶ್ವಕಪ್‌ಗೆ ಅರ್ಹತೆ ಪಡೆದಂತಾಗಿದೆ. ಜಪಾನ್, ಇರಾನ್, ದಕ್ಷಿಣ ಕೊರಿಯಾ, ಉಜ್ಬೇಕಿಸ್ತಾನ ಮತ್ತು ಜೋರ್ಡಾನ್ ಇತರ ಐದು ತಂಡಗಳು.



ಸಾವೊ ಪೌಲೊದಲ್ಲಿ ಮಂಗಳವಾರ ನಡೆದ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯದಲ್ಲಿ ಬ್ರೆಜಿಲ್‌ನ ಮಾರ್ಟಿನೆಲಿ (ಮಧ್ಯದಲ್ಲಿ) ಹೆಡ್ ಮಾಡಿ ಗೋಲು ಗಳಿಸುವ ಯತ್ನ ನಡೆಸಿದರು ಎಪಿ/ಪಿಟಿಐ ಚಿತ್ರ

'ಡ್ರೆಸಿಂಗ್ ರೂಮ್‌ನಲ್ಲಿ ಸ್ಮಶಾನಮೌನ ಆವರಿಸಿತ್ತು'

ಹಾಂಗ್‌ಕಾಂಗ್ (ಪಿಟಿಐ): ಹಾಂಗ್‌ಕಾಂಗ್ ಎದುರು ಕೊನೆಗಳಿಗೆಯ 'ಪೆನಾಲ್ಟಿ'ಯಿಂದ ಆಘಾತಕಾರಿ ಸೋಲನುಭವಿಸಿದ ನಂತರ ಭಾರತದ ಡ್ರೆಸಿಂಗ್ ರೂಮ್‌ನಲ್ಲಿ ಸ್ಮಶಾನಮೌನ ಆವರಿಸಿತ್ತು ಎಂದು ತಂಡದ ಹೆಡ್ ಕೋಚ್ ಮನೊಲೊ ಮಾರ್ಕ್ವೆಝ್ ಹೇಳಿದ್ದಾರೆ.

ಆದರೆ, ಈ ಹಿನ್ನಡೆ ಹೊರತಾಗಿಯೂ ತಂಡ 2027ರ ಎಎಫ್‌ಸಿ ಏಷ್ಯನ್ ಕಪ್‌ಗೆ ಅರ್ಹತೆ ಪಡೆಯುವ ಆಶಾವಾದವನ್ನು ಅವರು ಹೊಂದಿದ್ದಾರೆ.

ಹಾಂಗ್‌ಕಾಂಗ್ ಪಂದ್ಯದ 'ಇಂಜುರಿ ಅವಧಿ'ಯಲ್ಲಿ ಪೆನಾಲ್ಟಿಯಲ್ಲಿ ಗೋಲು ಗಳಿಸಿತು. ಭಾರತ ತಂಡದ ತೇರ್ಗಡೆ ಅವಕಾಶ ಈಗ ಕಠಿಣವಾಗಿದೆ. 'ನಮಗೆ ಬೇಸರವಾಗಿದೆ. ಆದರೆ ನಮಗೆ ಅರ್ಹತೆ ಪಡೆಯುವ ಅವಕಾಶ ಈಗಲೂ ಇದೆ' ಎಂದು ಅವರು ಪಂದ್ಯಾನಂತರದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಫಿಫಾ ರ‍್ಯಾಂಕಿಂಗ್‌ನಲ್ಲಿ ಭಾರತ, ಹಾಂಗ್‌ಕಾಂಗ್‌ಗಿಂತ 26 ಸ್ಥಾನಗಳಷ್ಟು ಮೇಲಿದೆ. ಆದರೆ ಪಂದ್ಯದ ಪ್ರಮುಖ ಘಟ್ಟಗಳಲ್ಲಿ ಅವಕಾಶಗಳನ್ನು ಪರಿವರ್ತಿಸುವಲ್ಲಿ ಎಡವಿತು. 35ನೇ ನಿಮಿಷ ಆಶಿಕ್ ಕುರುಣಿಯಾನ್ ಗೋಲು ಗಳಿಸುವ ಸುವರ್ಣಾವಕಾಶ ವ್ಯರ್ಥಪಡಿಸಿದ್ದರು.

'ಸಿ' ಗುಂಪಿನಲ್ಲಿರುವ ಭಾರತ ಎರಡು ಪಂದ್ಯಗಳಿಂದ ಕೇವಲ ಒಂದು ಪಾಯಿಂಟ್ ಪಡೆದಿದೆ. ಗುಂಪಿನ ವಿಜೇತ ತಂಡ ಮಾತ್ರ 2027ರ ಎಎಫ್‌ಸಿ ಏಷ್ಯನ್ ಕಪ್ ಆಡುವ ಅರ್ಹತೆ ಪಡೆಯುತ್ತದೆ.

ಜೂನಿಯರ್ ಹಾಕಿ: ಭಾರತಕ್ಕೆ ಮಣಿದ ಬೆಲ್ಜಿಯಂ



ಆ್ಯಂಟ್‌ವರ್ಪ್ (ಪಿಟಿಐ): ಭಾರತ ಜೂನಿಯರ್ ಮಹಿಳಾ ಹಾಕಿ ತಂಡವು ಯುರೋಪಿಯನ್ ಪ್ರವಾಸದಲ್ಲಿ ಬೆಲ್ಜಿಯಂ ವಿರುದ್ಧ 2-1 ಗೋಲುಗಳಿಂದ ಜಯಗಳಿಸಿತು. ಇದು ಭಾರತ ತಂಡಕ್ಕೆ ಸತತ ಎರಡನೇ ಜಯ.

ಇಲ್ಲಿನ ಹಾಕಿ ಸೆಂಟರ್ ಆಫ್ ಎಕ್ಸಲೆನ್ಸ್‌ನಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಲಾಲ್ತಂತ್ಲುವಾಂಗ (35ನೇ ನಿಮಿಷ, ಪೆನಾಲ್ಟಿ ಸ್ಟ್ರೋಕ್ ಮೂಲಕ) ಮತ್ತು ಗೀತಾ ಯಾದವ್ (50ನೇ ನಿಮಿಷ) ಅವರು ಭಾರತ ತಂಡದ ಪರ ಗೋಲು ಹೊಡೆದರು.

ಆತಿಥೇಯ ತಂಡದ ಏಕೈಕ ಗೋಲನ್ನು ವಾನ್ ಹೆಲ್ಲೆಮೋಂಟ್ 48ನೇ ನಿಮಿಷ ಗಳಿಸಿದರು.

ಮೊದಲ ಪಂದ್ಯದಲ್ಲಿ ಭಾರತ 3-2 ಗೋಲುಗಳಿಂದ ಜಯಗಳಿಸಿತ್ತು. ಈ ಎರಡು ತಂಡಗಳ ನಡುವೆ ಮೂರನೇ ಹಾಗೂ ಅಂತಿಮ ಪಂದ್ಯ 12ರಂದು (ಗುರುವಾರ) ನಡೆಯಲಿದೆ.

ಹೂಪ್ಸ್ 7 ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮರ್ಥ್ ಹಾಗೂ ದೇವ್ ರಾಘವೇಂದ್ರ ಅವರ ಆಟದ ಬಲದಿಂದ ಹೂಪ್ಸ್ 7 ಬಿ.ಸಿ ತಂಡವು ಡಿ.ಎನ್. ರಾಜಣ್ಣ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಜೂನಿಯರ್ (18 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬಾಲಕರ ವಿಭಾಗದ ಪಂದ್ಯದಲ್ಲಿ 67-65ರಿಂದ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಬುಧವಾರ ನಡೆದ ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ಹೂಪ್ಸ್ 7 ಬಿ.ಸಿ ತಂಡದ ಪರ ಸಮರ್ಥ್ ಹಾಗೂ ದೇವ್ ತಲಾ 21 ಅಂಕ ಗಳಿಸಿದರು.

ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡದ ಪರ ಆಕಾಶ್ 22 ಅಂಕ ಕಲೆಹಾಕಿದರು.

ವಿರಾಮದ ವೇಳೆಗೆ 12 ಅಂಕಗಳ (35-23) ಮುನ್ನಡೆಯಲ್ಲಿದ್ದ ಹೂಪ್ಸ್ 7 ಬಿ.ಸಿ ತಂಡಕ್ಕೆ ಉತ್ತರಾರ್ಧದಲ್ಲಿ ಎಂಎನ್‌ಕೆ ತಂಡ ಪ್ರಬಲ ಪೈಪೋಟಿ ನೀಡಿತು. ಅಂತಿಮವಾಗಿ ಹೂಪ್ಸ್ ಎರಡು ಅಂಕಗಳಿಂದ ಗೆಲುವು ಸಾಧಿಸಿತು.

ಫಲಿತಾಂಶಗಳು: ರೌಂಡ್ ರಾಬಿನ್ ಲೀಗ್: ಬಾಲಕರು: ಚಿಕ್ಕಮಗಳೂರು ಜಿಲ್ಲಾ ತಂಡ 76-59ರಿಂದ ಮೈಸೂರು ಜಿಲ್ಲೆ ಎ ವಿರುದ್ಧ; ಡಿವೈಇಎಸ್ ಬೆಂಗಳೂರು ತಂಡ 85-56ರಿಂದ ಎಚ್‌ಬಿಆರ್ ಬಿ.ಸಿ ವಿರುದ್ಧ; ಹೂಪ್ಸ್ 7 ಬಿ.ಸಿ ತಂಡ 67-65ರಿಂದ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡದ ವಿರುದ್ಧ ಗೆಲುವು ಸಾಧಿಸಿದವು.

ಬಾಲಕಿಯರು: ಮಂಡ್ಯ ಜಿಲ್ಲಾ ತಂಡವು 73-50ರಿಂದ ವಿವೇಕ್ಸ್ ಬಿ.ಸಿ ತಂಡದ ಎದುರು ಜಯ ಸಾಧಿಸಿತು.



ಡಿವೈಇಎಸ್ ಬೆಂಗಳೂರು ತಂಡದ ಶ್ರೇಯಸ್ ಬಿ.ಎ. (ಎಡ) ಹಾಗೂ ಎಚ್‌ಬಿಆರ್ ಬಿ.ಸಿ ತಂಡದ ಮೋನಿಷ್ ಚೆಂಡಿಗಾಗಿ ಸೆಣಸಾಡಿದರು ಚಿತ್ರ: ಬಿ.ಕೆ. ಜನಾರ್ದನ

ಮೊದಲ ದಿನವೇ 14 ವಿಕೆಟ್ ಪತನ

ಡಬ್ಲ್ಯುಟಿಸಿ ಫೈನಲ್: 5 ವಿಕೆಟ್ ಪಡೆದು ಮಿಂಚಿದ ರಬಾಡ ● ಆಸ್ಟ್ರೇಲಿಯಾ ವೇಗಿಗಳ ತಿರುಗೇಟು

ಲಂಡನ್ (ಎಎಫ್‌ಪಿ): ವೇಗದ ಬೌಲರ್ ಕಗಿಸೊ ರಬಾಡ (51ಕ್ಕೆ5) ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ದಕ್ಷಿಣ ಆಫ್ರಿಕಾ, ಬುಧವಾರ ಲಾರ್ಡ್ಸ್‌ನಲ್ಲಿ ಆರಂಭವಾದ ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು 212 ರನ್‌ಗಳಿಗೆ ಉರುಳಿಸಿತು.


ಸ್ಟೀವ್ ಸ್ಮಿತ್


ಬ್ಯೂ ವೆಬ್‌ಸ್ಟರ್

ಆದರೆ ಆಸ್ಟ್ರೇಲಿಯಾದ ಅನುಭವಿ ವೇಗದ ಬೌಲರ್‌ಗಳು ತಿರುಗೇಟು ನೀಡಿದ್ದು ಮೊದಲ ದಿನದಾಟ ಮುಗಿದಾಗ ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್‌ನಲ್ಲಿ 4 ವಿಕೆಟ್ 43 ರನ್ ಗಳಿಸಿ ಸಂಕಷ್ಟಕ್ಕೆ ಸಿಲುಕಿದೆ. ಮಿಚೆಲ್ ಸ್ಟಾರ್ಕ್ 10 ರನ್ನಿಗೆ 2 ವಿಕೆಟ್ ಪಡೆದಿದ್ದಾರೆ. ದಿನದಾಟದಲ್ಲಿ ಒಟ್ಟು 14 ವಿಕೆಟ್‌ಗಳು ಉರುಳಿದವು.

ಲಾರ್ಡ್ಸ್ ಕ್ರೀಡಾಂಗಣದಲ್ಲಿ ರಬಾಡ ಎರಡನೇ ಬಾರಿ ಐದು ವಿಕೆಟ್ ಪಡೆದರು. ಟೀ ವಿರಾಮದ ವೇಳೆಗೆ 5 ವಿಕೆಟ್‌ಗೆ 190 ರನ್ ಗಳಿಸಿದ್ದ ಆಸ್ಟ್ರೇಲಿಯಾ ನಂತರ ಆ ಮೊತ್ತಕ್ಕೆ 22 ರನ್ ಸೇರಿಸಲಷ್ಟೇ ಶಕ್ತವಾಯಿತು.

ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿದ ತೆಂಬಾ ಬವುಮಾ ನಿರ್ಧಾರ ಸಮರ್ಥಿಸುವಂತೆ ರಬಾಡ ಅವರು ಇನಿಂಗ್ಸ್‌ನ ಏಳನೇ ಓವರಿನಲ್ಲೇ ಉಸ್ಮಾನ್ ಖ್ವಾಜಾ ಮತ್ತು ಕ್ಯಾಮರಾನ್ ಗ್ರೀನ್ ಅವರ ವಿಕೆಟ್‌ಗಳನ್ನು ಪಡೆದು ಅವರು ಆರಂಭದಲ್ಲೇ ಆಸ್ಟ್ರೇಲಿಯಾಕ್ಕೆ ಪೆಟ್ಟು ನೀಡಿದ್ದರು.

ಅವರಿಗೆ ಬೆಂಬಲ ನೀಡಿದ ಮಾರ್ಕೊ ಯಾನ್ಸೆನ್ ಅವರು ಮಾರ್ನಸ್ ಲಾಬುಶೇನ್ ಮತ್ತು ಅಪಾಯಕಾರಿ ಆಟಗಾರ ಟ್ರಾವಿಸ್ ಹೆಡ್ ಅವರ ವಿಕೆಟ್‌ಗಳನ್ನು ಪಡೆದರು. ಆಗ ಮೊತ್ತ 4 ವಿಕೆಟ್‌ಗೆ 67 ರನ್ ಆಗಿತ್ತು.

ಆದರೆ ಉತ್ತಮ ಲಯದಲ್ಲಿರುವ ಅನುಭವಿ ಸ್ಟೀವ್ ಸ್ಮಿತ್ (66, 10x4) ಅರ್ಧ ಶತಕ ಬಾರಿಸಿ ಆಸರೆಯಾದರು. ತಂಡದ ಪರ ಅತ್ಯಧಿಕ ಮೊತ್ತ ಗಳಿಸಿದ ಬ್ಯೂ ವೆಬ್‌ಸ್ಟರ್ (72, 92ಎ) ಜೊತೆ ಐದನೇ ವಿಕೆಟ್‌ಗೆ 69 ರನ್ ಸೇರಿಸಿದ್ದರಿಂದ ಕಾಂಗರೂ ಪಡೆ ಚೇತರಿಸಿಕೊಂಡಿತು. ಈ ಹಂತದಲ್ಲಿ ಮರ್ಕರಂ ಬೌಲಿಂಗ್‌ನಲ್ಲಿ ಸ್ಲಿಪ್‌ನಲ್ಲಿ ಯಾನ್ಸೆನ್ ಹಿಡಿದ ಉತ್ತಮ ಕ್ಯಾಚಿಗೆ ಸ್ಮಿತ್ ನಿರ್ಗಮಿಸಬೇಕಾಯಿತು.

ಟೀ ವಿರಾಮದ ನಂತರ, ರಬಾಡ ಒಂದೇ ಓವರಿನಲ್ಲಿ ನಾಯಕ ಪ್ಯಾಟ್ ಕಮಿನ್ಸ್ ಮತ್ತು ಆಕ್ರಮಣಕಾರಿಯಾಗಿದ್ದ ವೆಬ್‌ಸ್ಟರ್ ವಿಕೆಟ್‌ಗಳನ್ನು ಪಡೆದು ಮಿಂಚಿದರು. ನಂತರ ಮಿಚೆಲ್ ಸ್ಟಾರ್ಕ್ ಅವರ ವಿಕೆಟ್ ಕೂಡ ಪಡೆದು ಇನಿಂಗ್ಸ್‌ಗೆ ತೆರೆಯೆಳೆದರು.

ರಬಾಡ ಈ ಹಾದಿಯಲ್ಲಿ ಅಲನ್ ಡೊನಾಲ್ಡ್ (330 ವಿಕೆಟ್) ಅವರನ್ನು ಹಿಂದೆಹಾಕಿ ದಕ್ಷಿಣ ಆಫ್ರಿಕಾದ ಸಾರ್ವಕಾಲಿಕ ವಿಕೆಟ್ ಗಳಿಕೆದಾರರಲ್ಲಿ ನಾಲ್ಕನೇ ಸ್ಥಾನ ಪಡೆದರು. ರಬಾಡ 332 ವಿಕೆಟ್‌ಗಳನ್ನು ಪಡೆದಂತಾಗಿದೆ.

ಮನರಂಜನೆ ಉದ್ದೇಶದ ಮದ್ದು ಸೇವನೆಗಾಗಿ, ಕೇವಲ ಆರು ವಾರಗಳ ಹಿಂದಷ್ಟೇ ರಬಾಡ ಅವರು ಅಲ್ಪಾವಧಿಗೆ ಅಮಾನತು ಶಿಕ್ಷೆಗೆ ಒಳಗಾಗಿದ್ದರು.

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ 1ನೇ ಇನಿಂಗ್ಸ್: 212 (56.4 ಓವರುಗಳಲ್ಲಿ)
ಖ್ವಾಜಾ ಸಿ ಬೆಡ್ಡಿಂಗಮ್ ಬಿ ರಬಾಡ 0 (20ಎ)
ಲಾಬುಶೇನ್ ಸಿ ವೇರಿಯನ್ ಬಿ ಯಾನ್ಸೆನ್ 17 (56ಎ, 4x1)
ಗ್ರೀನ್ ಸಿ ಮರ್ಕರಂ ಬಿ ರಬಾಡ 4 (3ಎ, 4x1)
ಸ್ಮಿತ್ ಸಿ ಯಾನ್ಸೆನ್ ಬಿ ಮರ್ಕರಂ 66 (112ಎ, 4x10)
ಹೆಡ್ ಸಿ ವೇರಿಯನ್ ಬಿ ಯಾನ್ಸೆನ್ 11 (13ಎ, 4x1)
ವೆಬ್‌ಸ್ಟರ್ ಬಿ ಬೆಡಿಂಗಮ್ ಬಿ ರಬಾಡ 72 (92ಎ, 4x11)
ಕ್ಯಾರಿ ಬಿ ಮಹಾರಾಜ್ 23 (31ಎ, 4x4)
ಕಮಿನ್ಸ್ ಬಿ ರಬಾಡ 1 (6ಎ)
ಸ್ಟಾರ್ಕ್ ಬಿ ರಬಾಡ 1 (12ಎ)
ಲಯನ್ ಬಿ ಯಾನ್ಸೆನ್ 0 (4ಎ)
ಹ್ಯಾಜಲ್‌ವುಡ್ ಔಟಾಗದೇ 0 (1ಎ)
ಇತರೆ 17 (ಲೆಗ್‌ಬೈ 7, ನೋಬಾಲ್ 10)
ವಿಕೆಟ್ ಪತನ: 1–12 (ಉಸ್ಮಾನ್ ಖ್ವಾಜಾ 6.3), 2–16 (ಕ್ಯಾಮರಾನ್ ಗ್ರೀನ್, 6.6), 3–46 (ಮಾರ್ನಸ್ ಲಾಬುಷೇನ್, 17.6), 4–67 (ಟ್ರಾವಿಸ್ ಹೆಡ್, 23.2), 5–146 (ಸ್ಟೀವ್ ಸ್ಮಿತ್, 41.6), 6–192 (ಅಲೆಕ್ಸ್ ಕ್ಯಾರಿ, 51.1), 7–199 (ಪ್ಯಾಟ್ ಕಮಿನ್ಸ್, 52.4), 8–210 (ಬ್ಯೂ ವೆಬ್‌ಸ್ಟರ್, 54.4), 9–211 (ನೇಥನ್ ಲಯನ್, 55.5), 10–212 (ಮಿಚೆಲ್ ಸ್ಟಾರ್ಕ್, 56.4).
ಬೌಲಿಂಗ್: ಕಗಿಸೊ ರಬಾಡ 15.4–5–51–5; ಮಾರ್ಕೊ ಯಾನ್ಸೆನ್ 14–5–49–3; ಲುಂಗಿ ಗಿಡಿ 8–0–45–0; ವಿಯಾನ್ ಮುಲ್ಡರ್ 11–3–36–0; ಕೇಶವ್ ಮಹಾರಾಜ್ 6–0–19–1; ಏಡನ್ ಮರ್ಕರಂ 2–0–5–1

ದಕ್ಷಿಣ ಆಫ್ರಿಕಾ 1ನೇ ಇನಿಂಗ್ಸ್: 4 ವಿಕೆಟ್‌ಗೆ 43 (22 ಓವರುಗಳಲ್ಲಿ)
ಮರ್ಕರಂ ಬಿ ಸ್ಟಾರ್ಕ್ 0 (6ಎ)
ರಿಕೆಲ್ಟನ್ ಸಿ ಖ್ವಾಜಾ ಬಿ ಸ್ಟಾರ್ಕ್ 16 (23ಎ, 4x3)
ಮುಲ್ಡರ್ ಬಿ ಕಮಿನ್ಸ್ 6 (44ಎ)
ಬವುಮಾ ಔಟಾಗದೇ 3 (44ಎ)
ಸ್ಟಬ್ಸ್ ಬಿ ಹ್ಯಾಜಲ್‌ವುಡ್ 2 (13ಎ)
ಬೆಡ್ಡಿಂಗಮ್ ಔಟಾಗದೇ 8 (9ಎ, 4x2)
ಇತರೆ 8 (ಲೆಗ್‌ಬೈ 8)
ವಿಕೆಟ್ ಪತನ: 1–0 (ಮರ್ಕರಂ, 0.6), 2–19 (ರಿಯಾನ್ ರಿಕೆಲ್ಟನ್, 8.4), 3–25 (ವಿಯಾನ್ ಮುಲ್ಡರ್, 15.2), 4–30 (ಟ್ರಿಸ್ಟನ್ ಸ್ಟಬ್ಸ್, 20.2)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 7–3–10–2; ಜೋಶ್ ಹ್ಯಾಜಲ್‌ವುಡ್ 7–3–10–1; ಕಮಿನ್ಸ್ 7–3–14–1; ಲಯನ್ 1–0–1–0.



ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಚರ್ಚೆಗೆ ಬಿಸಿಸಿಐ ಸಿದ್ಧತೆ

ವಿಜಯೋತ್ಸವ: ಮಾರ್ಗಸೂಚಿಗೆ ಚಿಂತನೆ

ನವದೆಹಲಿ (ಪಿಟಿಐ): ಐಪಿಎಲ್ ವಿಜಯೋತ್ಸವದ ವೇಳೆ ಅನುಸರಿಸಬೇಕಾದ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮುಂದಾಗಿದೆ. ಇದೇ ಶನಿವಾರ ನಡೆಯಲಿರುವ ಅಪೆಕ್ಸ್ ಕೌನ್ಸಿಲ್ ಸಭೆಯ ಪ್ರಮುಖ ಕಾರ್ಯಸೂಚಿಗಳಲ್ಲಿ ಈ ವಿಷಯವೂ ಒಂದಾಗಿದೆ.

ಜೂನ್ 4 ರಂದು ಆರ್‌ಸಿಬಿಯ ಐಪಿಎಲ್ ಗೆಲುವಿನ ಸಂಭ್ರಮಾಚರಣೆ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಆವರಣದಲ್ಲಿ ಅಭಿಮಾನಿಗಳು ಅಪಾರಸಂಖ್ಯೆಯಲ್ಲಿ ಸೇರಿ ಕಾಲ್ತುಳಿತ ಸಂಭವಿಸಿದ್ದರಿಂದ 11 ಮಂದಿ ಮೃತಪಟ್ಟಿದ್ದರು. 56 ಮಂದಿ ಗಾಯಾಳಾಗಿದ್ದರು.

ಮುನ್ನೆಚ್ಚರಿಕೆ ವಹಿಸಿ ಈ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ನಡೆಸಬೇಕಿತ್ತು ಎಂದು ಬಿಸಿಸಿಐ ಹೇಳಿತ್ತು. ಈಗ ವಿಜಯೋತ್ಸವಗಳಿಗೆ ಮಾರ್ಗಸೂಚಿ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಮಂಡಳಿಯ ಮೂಲವೊಂದು ತಿಳಿಸಿದೆ.

ರಚನೆಯಾಗದ ಆಯೋಜನಾ ಸಮಿತಿ

ನವದೆಹಲಿ (ಪಿಟಿಐ): ಮಹಿಳಾ ಏಕದಿನ ವಿಶ್ವಕಪ್‌ಗೆ ಇನ್ನು ಹೆಚ್ಚು ಸಮಯ ಉಳಿದಿಲ್ಲ. ಆದರೆ ಈ ಐಸಿಸಿ ಟೂರ್ನಿಯನ್ನು ಸುಗಮವಾಗಿ ನಡೆಸುವ ಹೊಣೆ ವಹಿಸಬೇಕಾದ ಸ್ಥಳೀಯ ಆಯೋಜನಾ ಸಮಿತಿಯನ್ನು (ಎಲ್‌ಒಸಿ) ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಇನ್ನೂ ರೂಪಿಸಿಲ್ಲ.

ಈ ಹಿಂದೆ ಮಾರ್ಚ್‌ನಲ್ಲಿ ನಡೆದ ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಸಭೆಯ ಕಾರ್ಯಸೂಚಿಯಲ್ಲಿ ಎಲ್‌ಒಸಿ ರಚನೆಯೂ ಒಳಗೊಂಡಿತ್ತು. ಆದರೆ ಅಂದು ಈ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿರಲಿಲ್ಲ.

ಭಾರತದ ಆತಿಥ್ಯದಲ್ಲಿ ಇದೇ ಸೆಪ್ಟೆಂಬರ್ 30 ರಿಂದ ನವೆಂಬರ್ 2ರವರೆಗೆ ಮಹಿಳಾ ಏಕದಿನ ವಿಶ್ವಕಪ್ ನಡೆಯಬೇಕಾಗಿದೆ. ಈ ವಿಳಂಬವು ಕಳವಳಕ್ಕೆ ಕಾರಣವಾಗಿದೆ. ಈ ತಿಂಗಳ ಆರಂಭದಲ್ಲಿ ಮಂಡಳಿಯು ವಿಶ್ವಕಪ್‌ನ ಭಾಗಶಃ ವೇಳಾಪಟ್ಟಿ ಪ್ರಕಟಿಸಿತ್ತು. ಐದು ಕಡೆ ಪಂದ್ಯಗಳನ್ನು ಆಯೋಜಿಸಲು ನಿರ್ಧರಿಸಿದ್ದು, ಕೊಲಂಬೊ ತಟಸ್ಥ ತಾಣವಾಗಿದೆ.

ಮೂರನೇ ಸ್ಥಾನಕ್ಕೇರಿದ ತಿಲಕ್


ದುಬೈ (ಪಿಟಿಐ): ಭಾರತದ ಎಡಗೈ ಆಟಗಾರ ತಿಲಕ್ ವರ್ಮಾ ಅವರು ಐಸಿಸಿ ಪುರುಷರ ಟಿ20 ಬ್ಯಾಟರ್‌ಗಳ ರ‍್ಯಾಂಕಿಂಗ್ ಪಟ್ಟಿಯಲ್ಲಿ ಒಂದು ಸ್ಥಾನ ಬಡ್ತಿ ಪಡೆದು ಮೂರನೇ ಸ್ಥಾನಕ್ಕೇರಿದ್ದಾರೆ.

ಬುಧವಾರ ಪ್ರಕಟವಾದ ಈ ಪಟ್ಟಿಯ ಬೌಲರ್‌ಗಳ ವಿಭಾಗದಲ್ಲಿ ವರುಣ್ ಚಕ್ರವರ್ತಿ ಮತ್ತು ರವಿ ಬಿಷ್ಣೋಯಿ ಕ್ರಮವಾಗಿ ಮೂರನೇ ಮತ್ತು ಏಳನೇ ಸ್ಥಾನ ಉಳಿಸಿಕೊಂಡಿದ್ದಾರೆ.

ಬ್ಯಾಟರ್‌ಗಳ ಪಟ್ಟಿಯಲ್ಲಿ ಆಸ್ಟ್ರೇಲಿಯಾದ ತಾರೆ ಟ್ರಾವಿಸ್ ಹೆಡ್ (856 ರೇಟಿಂಗ್ ಪಾಯಿಂಟ್) ಮೊದಲ ಸ್ಥಾನದಲ್ಲಿದ್ದರೆ, ಆರಂಭ ಆಟಗಾರ ಅಭಿಷೇಕ್ ಶರ್ಮಾ ಎರಡನೇ ಸ್ಥಾನ (829) ಕಾಪಾಡಿಕೊಂಡಿದ್ದಾರೆ. ತಿಲಕ್ ವರ್ಮಾ 804 ಪಾಯಿಂಟ್ಸ್ ಗಳಿಸಿದ್ದಾರೆ.

ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ (739) ಒಂದು ಸ್ಥಾನ ಕೆಳಕ್ಕೆ ಸರಿದಿದ್ದು ಆರನೇ ಸ್ಥಾನದಲ್ಲಿದ್ದಾರೆ. ಅವರು ಅಗ್ರ 10ರ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಭಾರತದ ಮೂರನೇ ಆಟಗಾರ.


ಅಭಿಷೇಕ್ ಶರ್ಮಾ


ತಿಲಕ್ ವರ್ಮಾ

ಬೌಲರ್‌ಗಳ ಪಟ್ಟಿಯಲ್ಲಿ ಚಕ್ರವರ್ತಿ (706) ಮತ್ತು ಬಿಷ್ಣೋಯಿ (674) ಜೊತೆ ವೇಗದ ಬೌಲರ್ ಅರ್ಷದೀಪ್ ಸಿಂಗ್ (653) ಅವರು ಅಗ್ರ 10ರಲ್ಲಿ ಸ್ಥಾನ ಪಡೆದಿದ್ದಾರೆ. ನ್ಯೂಜಿಲೆಂಡ್‌ನ ವೇಗಿ ಜೇಕಬ್ ಡಫಿ (723) ಅಗ್ರಸ್ಥಾನ ಕಾಪಾಡಿಕೊಂಡಿದ್ದು, ಇಂಗ್ಲೆಂಡ್‌ನ ಸ್ಪಿನ್ನರ್ ಅದಿಲ್ ರಶೀದ್ (710) ಎರಡನೇ ಸ್ಥಾನದಲ್ಲಿದ್ದಾರೆ.

ಹಾರ್ದಿಕ್ ಪಾಂಡ್ಯ ಆಲ್‌ರೌಂಡರ್‌ಗಳ ವಿಭಾಗದಲ್ಲಿ 252 ರೇಟಿಂಗ್ ಪಾಯಿಂಟ್‌ಗಳೊಡನೆ ಅಗ್ರಸ್ಥಾನ ಪಡೆದಿದ್ದಾರೆ.

ಎಫ್‌ಐಎಚ್ ಪ್ರೊ ಲೀಗ್: ರಕ್ಷಣಾ ವಿಭಾಗದ ಪರದಾಟ


ಭಾರತಕ್ಕೆ ಸತತ 3ನೇ ಸೋಲು

ಆಮ್‌ಸ್ಟಲ್ವೀನ್ (ನೆದರ್ಲೆಂಡ್ಸ್) (ಪಿಟಿಐ): ಅರ್ಜೆಂಟೀನಾ ತಂಡವು ಎಫ್‌ಐಎಚ್ ಪ್ರೊ ಲೀಗ್ ಯುರೋಪಿಯನ್ ಲೆಗ್‌ನ ಪಂದ್ಯದಲ್ಲಿ ಬುಧವಾರ ಭಾರತ ತಂಡವನ್ನು 4–3 ಗೋಲುಗಳಿಂದ ಸೋಲಿಸಿತು. ರಕ್ಷಣಾ ವಿಭಾಗದಲ್ಲಿ ಆದ ತಪ್ಪುಗಳು ಭಾರತಕ್ಕೆ ದುಬಾರಿಯಾದವು.

ಇದು ಭಾರತ ತಂಡಕ್ಕೆ ಸತತ ಮೂರನೇ ಸೋಲು. ಒಲಿಂಪಿಕ್ ಚಾಂಪಿಯನ್ ನೆದರ್ಲೆಂಡ್ಸ್ ವಿರುದ್ಧ ಈ ಹಿಂದಿನ ಎರಡು ಪಂದ್ಯಗಳನ್ನು ಕ್ರಮವಾಗಿ 1–2 ಮತ್ತು 2–3ರಲ್ಲಿ ಸೋತಿತ್ತು.

ಬುಧವಾರದ ಪಂದ್ಯದಲ್ಲಿ ಅರ್ಜೆಂಟೀನಾ ಆಕ್ರಮಣದ ಆಟದ ಮುಂದೆ ಭಾರತದ ರಕ್ಷಣಾ ವಿಭಾಗ ಗಲಿಬಿಲಿಗೊಂಡಿತು. ನಾಯಕ ಮಥಾಯಸ್ ರೇ (3ನೇ ನಿಮಿಷ), ಲುಕಾಸ್ ಮಾರ್ಟಿನೆಝ್ (17ನೇ ನಿಮಿಷ), ಸಾಂಟಿಯಾಗೊ ತರರ್ಘೋನಾ (34ನೇ ನಿಮಿಷ) ಮತ್ತು ಲುಸಿಯೊ ಮೆಂಡೆಝ್ (46ನೇ ನಿಮಿಷ) ಅವರು ಗೋಲುಗಳನ್ನು ಗಳಿಸಿದರು.

ಭಾರತ ತಂಡದ ಪರ ನಾಯಕ ಹರ್ಮನ್‌ಪ್ರೀತ್ ಸಿಂಗ್ (12 ಮತ್ತು 33ನೇ ನಿಮಿಷ) ಮತ್ತು ಅಭಿಷೇಕ್ (42ನೇ ನಿಮಿಷ) ಚೆಂಡನ್ನು ಗುರಿಮುಟ್ಟಿಸಿದರು.


ಹರ್ಮನ್‌ಪ್ರೀತ್ ಸಿಂಗ್ ಪಿಟಿಐ ಚಿತ್ರ

ಭಾರತ ಗುರುವಾರ ನಡೆಯುವ 'ರಿಟರ್ನ್ ಲೆಗ್' ಪಂದ್ಯದಲ್ಲಿ ಮತ್ತೆ ಅರ್ಜೆಂಟೀನಾವನ್ನು ಎದುರಿಸಲಿದೆ.

ಭಾರತ ಮೊದಲ ಕ್ವಾರ್ಟರ್‌ನ ಹೆಚ್ಚಿನ ಅವಧಿಯಲ್ಲಿ ಚೆಂಡಿನ ನಿಯಂತ್ರಣ ಪಡೆದಿತ್ತು. ಆದರೂ ಮೂರನೇ ನಿಮಿಷವೇ ಅರ್ಜೆಂಟೀನಾ ತಂಡ ಮಥಾಯಸ್ ಮೂಲಕ ಮುನ್ನಡೆಯಿತು. ಇದಕ್ಕೆ ಅಮಿತ್ ರೋಹಿದಾಸ್ ಅವರಿಂದಾದ ತಪ್ಪು ಕೂಡ ಕಾಣಿಕೆ ನೀಡಿತು.

12ನೇ ನಿಮಿಷ ಹರ್ಮನ್‌ಪ್ರೀತ್ ತಂಡಕ್ಕೆ ದೊರೆತ ಮೊದಲ ಪೆನಾಲ್ಟಿ ಕಾರ್ನರನ್ನು ಗೋಲಾಗಿ ಪರಿವರ್ತಿಸಿದರು. ಮೊದಲ 15 ನಿಮಿಷಗಳ ನಂತರ ಸ್ಕೋರ್ 1–1 ಸಮಬಲ ಆಗಿತ್ತು.

ಎರಡನೇ ಕ್ವಾರ್ಟರ್‌ನಲ್ಲಿ ಅರ್ಜೆಂಟೀನಾ ಉತ್ತಮ ಆಟವಾಡಿತು. ಲುಕಾಸ್ ಈ ಅವಧಿಯ ಎರಡನೇ ನಿಮಿಷವೇ ತಂಡಕ್ಕೆ ಮತ್ತೆ ಮುನ್ನಡೆ ಒದಗಿಸಿದರು. ಅಮಿತ್ ಅವರಿಂದ ಮತ್ತೊಮ್ಮೆ ಲೋಪವಾಯಿತು.

ವಿರಾಮ ಕಳೆದು ಮೂರು ನಿಮಿಷಗಳ ನಂತರ ಹರ್ಮನ್‌ಪ್ರೀತ್ ಅವರ ಮೂಲಕ ಭಾರತ ಸ್ಕೋರ್ ಸಮಬಲ ಮಾಡಿಕೊಂಡಿತು. ಅವರು ಪೆನಾಲ್ಟಿ ಸ್ಟ್ರೋಕ್ ಅವಕಾಶದಲ್ಲಿ ಎಡವಲಿಲ್ಲ. ಆದರೆ ಪ್ರತಿದಾಳಿ ನಡೆಸಿದ ಅರ್ಜೆಂಟೀನಾ ಒಂದೇ ನಿಮಿಷದಲ್ಲಿ ತರರ್ಘೋನಾ ಮೂಲಕ ಮುನ್ನಡೆ ಪಡೆಯಿತು. 39ನೇ ನಿಮಿಷ ಭಾರತಕ್ಕೆ ಎರಡನೇ ಪೆನಾಲ್ಟಿ ಕಾರ್ನರ್ ದೊರೆತರೂ ಅದರಿಂದ ಲಾಭವಾಗಲಿಲ್ಲ.

42ನೇ ನಿಮಿಷ ಜರ್ಮನ್‌ಪ್ರೀತ್ ಸಿಂಗ್ ಅವರು ಗೋಲಿನತ್ತ ಹೊಡೆದ ಚೆಂಡು ಅರ್ಜೆಂಟೀನಾ ಗೋಲ್‌ಕೀಪರ್ ಥಾಮಸ್ ಸಾಟಿಯಾಗೊ ತಡೆದರು; ಆದರೆ ರಿಬೌಂಡ್ ಆದ ಚೆಂಡನ್ನು ಅಭಿಷೇಕ್ ಗುರಿತಲುಪಿಸಿದರು.

ಆದರೆ ಕೊನೆಯ ಕ್ವಾರ್ಟರ್‌ನ ಆರಂಭದಲ್ಲೇ ಮೆಂಡೆಝ್ ಅರ್ಜೆಂಟೀನಾಕ್ಕೆ ನಿರ್ಣಾಯಕ ಮುನ್ನಡೆ ಒದಗಿಸಿದರು. ಭಾರತದ ಬ್ಯಾಕ್‌ಲೈನ್ ರಕ್ಷಣೆಯಲ್ಲಿ ಆದ ತಪ್ಪಿನ ಲಾಭವನ್ನು ಅವರು ಪಡೆದರು.

ಸಂಕ್ಷಿಪ್ತ ಸುದ್ದಿ

ಶೂಟಿಂಗ್ ವಿಶ್ವಕಪ್ ಮನು ಭಾಕರ್‌ಗೆ ಆರನೇ ಸ್ಥಾನ

ಮ್ಯೂನಿಕ್ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ಪದಕ ವಿಜೇತೆ ಮನು ಭಾಕರ್ ಮತ್ತು ಅನುಭವಿ ಶೂಟರ್ ಚೈನ್ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ತಮ್ಮ ತಮ್ಮ ಸ್ಪರ್ಧೆಗಳಲ್ಲಿ ಫೈನಲ್ ತಲುಪಿದರು. ಆದರೆ, ಅವರಿಗೆ ಪದಕ ಜಯಿಸಲು ಸಾಧ್ಯವಾಗಲಿಲ್ಲ.


ಮನು ಭಾಕರ್

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎರಡು ಕಂಚಿನ ಪದಕ ಗೆದ್ದ ಭಾಕರ್ ಅವರು ಬುಧವಾರ ನಡೆದ ಮಹಿಳೆಯರ 25 ಮೀಟರ್ ಪಿಸ್ತೂಲ್ ಸ್ಪರ್ಧೆಯ ಫೈನಲ್‌ನಲ್ಲಿ ಆರನೇ ಸ್ಥಾನ ಗಳಿಸಿದರು. ಅವರು ಅರ್ಹತಾ ಸುತ್ತಿನಲ್ಲಿ 588 ಅಂಕ ಪಡೆದು ಐದನೇ ಸ್ಥಾನದೊಂದಿಗೆ ಫೈನಲ್ ತಲುಪಿದ್ದರು.

ಪುರುಷರ 50 ಮೀಟರ್ ರೈಫಲ್ 3-ಪೊಸಿಷನ್ಸ್ ಸ್ಪರ್ಧೆಯ ಎಂಟು ಶೂಟರ್‌ಗಳ ಪದಕ ಸುತ್ತಿನಲ್ಲಿ ಚೈನ್ ಅವರು ಏಳನೇ ಸ್ಥಾನ ಪಡೆದರು. ಅವರು (592) ಅರ್ಹತಾ ಸುತ್ತಿನಲ್ಲೂ ಏಳನೇ ಸ್ಥಾನ ಗಳಿಸಿದ್ದರು. ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಸ್ವಪ್ನಿಲ್ ಕುಸಾಲೆ (587) ಮತ್ತು ಅಂಕುಶ್ ಜಾಧವ್ (580) ಕ್ರಮವಾಗಿ 38ನೇ ಮತ್ತು 67ನೇ ಸ್ಥಾನ ಪಡೆದರು.

ಕೊಹ್ಲಿ ವಿದಾಯ: ರವಿಶಾಸ್ತ್ರಿ ಬೇಸರ

ನವದೆಹಲಿ (ಪಿಟಿಐ): ವಿರಾಟ್ ಕೊಹ್ಲಿ ಅವರ ಟೆಸ್ಟ್ ನಿವೃತ್ತಿ ವಿಷಯವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಬೇಕಿತ್ತು. ಅವರು ಗೌರವಪೂರ್ವಕ ವಿದಾಯಕ್ಕೆ ಅರ್ಹರಾಗಿದ್ದರು ಎಂದು ಭಾರತ ತಂಡದ ಮಾಜಿ ಕೋಚ್ ರವಿಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ.

'ಕೊಹ್ಲಿ ಅವರು ಅಂತರರಾಷ್ಟ್ರೀಯ ಟೆಸ್ಟ್ ಕ್ರಿಕೆಟ್‌ಗೆ ಏಕಾಏಕಿ ವಿದಾಯ ಹೇಳಿದ್ದು ನನಗೆ ನೋವುಂಟು ಮಾಡಿದೆ. ಅವರು ವಿದಾಯ ಘೋಷಿಸಿದ ರೀತಿಯೂ ಬೇಸರ ಮೂಡಿಸಿದೆ. ನಿವೃತ್ತಿಯ ವಿಚಾರವನ್ನು ಇನ್ನಷ್ಟು ಉತ್ತಮವಾಗಿ ನಿಭಾಯಿಸಬೇಕಿತ್ತು' ಎಂದು ಸೋನಿಲಿವ್‌ಗೆ ನೀಡಿದ ಸಂದರ್ಶನದಲ್ಲಿ ರವಿಶಾಸ್ತ್ರಿ ಹೇಳಿದ್ದಾರೆ.

'ನನಗೆ ಅವಕಾಶವಿದ್ದರೆ, ಕೊಹ್ಲಿ ಅವರನ್ನು ಆಸ್ಟ್ರೇಲಿಯಾ ಪ್ರವಾಸದ ನಂತರ ತಂಡದ ನಾಯಕನನ್ನಾಗಿ ಮಾಡುತ್ತಿದ್ದೆ' ಎಂದೂ ಅವರು ಹೇಳಿದ್ದಾರೆ.

ಭಾಂಬ್ರಿ– ಗ್ಯಾಲೊವೆ ಜೋಡಿಗೆ ಸೋಲು

ಸ್ಟುಟ್‌ಗಾರ್ಟ್ (ಪಿಟಿಐ): ಭಾರತದ ಅಗ್ರ ಡಬಲ್ಸ್ ಆಟಗಾರನಾಗಿರುವ ಯುಕಿ ಭಾಂಬ್ರಿ ಮತ್ತು ಅವರ ಅಮೆರಿಕದ ಜೊತೆಗಾರ ರಾಬರ್ಟ್ ಗ್ಯಾಲೊವೆ ಅವರು ಬಾಸ್ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಸೋಲುವ ಮೊದಲು ತೀವ್ರ ಪ್ರತಿರೋಧ ಪ್ರದರ್ಶಿಸಿದರು.

ಮಂಗಳವಾರ ನಡೆದ ಪಂದ್ಯದಲ್ಲಿ ಇಂಡೊ– ಅಮೆರಿಕನ್ ಜೋಡಿ 6–7 (5), 6–7 (5) ರಿಂದ ಸ್ಯಾಂಟಿಯಾಗೊ ಗೊನ್ಸಾಲ್ವೆಝ್ (ಮೆಕ್ಸಿಕೊ)– ಆಸ್ಟಿನ್ ಕ್ರಾಯಿಚೆಕ್ ಜೋಡಿಗೆ ಮಣಿಯಿತು. ಈ ಪಂದ್ಯ 1 ಗಂಟೆ 34 ನಿಮಿಷ ನಡೆಯಿತು.

ಅನುಭವಿ ರೋಹನ್ ಬೋಪಣ್ಣ– ಸ್ಯಾಂಡರ್ಸ್ ಗಿಲ್ (ಬೆಲ್ಜಿಯಂ) ಜೋಡಿ, ಶ್ರೀರಾಮ್ ಬಾಲಾಜಿ– ಮಿಗೆಲ್ ರೆಯಿಸ್ ವರೆಲಾ (ಮೆಕ್ಸಿಕೊ) ಜೋಡಿ ಕೂಡ ಈ ಟೂರ್ನಿಯಲ್ಲಿ ಕಣಕ್ಕಿಳಿದಿದೆ.